Over 30 Years of Celebrating the Arts

India Foundation for the Arts

I F A

ಕಲಿ-ಕಲಿಸು

AN ARTS EDUCATION TEACHER INITIATIVE

KALI-KALISU

INTERGLOBE FOUNDATION



# ಹೆಜ್ಜೆಗಳು

## ಸರ್ಕಾರಿ ಶಾಲೆಗಳಲ್ಲಿ

### ಕಲಾ ಅಂತರ್ಗತ ಪ್ರಯೋಗಗಳು

2023-24 & 2024-25

Over 30 Years of Celebrating the Arts

India Foundation for the Arts

I F A

ಕಲಿ-ಕಲಿಸು

AN ARTS EDUCATION TEACHER INITIATIVE

KALI KALISU

# ಹೆಜ್ಜೆಗಳು

## ಸರ್ಕಾರಿ ಶಾಲೆಗಳಲ್ಲಿ

### ಕಲಾ ಅಂತರ್ಗತ ಪ್ರಯೋಗಗಳು

2023-24 & 2024-25

INTERGLOBE FOUNDATION

This publication is made possible with support from InterGloble Foundation

**Kali Kalisu Hejjegalu:**
**A snapshot of our arts integrated interventions in**
**Government School Karnataka during 2023-2025**
**Complied by: Bharathi A. & Sunil Ajjavara**

**India Foundation For Arts**
**'Apurva' Ground Floor, No 259, 4th Cross,**
**Raj Mahal Vilas, 2nd Stage, 2nd Block, Bengaluru**
**India - 560 094**
**Tel: 91-80-2341 4681 / 82 / 83**

| | | |
|---|---|---|
| ಸಂಪಾದಕರು | : | ಭಾರತಿ ಎ. ಮತ್ತು ಸುನಿಲ್ ಅಜ್ಜಾವರ |
| ಪ್ರಥಮ ಮುದ್ರಣ | : | 2025 |
| ಹಕ್ಕುಗಳು | : | ಐಎಫ್‌ಎ, ಬೆಂಗಳೂರು |
| ಪುಟಗಳು | : | 80 |
| ಆಕಾರ | : | 1/8 ಡೆಮಿ |
| ಕಾಗದ | : | 100 ಜಿಎಸ್‌ಎಂ ಆರ್ಟ್‌ಪೇಪರ್ |
| ಪುಸ್ತಕ ವಿನ್ಯಾಸ | : | ಎಸ್. ಕಲಾಧರ |
| ಮುದ್ರಣ | : | |

**ಶುಭ ಸಂದೇಶ**

v ಮೇನಕಾ ರೋಡ್ರಿಗೇಜ್

**ಅವಲೋಕನ**

vi ಕೃಷ್ಣಮೂರ್ತಿ ಟಿ.ಎನ್.

**ಅವಲೋಕನ**

viii ರಾಧಿಕಾ ಭಾರಧ್ವಾಜ್

**ಸಂಪಾದಕೀಯ**

x ಭಾರತಿ ಎ. ಮತ್ತು ಸುನಿಲ್ ಅಜ್ಜಾವರ

**2023–24 ಶಿಕ್ಷಕರ ಯೋಜನೆ**

12 ಆನಂದ ಕುಲಾಲ್
14 ರಾಮಚಂದ್ರ ಭಟ್
16 ರವಿ ಸೋ. ದೇವರೆಡ್ಡಿ
18 ಬಾಲನಾಗಮ್ಮ ದಾಸರ
20 ಜಲಜಾಕ್ಷಿ ಕೆ.ಡಿ.
22 ಮಲ್ಲಿಕಾರ್ಜುನ ವಿ. ಕೋರಳ್ಳಿ

**2023–24 ಕಲಾವಿದರ ಯೋಜನೆ**

24 ಉಜ್ವಲ್ ಯು.ವಿ.
26 ಗಿರೀಶ್ ಕೆ.ಆರ್.
28 ಪೃಥ್ವಿನ್ ಕೆ.
30 ವಿನೀತ್ ಕುಮಾರ್ ಎಂ.
32 ಉಷಾ ಜಿ.ಎ.

**2023–24 ರಾಷ್ಟ್ರೀಯ ಶಾಲೆಗಳ ಯೋಜನೆ**

34 ಇಂಟರ್‌ನ್ಯಾಷನಲ್ ಎಜುಕೇಶನಲ್ ಇನ್‌ಸ್ಟಿಟ್ಯೂಟ್, ಕಾಶ್ಮೀರ
36 ದೇಹತ್ ಉತ್ಥಾನ್ & ಕಲ್ಚರಲ್ ಸೊಸೈಟಿ, ದೆಹಲಿ
38 'ಅರಿವು' ಶಿಕ್ಷಣ ಸಂಸ್ಥೆ, ಕರ್ನಾಟಕ

## 2024–25 ಶಿಕ್ಷಕರ ಯೋಜನೆ


40 ಗಂಗಣ್ಣ ವಂದಾಲಿ
42 ಡಾ. ಲಿಂಗರಾಜ ರಾಮಾಪೂರ
44 ಪೂರ್ಣೇಶ್ ಎಂ.ಎಂ.
46 ಸಕ್ಕು ರಾಯಣ್ಣವರ್
48 ಶಾಂತಗೌಡ ಮರಿಗೌಡರ
50 ಭಾನುಪ್ರಕಾಶ


## 2024–25 ಕಲಾವಿದರ ಯೋಜನೆ


52 ಅಕ್ಕಮ್ಮ
54 ಇನ್ಸಾಫ್
56 ಲಾಲ್‌ಸಾಬ್ ನದಾಫ್
58 ಕೆ.ವಿ. ನಾಯಕ್
60 ಹರೀಶ ದೊಡ್ಮನಿ
62 ಅರ್ಜುನ್ ಹುಣಸೂರು


## 2024–25 ರಾಷ್ಟ್ರೀಯ ಶಾಲೆಗಳ ಯೋಜನೆ


64 ಪಟೇಲ್ ಮೋತಿಲಾಲ್ ಠಾಕೂರ್ ಮೆಮೋರಿಯಲ್ ಶಾಲೆ, ಮಧ್ಯಪ್ರದೇಶ
66 ಘಾಸಿಯಾರ ವಿದ್ಯಾಪೀಠ ಸಂಸ್ಥೆ, ಪಶ್ಚಿಮ ಬಂಗಾಳ
68 ಭಾರತೀಯ ವಿದ್ಯಾನಿಕೇತನ ವಿದ್ಯಾಸಂಸ್ಥೆ, ಒಡಿಶಾ


## ಕಾರ್ಯಕ್ರಮಗಳು


70 ತರಬೇತಿಗಳು
72 ಕಲಾಯಾತ್ರೆಗಳು
74 ಸಮಾವೇಶಗಳು


## ಪ್ರಕಟಣೆ


76 ಶಿಕ್ಷಕರ ಪ್ರಸ್ತಾವನೆಗಳ ಆಹ್ವಾನ
78 ಕಲಾವಿದರ ಪ್ರಸ್ತಾವನೆಗಳ ಆಹ್ವಾನ
80 ಪತ್ರಿಕಾ ವರದಿಗಳು



**ಮೋನಿಕಾ ರೋಡ್ರಿಗಸ್**
ಮುಖ್ಯಸ್ಥರು, ಐಎಫ್ಎ, ಬೆಂಗಳೂರು

ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್, ಕಲಾ ಶಿಕ್ಷಣ ಕಾರ್ಯಕ್ರಮವಾದ 'ಕಲಿ ಕಲಿಸು'ವಿನ ಮೂಲ ಉದ್ದೇಶ, ಕಲಿಯುವ ಮತ್ತು ಹಂಚಿಕೊಳ್ಳುವ ಸಾಮೂಹಿಕ ಪ್ರಕ್ರಿಯೆಯನ್ನು ಪ್ರೋತ್ಸಾಹಿಸುವುದು ಹಾಗೂ ಶಿಕ್ಷಣದಲ್ಲಿ ಆನಂದಕ್ಕೆ ಒತ್ತು ನೀಡುವುದಾಗಿದೆ.

ನಮ್ಮ ಈ ಕಾರ್ಯಕ್ರಮದ ವಿವಿಧ ಯೋಜನೆಗಳು, ವಿದ್ಯಾರ್ಥಿಗಳ ಬದುಕಿನ ಅನುಭವಗಳು, ಇತಿಹಾಸಗಳು, ಸಮುದಾಯದ ಆಚರಣೆಗಳನ್ನು ತರಗತಿಯೊಳಗೆ ತರುವ ಮೂಲಕ ಕಲಿಕೆಯ ಅನುಭವವನ್ನು ಶ್ರೀಮಂತಗೊಳಿಸುತ್ತವೆ. ಇದು ಕಲಿಕೆಯನ್ನು ಇನ್ನಷ್ಟು ಅರ್ಥಪೂರ್ಣವಾಗಿಸುವುದಲ್ಲದೆ, ವಿದ್ಯಾರ್ಥಿಗಳು ಪೋಷಿಸಲ್ಪಟ್ಟ ಮತ್ತು ಪರಸ್ಪರ ಬೆರೆತ ಭಾವನೆಯನ್ನು ಹೊಂದುವಂತೆ ಶಾಲೆಯ ಸುತ್ತಲೂ ಒಂದು ಸಮುದಾಯವನ್ನು ಕಟ್ಟಲು ನಮಗೆ ಅನುವು ಮಾಡಿಕೊಡುತ್ತದೆ. ಈ ಯೋಜನೆಗಳ ಮೂಲಕ ಶಿಕ್ಷಕರು, ಕಲಾವಿದರು ಮತ್ತು ಶಾಲೆಗಳು ನಮಗೆ ಪರ್ಯಾಯ ದೃಷ್ಟಿಕೋನಗಳು ಹಾಗೂ ಅರ್ಥಪೂರ್ಣವಾದ ಕಲಾ ಶಿಕ್ಷಣ ಬೋಧನಾಕ್ರಮವನ್ನು ಅಭಿವೃದ್ಧಿಪಡಿಸುವ ಮಾರ್ಗಗಳ ಬಗ್ಗೆ ಒಳನೋಟಗಳನ್ನು ನೀಡುತ್ತವೆ. ಈ ಯೋಜನೆಗಳು ತರಗತಿಯ ಶಿಕ್ಷಣವನ್ನು ವಿಸ್ತರಿಸಿ ಹೊಸತನವನ್ನು ಕಂಡುಕೊಂಡಿವೆ. ಇವು ವಿದ್ಯಾರ್ಥಿಗಳ ಸೃಜನಶೀಲತೆ ಮತ್ತು ವೈಯಕ್ತಿಕ ಸಾಮರ್ಥ್ಯಗಳನ್ನು ಪೋಷಿಸಿ, ಅವರನ್ನು ಅವರ ಸುತ್ತಲಿನ ಸಮುದಾಯ ಮತ್ತು ಪರಿಸರದೊಂದಿಗೆ ಸಂಪರ್ಕಿಸುವ ವಿವಿಧ ಕಲಾ ಪ್ರಕಾರಗಳ ಮೂಲಕ ಶಿಕ್ಷಣದ ಆವರಣವನ್ನೇ ಮಾರ್ಪಡಿಸಿವೆ. ಆ ಮೂಲಕ, ನಿರಂತರ ಕಲಿಕೆಯನ್ನು ಪೋಷಿಸುವ ಐಎಫ್ಎಯ ದೃಢವಾದ ನಂಬಿಕೆಯನ್ನು ಇವು ಪುಷ್ಟೀಕರಿಸಿವೆ.

ಈ ಕಲಾ ಮಧ್ಯಸ್ಥಿಕೆಗಳು ನಮ್ಮನ್ನು ಶ್ರೀಮಂತಗೊಳಿಸುತ್ತವೆ, ನಮ್ಮ ಮೌಲ್ಯಗಳನ್ನು ಆಳವಾಗಿಸುತ್ತವೆ, ಕುತೂಹಲವನ್ನು ಹುಟ್ಟುಹಾಕುತ್ತವೆ ಮತ್ತು ಪರಸ್ಪರ ಸಂಬಂಧವನ್ನು ಬೆಳೆಸಲು ಸಹಾಯ ಮಾಡುತ್ತವೆ. ಇದೆಲ್ಲವನ್ನೂ ಸಾಧ್ಯವಾಗಿಸುವಲ್ಲಿ ಶಿಕ್ಷಕರು, ಕಲಾವಿದರು, ಸಂಪನ್ಮೂಲ ವ್ಯಕ್ತಿಗಳು ಮತ್ತು ಶಾಲಾ ಆಡಳಿತ ಮಂಡಳಿಯು ಪ್ರಮುಖ ಪಾಲುದಾರರಾಗಿದ್ದಾರೆ. ನಮ್ಮ ಕಳೆದ ಎರಡು ವರ್ಷಗಳ ಕೆಲಸದ ಈ ಮಾದರಿ ಪಯಣಗಳು, ಸಂಭಾಷಣೆಗಳು, ಅನ್ವೇಷಣೆಗಳು ಮತ್ತು ವಿನಿಮಯಗಳನ್ನು ಪ್ರದರ್ಶಿಸಲು ನಮಗೆ ಅತೀವ ಸಂತೋಷವಾಗುತ್ತಿದೆ.

ನಮ್ಮ ಎಲ್ಲಾ ಪಾಲುದಾರ ಶಿಕ್ಷಕರು, ಕಲಾವಿದರು, ಶಾಲೆಗಳು ಮತ್ತು ಸಂಪನ್ಮೂಲ ವ್ಯಕ್ತಿಗಳಿಗೆ ಅವರ ಯೋಜನೆಗಳು ಮತ್ತು ಕೆಲಸಗಳಲ್ಲಿ ಯಶಸ್ಸು ಸಿಗಲಿ ಎಂದು ನಾನು ಹಾರೈಸುತ್ತೇನೆ. ಸಂಪಾದಕರಾಗಿ ಜವಾಬ್ದಾರಿಯನ್ನು ವಹಿಸಿಕೊಂಡ ಭಾರತಿ ಮತ್ತು ಸುನಿಲ್ ಅವರಿಗೆ ಹಾಗೂ ಈ ಸಂಚಿಕೆಯನ್ನು ವಿನ್ಯಾಸಗೊಳಿಸಲು ಬೆಂಬಲ ನೀಡಿದ ಕಲಾಧರ್ ಎಸ್. ಅವರಿಗೆ ನಾನು ಆಳವಾಗಿ ಆಭಾರಿಯಾಗಿದ್ದೇನೆ. ಐಎಫ್ಎ ತಂಡದ ನಮಗೆಲ್ಲರಿಗೂ, ಮತ್ತು ವಿಶೇಷವಾಗಿ ಕೃಷ್ಣ ಮತ್ತು ರಾಧಿಕಾ ಅವರಿಗೆ ಮುಂದಿನ ಪಯಣ ಸಂತಸದಾಯಕವಾಗಿರಲಿ ಎಂದು ಹಾರೈಸುತ್ತೇನೆ.

**ಕೃಷ್ಣಮೂರ್ತಿ ಟಿ.ಎನ್.**
ಹಿರಿಯ ಕಾರ್ಯಕ್ರಮ ಅಧಿಕಾರಿ, ಕಲಾಶಿಕ್ಷಣ
ಐಎಫ್ಎ, ಬೆಂಗಳೂರು



**ಕಲಿ ಕಲಿಸು; ಪರ್ಯಾಯ ಚಿಂತನೆಗಳಿಗೆ ಒಂದು ವೇದಿಕೆ**

ಕಲಿಕೆಗೆ ಸಂಬಂಧಿಸಿದ ಅನೇಕ ಸಮಸ್ಯೆಗಳು ದಿನದಿನವೂ ಹೆಚ್ಚುತ್ತಿವೆ. ಸಹಿಸಲಾರದ ಪೈಪೋಟಿ, ಪಂದ್ಯ ಗೆಲ್ಲುವುದೇ ಮುಖ್ಯ ಎನ್ನುವ ಈ ಕಾಲದಲ್ಲಿ ಶಿಕ್ಷಣದ ಅನುಭವವೂ ಕೂಡ ಪಂದ್ಯದಾಟ ಆಗಿರುವುದು ಬಹಳ ದುರಾದೃಷ್ಟಕರ ಮತ್ತು ಆತಂಕ ಪಡಬೇಕಾದ ವಿಷಯ.

ಇಂದಿನ ಶಿಕ್ಷಣ ಸಾಗುತ್ತಿರುವ ದಾರಿ, ಅದು ಪಡೆಯುತ್ತಿರುವ ಊಹಿಸಲಾಗದ ತಿರುವುಗಳು ಮತ್ತದರ ವೇಗವನ್ನು ಗಮನಿಸಿದರೆ, ವರ್ತಮಾನದ ಶಾಲಾ–ಕಾಲೇಜುಗಳು, ಅಲ್ಲಿ ಬೋಧಿಸುವ ಶಿಕ್ಷಕರು ಮತ್ತು ಶಿಕ್ಷಣ ವ್ಯವಸ್ಥೆಗಳು ಇನ್ನು ಮುಂದಿನ ದಿನಗಳಲ್ಲಿ ಇರಲಾರವೇನೋ ಎಂದೆನಿಸುತ್ತಿದೆ. ಈಗಾಗಲೇ ಶಾಲಾ–ಕಾಲೇಜುಗಳ ಕಪ್ಪುಹಲಗೆಗಳು ನೇಪಥ್ಯಕ್ಕೆ ಸರಿದು, ಪ್ರೊಜೆಕ್ಟರ್‌ಗಳ ಸಹಾಯದಿಂದ ಬಿಳಿ ಪರದೆಗಳ ಮೇಲೆ ಧ್ವನಿ–ಚಿತ್ರಗಳ ಮೂಲಕ ವಿದ್ಯಾರ್ಥಿಗಳ ಜ್ಞಾನ ವೃದ್ಧಿಸುವ ಪ್ರಯೋಗಗಳು ಸಾಗುತ್ತಿವೆ. ವ್ಯಾಪಾರೀಕರಣಗೊಂಡ ಖಾಸಗಿ ಶಿಕ್ಷಣ ಸಂಸ್ಥೆಗಳು ಒಂದು ಕಡೆಯಾದರೆ, ಉದಾಸೀನ ಪ್ರವೃತ್ತಿಯ ಸರ್ಕಾರೀ ಕೃಪೆಯ ಶಾಲಾ ಕಾಲೇಜುಗಳ ಅನುತ್ತೇಜಕ ನಡೆ ಇನ್ನೊಂದು ಕಡೆ. ಒಂದು ವರ್ಷದ ಪಠ್ಯಗಳ ಓದನ್ನು ಪರೀಕ್ಷಾ ದೃಷ್ಟಿಯಿಂದ ಒಂದೆರಡು ತಿಂಗಳಲ್ಲೇ ಕಲಿಸಿ ವಿದ್ಯಾರ್ಥಿಗಳನ್ನು ಸಿದ್ಧಪಡಿಸುವ ಪಾಠದ ಮನೆ/ಖಾಸಗಿ ಸಂಸ್ಥೆಗಳು ಹುಟ್ಟಿಕೊಂಡಿವೆ. ಸರ್ಕಾರದ ಸೇವೆಗಳಿಗೆ, ಕಂಪೆನಿಗಳ ಕೆಲಸಗಳಿಗೆ, ಕೈಗಾರಿಕಾ ವಲಯಗಳಲ್ಲಿ ಅಗತ್ಯವಿರುವ ಏಕ ರೀತಿಯ ಕಾರ್ಯಗಳಿಗೆ ಬ್ರಿಟೀಷರಿಂದ ಅಂಕುರಗೊಂಡ ಶಿಕ್ಷಣ ಪದ್ಧತಿಯೇ ಇಂದೂ ನಿರಾತಂಕವಾಗಿ ಸಾಗಿ ಬಂದಿದೆ ಮತ್ತು ಯಶಸ್ವೀ ಒಂದೂವರೆ ಶತಮಾನಗಳನ್ನು ಕಂಡಿದೆ! ಸೃಜನಾತ್ಮಕ ಕಲಿಕೆಯ ಅರಿವು ಇಂದಿನ ಶಿಕ್ಷಣ ವ್ಯವಸ್ಥೆಗೆ ಇಲ್ಲದಿರುವುದು ವಸಾಹತುಶಾಹಿಯ ಕಾಲದ ಅಳಿಸಲಾಗದ ಕುರುಹುಗಳಂತೆ ಭಾಸವಾಗುತ್ತಿದೆ.

ವಿದ್ಯಾರ್ಥಿಗಳ ಅಭಿರುಚಿ, ಕೌಶಲ, ಶಕ್ತಿಗಳನ್ನು ಪರೀಕ್ಷಿಸಿ ಮುಂದಿನ ಶಿಕ್ಷಣದ ದಾರಿಯ ಮಾರ್ಗದರ್ಶನ ಮಾಡುವ ಅಥವಾ ಸಲಹೆ ಕೊಡುವ ನೀತಿ ರೂಪುಗೊಳ್ಳಬೇಕಾಗಿದೆ. ಇದನ್ನು ಗಮನಿಸಿದರೆ ನಮಗನ್ನಿಸುವುದು, ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಅದರಲ್ಲೂ ಶಾಲಾ ಕೊಠಡಿಗಳಲ್ಲಿ ನಡೆಯುವ ಬೋಧನಾ ಕ್ರಮಗಳಲ್ಲಿ ಹೊಸತನವನ್ನು ಅಳವಡಿಸಿಕೊಳ್ಳುವುದು ಅತ್ಯವಶ್ಯಕ ನಡೆಯಾಗಿದೆ.

12ನೇ ಶತಮಾನದಲ್ಲಿದ್ದ ಅಮೀರ್ ಖುಸ್ರೋ ಅಂದಿನ ಭಾರತೀಯ ಶಿಕ್ಷಣದ ಮಹತ್ವವನ್ನು ಹೀಗೆ ತಿಳಿಸಿದ್ದಾನೆ, “ವಿಶ್ವದ ಮೂಲೆಮೂಲೆಗಳಿಂದ ಹೆಚ್ಚಿನ ಜ್ಞಾನ ಸಂಪಾದನೆಗಾಗಿ ಜನರು ಭಾರತಕ್ಕೆ ಬರುತ್ತಿದ್ದರೇ ಹೊರತು,

ಭಾರತೀಯರು ವಿದ್ಯೆಯನ್ನರಸಿ ಹೊರದೇಶಗಳಿಗೆ ಹೋಗುವ ಅಗತ್ಯವಿರಲಿಲ್ಲ"ಭಾರತದ ಮಟ್ಟಿಗೆ ಹೇಳುವುದಾದರೆ ನಮ್ಮ ಕಣ್ಣ ಮುಂದೆ ಬರುವುದು ರವೀಂದ್ರನಾಥ್ ಟಾಗೋರ್‌ರವರ ಶಾಂತಿನಿಕೇತನ. ಅವರು ಶಿಕ್ಷಣದಲ್ಲಿ ಅಳವಡಿಸಿದ ಹೊರಾಂಗಣ ಪರಿಸರದಲ್ಲಿ ಪಾಠ ಕಲಿಕೆ, ನಾಟ್ಯ, ಸಂಗೀತ, ಕಲೆಗಳು, ಮರಕೆಲಸ, ಒಂದೇ ಎರಡೇ! ಹಿಂದೆ ಕರ್ನಾಟಕದಲ್ಲಿ ಶಿವರಾಮ ಕಾರಂತರು ಆರಂಭಿಸಿ ನಡೆಸಿದ 'ಬಾಲವನ' ಇನ್ನೊಂದು ಅತ್ಯುತ್ತಮ ಉದಾಹರಣೆ. ಮತ್ತೊಂದು ಉದಾಹರಣೆಯೆಂದರೆ ಇಂಗ್ಲೆಂಡಿನ ಪೈಲಟ್ ಡೇವಿಡ್ ಹರ್ಸ್‌ಬರ್ಗ್ ತನ್ನ ಕೆಲಸ ಬಿಟ್ಟು, ಇಂಗ್ಲೆಂಡ್‌ನಿಂದ ಬಂದು ಕರ್ನಾಟಕ–ಆಂಧ್ರಪ್ರದೇಶದ ಗಡಿಯಲ್ಲಿ ಹಳ್ಳಿ ಮಕ್ಕಳಿಗೆಂದು ಆರಂಭಿಸಿದ ಪ್ರಾಯೋಗಿಕ ಶಿಕ್ಷಣ ಶಾಲೆ 'ನೀಲ್ ಭಾಗ್'.

ಕಲಾ ಆಧಾರಿತ ಬೋಧನಾ ಕ್ರಮಗಳು ವಿದ್ಯಾರ್ಥಿ ಕೇಂದ್ರಿತ ತರಗತಿಗಳನ್ನು ನಿರ್ಮಿಸಲು ಸಹಾಯ ಮಾಡುತ್ತವೆ ಎಂಬ ನಂಬಿಕೆ ನಿಧಾನವಾಗಿ ಬೆಳೆಯುತ್ತಿದೆ. ಈ ಬೋಧನಾ ವಿಧಾನಗಳು ವಿದ್ಯಾರ್ಥಿಗಳ ವೈಯಕ್ತಿಕ ಆಸಕ್ತಿಗಳನ್ನು, ಕೌಶಲಗಳನ್ನು ಮತ್ತು ಸೃಜನಾತ್ಮಕತೆಯನ್ನು ಹೆಚ್ಚು ಪ್ರಾಮುಖ್ಯತೆಯೊಂದಿಗೆ ಬೆಳಸಲು ಪ್ರಯತ್ನಿಸುತ್ತವೆ. ಇಂತಹ ಬೋಧನೆಗಳು, ಸಾಮಾನ್ಯ ಪಾಠದ ಕ್ರಮಗಳ ಹೊರತಾಗಿ, ಹೊಸ ಕಲಿಕೆಯ ಮಾರ್ಗವನ್ನು ರೂಪಿಸುತ್ತಿವೆ. ಈ ವಿಧಾನಗಳು, ಹಲವು ತೊಂದರೆಗಳ ನಡುವೆಯೂ, ವಿದ್ಯಾರ್ಥಿಗಳ ಕಲಿಕೆಯ ಸೃಜನಾತ್ಮಕ ಪ್ರೇರಣೆಯನ್ನು ಬೆಳೆಸಲು ಕಾರಣವಾಗುತ್ತವೆ. ಇದರಿಂದ ಆಧುನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಒಳ್ಳೆಯ ಪಠ್ಯಶೈಲಿಗಳನ್ನು ನಿರ್ಮಿಸಲು ಅವಕಾಶ ಸೃಷ್ಟಿಯಾಗಬಹುದು.

ಪರ್ಯಾಯ ಶಾಲೆಗಳ ತತ್ವವನ್ನು ಮತ್ತು ಬೋಧನಾ ಕ್ರಮಗಳನ್ನು ಸ್ವಲ್ಪ ಮಟ್ಟಿಗೆ ಮುಖ್ಯವಾಹಿನಿ ಶಾಲೆಗಳು ಅನುಸರಿಸಿದರೆ ಹೆಚ್ಚು ಹೆಚ್ಚು ಮಕ್ಕಳು ತಮ್ಮ ಶಿಕ್ಷಣವನ್ನು ಇಷ್ಟಪಡುವ ಹಾಗಾಗುತ್ತದೆ. ಮಕ್ಕಳ ಮಾತಿಗೆ, ದನಿಗೆ, ನಿರ್ಧಾರಗಳಿಗೆ ಮತ್ತು ಭಾಗವಹಿಸುವಿಕೆಗೆ ಮಾನ್ಯತೆ ಮತ್ತು ಮನ್ನಣೆ ಕೊಡುವ ವಾತಾವರಣ ಎಲ್ಲಾ ಶಾಲೆಗಳಲ್ಲೂ ನಿರ್ಮಾಣವಾದರೆ ಕಲಿಕೆಯ ಅನುಭವಕ್ಕೆ ಹೆಚ್ಚಿನ ಅರ್ಥ ಸಿಗುತ್ತದೆ. ಮಕ್ಕಳ ದಿನನಿತ್ಯದ ಬದುಕು ಶಾಲೆಯೊಳಗಡೆ ಬರುತ್ತದೆ. ಕಲಿಕೆ ಸಹಜ ಕಲಿಕೆಯಾಗುತ್ತದೆ. ಮಕ್ಕಳು ಅನುಭವ ಕಲಿಕೆಯಿಂದ ಕಲಿತರೆ ಪ್ರತಿ ದಿನದ ಉಪಯೋಗದಲ್ಲೂ ನಮ್ಮ ಶಿಕ್ಷಣವನ್ನು ನಾವು ಕಾಣಬಹುದು.

ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್, ಬೆಂಗಳೂರು, ಸಂಸ್ಥೆಯು ತನ್ನ ಕಲಾ ಶಿಕ್ಷಣದ ಕಾರ್ಯಕ್ರಮದಡಿಯಲ್ಲಿ 'ಕಲಿ ಕಲಿಸು' ಎಂಬ ಕಾರ್ಯಕ್ರಮವನ್ನು ಕರ್ನಾಟಕದ ಸರ್ಕಾರಿ ಶಾಲೆಗಳಲ್ಲಿ ನಡೆಸುತ್ತಾ ಬಂದಿದೆ. NCF 2005 ಮತ್ತು NEP 2020 ರ ಆಶಯದಂತೆ ಪಠ್ಯಬೋಧನಾ ಕಾರ್ಯದಲ್ಲಿ ಈ ಕಾರ್ಯಕ್ರಮವು ಸರ್ಕಾರಿ ಶಾಲಾ ಶಿಕ್ಷಕರು ಕಲಾ ಮಾಧ್ಯಮವನ್ನು ಅಳವಡಿಸಿಕೊಳ್ಳುವುದರ ಜೊತೆಯಲ್ಲೇ, ವಿದ್ಯಾರ್ಥಿಗಳಲ್ಲಿ ಕಲಿಕೆ ಎಂಬುದು ನಿರಂತರ ಪ್ರಕ್ರಿಯೆಯನ್ನಾಗಿಸುವ ಪ್ರಯತ್ನವನ್ನು ಮಾಡುತ್ತದೆ. ಇದು ಕತೆ, ಹಾಡು, ನಾಟಕ, ಮಾತು, ಚಿತ್ರಕಲೆ ಮತ್ತು ಇನ್ನಿತರ ಕಲಾ ಪ್ರಕಾರಗಳ ಮುಖಾಂತರ ಶಾಲಾ ಕೊಠಡಿಯನ್ನು ದಾಟಿ ಹೊರಜಗತ್ತಿನೊಂದಿಗೆ ಅನೂಹ್ಯ ಸಂಬಂಧವನ್ನು ಗಟ್ಟಿಯಾಗಿ ಕಟ್ಟಿಕೊಡುವ ಸೃಜನಶೀಲ ನಡೆಯಾಗಿಸಲು ಪ್ರೋತ್ಸಾಹಿಸುತ್ತದೆ. ಒಂದು ಅರ್ಥದಲ್ಲಿ ಪಠ್ಯೇತರ ಚಟುವಟಿಕೆಗಳಿಂದ ವಿದ್ಯಾರ್ಥಿ ಕೇಂದ್ರಿತ ಕಲಿಕಾ ವ್ಯವಸ್ಥೆಯನ್ನು ತರುವ ಆಶಯ ನಮ್ಮದು.

●

**ರಾಧಿಕಾ ಭಾರದ್ವಾಜ್**
ಕಾರ್ಯಕ್ರಮ ಅಧಿಕಾರಿ, ಕಲಾಶಿಕ್ಷಣ
ಐಎಫ್ಎ, ಬೆಂಗಳೂರು



**ಹೆಜ್ಜೆಗಳು – ಒಂದು ಒಳನೋಟ**

ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ಸಂಸ್ಥೆಯ ಒಂದು ವಿಭಿನ್ನ ಕಾರ್ಯಕ್ರಮ ನಮ್ಮ ಕಲಾ ಶಿಕ್ಷಣದ ಕಲಿ ಕಲಿಸು. ಕರ್ನಾಟಕದಾದ್ಯಂತ ಶಿಕ್ಷಕರು, ಕಲಾವಿದರು, ಶಾಲೆಗಳು, ಸಮುದಾಯಗಳು, ಕಲಾ ನಿರ್ಮಿತಿಗಳು ಹೀಗೆ ಕಲೆ ಮತ್ತು ಕಲಿಕೆಗೆ ಸಂಬಂಧಿಸಿದ ಎಲ್ಲರ ಮತ್ತು ಎಲ್ಲದರ ಜೊತೆಯಲ್ಲಿ ಒಂದು ಸಹಾನುಭೂತಿಯನ್ನು ಬೆಳಸಿಕೊಳ್ಳುತ್ತಾ ಸಾಗುತ್ತಿದೆ. ಈ ಅನುಭವಗಳ ಶ್ರೀಮಂತಿಕೆಯನ್ನು ನಿಮಗೆ ತಲುಪಿಸುವ ಒಂದು ಸಣ್ಣ ಮಾಧ್ಯಮವೇ ನಮ್ಮ 'ಹೆಜ್ಜೆಗಳು' ಪುಸ್ತಕ. ಶಿಕ್ಷಕರು ಹಾಗು ಕಲಾವಿದರಲ್ಲಿ ಆತ್ಮವಿಶ್ವಾಸ ಮತ್ತು ಕಲಾ ಸ್ಪಂದನೆಯನ್ನು ಪೋಷಿಸುತ್ತಾ ಅವರಿಗೆ ಸನಿವಾಸ ತರಬೇತಿಗಳು, ಕಲಾಯಾತ್ರೆಗಳು, ಕಲಾ ಸಮ್ಮೇಳನಗಳು ಮತ್ತು ಶೈಕ್ಷಣಿಕ ಪ್ರವಾಸಗಳನ್ನು ಆಯೋಜಿಸುತ್ತಿರುವ ಕಲಿ ಕಲಿಸು ಯೋಜನೆಯು ತನ್ನ ಎಲ್ಲಾ ಕಾರ್ಯ ಚಟುವಟಿಕೆಗಳ ಕುರಿತು ಈ ಕಿರುಹೊತ್ತಿಗೆಯಲ್ಲಿ ವಿವರಣೆ ನೀಡುತ್ತದೆ.

ಮೂರು ಹಂತಗಳ ಸನಿವಾಸ ತರಬೇತಿಗಳು ಕಲಾ ಶಿಕ್ಷಣದ ಮಹತ್ವವನ್ನು ಅರಿಯುವ ಅವಕಾಶಗಳನ್ನು ನಮ್ಮ ನಡುವೆ ಕಲ್ಪಿಸಿಕೊಡುತ್ತದೆ. ಈ ಎಂಟು ದಿನಗಳಲ್ಲಿ, ಕಲಾ ಶಿಕ್ಷಣ ಎಂದರೇನು? ಕಲಾ ಸಂಯೋಜಿತ ಶಿಕ್ಷಣವೆಂದರೇನು? ಕಲಾಂತರ್ಗತ ಕಲಿಕೆ ಅಂದರೇನು? ಕಲಾಂತರ್ಗತ ಬೋಧನಾಕ್ರಮಗಳ ಸಾಧ್ಯತೆಗಳೇನು? ಹೀಗೆ ಹಲವು ವಿಷಯಗಳ ಸುತ್ತ ಚರ್ಚೆಗಳು – ಪ್ರಾಯೋಗಿಕ ಚಟುವಟಿಕೆಗಳು ಮತ್ತು ಕಲಾಂತರ್ಗತ ಯೋಜನೆಗಳ ಪರಿಚಯಾತ್ಮಕ ಸಭೆಗಳು ನಡೆಯುತ್ತವೆ. ಇಲ್ಲಿ ಗಟ್ಟಿಗೊಂಡ ಕಲಾಶಿಕ್ಷಣದ ತತ್ವಗಳನ್ನು ಮಕ್ಕಳ ಬಳಿಗೆ ತೆಗೆದುಕೊಂಡು ಹೋಗುವುದರಲ್ಲಿ ನಮ್ಮೆಲ್ಲರ ಸಾರ್ಥಕತೆ ಇದೆ. ಅದೇ ಈ ತರಬೇತಿಯ ಕಲಿಕಾ ಫಲಿತಾಂಶ. ಪಾಶ್ಚಾತ್ಯ ದೇಶಗಳ ಶಿಕ್ಷಣ ವ್ಯವಸ್ಥೆಯನ್ನು ನಮ್ಮಲ್ಲಿ ಅಳವಡಿಸಿಕೊಂಡು ದಶಕಗಳೇ ಉರುಳಿವೆ. ನಾವೆಲ್ಲರೂ ಈ ಶಿಕ್ಷಣ ಕ್ರಮದಲ್ಲಿಯೇ ಕಲಿತವರು. ಹಾಗಾದರೆ ನಮ್ಮ ಮೂಲ ಅಸ್ಮಿತೆ ಏನು? ನಮ್ಮ ಜ್ಞಾನವಾಹಿನಿಯ ಕ್ರಮಗಳು ಯಾವುವು? ಎಂಬ ಚರ್ಚೆಗಳು ಸಹ ನಡೆದು NCF 2005 ರಲ್ಲಿ ಒಂದು ಸ್ಪಷ್ಟ ರೂಪ ಪಡೆದಿರುವುದನ್ನು ನಾವು ಕಂಡಿದ್ದೇವೆ. ಅದು ಸಾಧಿಸುವ ಒಂದು ಮುಖ್ಯ ಒಳನೋಟವು, ವಿದ್ಯಾರ್ಥಿಯ ಪ್ರತಿನಿತ್ಯದ ಜೀವನ ಶೈಲಿ, ಸ್ಥಳೀಯ ಸಂಪನ್ಮೂಲಗಳು, ವಿವಿಧ ಕಲಾಪ್ರಕಾರಗಳು, ಕಥಾನಕಗಳು, ಜೀವಂತ ಉದಾಹರಣೆಗಳು ಮತ್ತು ಸಮುದಾಯದ ಜ್ಞಾನ ಪರಂಪರೆಯು ಶಾಲಾ

ಬೋಧನಾಕ್ರಮಗಳಲ್ಲಿ ಅಳವಡಿಕೆಯಾದರೆ, ಕಲಿಕೆಯು ಸಹಜವಾಗಿಯೂ ಮತ್ತು ಆನಂದಾಯಕವಾಗಿಯೂ ಪರಿವರ್ತನೆಯಾಗುತ್ತದೆ. 'ಕಲಿ ಕಲಿಸು'ವಿನ ತರಬೇತಿಗಳೂ ಸಹ ಇದೇ ಚೌಕಟ್ಟಿನಲ್ಲಿ ಸಿದ್ಧವಾಗಿವೆ. ಕಲಾಯಾತ್ರೆಗಳು ಹಾಗೂ ಕಲಾ ಸಮ್ಮೇಳನಗಳು ಸಂಸ್ಥೆಯ ಕಾರ್ಯಕ್ರಮ ಮತ್ತು ಯೋಜನೆಗಳ ಬಗ್ಗೆ ಮಾಹಿತಿಯನ್ನು ಪ್ರಚಾರ ಮಾಡುತ್ತವೆ ಮತ್ತು ಕಲಾ ಶಿಕ್ಷಣದ ಸಾಧ್ಯತೆಗಳ ಬಗ್ಗೆ ಅರಿವು ಮೂಡಿಸುವಲ್ಲಿ ಶಿಕ್ಷಕರು, ಕಲಾವಿದರು, ಪೋಷಕರು, ವಿದ್ಯಾರ್ಥಿಗಳು, ನಿರ್ವಾಹಕರು, ಸಮುದಾಯದ ಸದಸ್ಯರು ಮತ್ತು ಶಾಲೆಗಳು ಸೇರಿದಂತೆ ವಿವಿಧ ಪಾಲುದಾರರನ್ನು ಕಾರ್ಯಕ್ಷೇತ್ರದಲ್ಲಿ ತೊಡಗಿಸಿಕೊಳ್ಳುತ್ತವೆ. ವರ್ಷದಲ್ಲಿ ಎರಡು ಆಯ್ದ ಜಿಲ್ಲೆಗಳಲ್ಲಿ ನಾಲ್ಕು ತಾಲ್ಲೂಕುಗಳ ನಲವತ್ತು ಶಾಲೆಗಳಲ್ಲಿ ಕಲಾಯಾತ್ರೆ ಕಾರ್ಯಕ್ರಮ ಸಾಗುತ್ತದೆ.

ಕಲಾ ಸಮ್ಮೇಳನಗಳು ಕಲಾ ಶಿಕ್ಷಣದ ವಿಷಯ ಮತ್ತು ಅದರ ವ್ಯಾಪ್ತಿಯನ್ನು ಹೆಚ್ಚಿಸಲು ಚರ್ಚೆಗಳು, ಗೋಷ್ಠಿಗಳು, ಹಂಚಿಕೆ ಮತ್ತು ಅಭಿಪ್ರಾಯಗಳಿಗೆ ವೇದಿಕೆಯನ್ನು ಕಲ್ಪಿಸುತ್ತವೆ. ಈ ಎಲ್ಲ ಕಾರ್ಯಕ್ರಮಗಳು ಭಾಗವಹಿಸುವಿಕೆ ಮತ್ತು ಪರಸ್ಪರ ಸ್ನೇಹ, ಗೌರವಗಳನ್ನು ಬೆಳಸುತ್ತವೆ. ಒಟ್ಟಿನಲ್ಲಿ ಹೇಳುವುದಾದರೆ, ಕಲಿ ಕಲಿಸು ಕಲಾ ಶಿಕ್ಷಣದಲ್ಲಿ ಸದಾ ಹೊಸತನವನ್ನು ಪ್ರೋತ್ಸಾಹಿಸಿ, ಬೆಳೆಸುವ ಒಂದು ಹೆಮ್ಮರ. ಈ ಮರದ ರೆಂಬೆ ಕೊಂಬೆಗಳು ಇದರ ಉತ್ಸಾಹಿ ಶಿಕ್ಷಕರು ಮತ್ತು ಕಲಾವಿದರಾದರೆ, ಐಎಫ್‌ಎ ಸಂಸ್ಥೆ ಬೇರಾದರೆ, ಇದಕ್ಕೆ ಹಲವರು ಬೆಳಕು ನೀಡುತ್ತಿದ್ದಾರೆ. ಶಿಕ್ಷಣ ಇಲಾಖೆ, ಎಲ್ಲ ಜಿಲ್ಲೆಗಳ ಡಿಡಿಪಿಐ ಮತ್ತು ಡಯಟ್ ಕಚೇರಿಗಳು, ಎಲ್ಲ ಶಿಕ್ಷಣ ಅಧಿಕಾರಿಗಳು, ಮುಖ್ಯಶಿಕ್ಷಕರು, ಸಹ ಶಿಕ್ಷಕರು, ಹಾಗು ಮುಖ್ಯವಾಗಿ ಪ್ರೀತಿಯ ಮಕ್ಕಳು. ಸಂಸ್ಥೆಯ ಪರವಾಗಿ ಎಲ್ಲರಿಗೂ ಅಭಿನಂದನೆಗಳು ಮತ್ತು ವಂದನೆಗಳು. ಹೆಜ್ಜೆಗಳು ಪುಸ್ತಕದ ಈ ಪ್ರಸ್ತುತಿಯನ್ನು ಹೊರತರಲು ಬೆಂಬಲಿಸಿದ ಇಂಟರ್ ಗ್ಲೋಬ್ ಫೌಂಡೇಶನ್‌ಗೆ ವಿಶೇಷ ಧನ್ಯವಾದಗಳು.

●





**ಭಾರತಿ ಎ.**
ಸಹಶಿಕ್ಷಕಿ, ಸ.ಕಿ.ಪ್ರಾ.ಶಾಲೆ, ಸಣ್ಣಕೆರೆ,
ಕೊಪ್ಪ, ಚಿಕ್ಕಮಗಳೂರು ಜಿಲ್ಲೆ.



**ಸುನಿಲ್ ಅಜ್ಜಾವರ**
ಸಹಶಿಕ್ಷಕರು, ಸ.ಹಿ.ಪ್ರಾ.ಶಾಲೆ, ಆಲೆಟ್ಟಿ,
ಸುಳ್ಯ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ

ಒಬ್ಬ ಶಿಕ್ಷಕ ನಿರಂತರ ವಿದ್ಯಾರ್ಥಿ ಎಂಬ ಮಾತಿದೆ. ಶಿಕ್ಷಕ ತಾನು ಕಲಿಯುತ್ತಾ ಕಲಿಸುವ ಕಲಿಕೆಯ ಪಯಣ ಅತ್ಯಂತ ಸಂತಸ ನೀಡುತ್ತದೆ. ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ಸಂಸ್ಥೆಯು ಶಿಕ್ಷಕರು ಮತ್ತು ಕಲಾವಿದರಲ್ಲಿರುವ ವಿಭಿನ್ನ ಚಿಂತನೆಗಳನ್ನು ಹೊರ ತೆಗೆದು ಅದನ್ನು ತರಗತಿ ಕೊಠಡಿಯಲ್ಲಿ ಪ್ರಾಯೋಗಿಕವಾಗಿ ಕಾರ್ಯಗತಗೊಳಿಸುವ ಯೋಜನೆಗಳನ್ನು ಕೈಗೊಳ್ಳಲು ಪ್ರೋತ್ಸಾಹ ನೀಡುತ್ತಿರುವುದು ಶಿಕ್ಷಣ ಕ್ಷೇತ್ರದಲ್ಲಿ ಹೊಸ ತರಹದ ಕಲಿಕೆಗೆ ಕಾರಣವಾಗಿದೆ. ಸಂಸ್ಥೆಯು ಕರ್ನಾಟಕದ ಶಾಲೆಗಳಿಗೆ ಮಾತ್ರವಲ್ಲದೆ ದೇಶದ ಉದ್ದಗಲಕ್ಕೂ ವಿವಿಧ ರಾಜ್ಯಗಳಲ್ಲಿ ಕಲಾ ಅಂತರ್ಗತ ಪ್ರಯೋಗಗಳನ್ನು ಕೈಗೊಳ್ಳಲು ಅವಕಾಶ ನೀಡುತ್ತಿದೆ.

ರಾಷ್ಟ್ರೀಯ ಶಿಕ್ಷಣ ನೀತಿ 2020 ಕೂಡ ಕಲಾ ಶಿಕ್ಷಣಕ್ಕೆ ವಿಶೇಷವಾದ ಒತ್ತನ್ನು ನೀಡುತ್ತದೆ. ಶಿಕ್ಷಣ ನೀತಿಯ ಆಶಯ ಮತ್ತು ಐಎಫ್ಎ ಸಂಸ್ಥೆಯ ಸೃಜನಶೀಲ ದೃಷ್ಟಿಕೋನಗಳು ತರಗತಿಯ ಕಲಿಕೆಯನ್ನು ಕಲೆಯೊಂದಿಗೆ ಸಮ್ಮಿಳಿತಗೊಳಿಸಿಕೊಂಡು ಮಗುವನ್ನು ಕಲಿಕೆಯಲ್ಲಿ ತೊಡಗಿಸಲು ಪ್ರೇರೇಪಿಸುತ್ತಿದೆ.

ಅರಳಿ ಕಟ್ಟೆಯನ್ನು ತೆರೆದ ವಾಚನಾಲಯವನ್ನಾಗಿಸಿರುವುದು, ರಾಷ್ಟ್ರಧ್ವಜದ ತಯಾರಿಕಾ ಕೇಂದ್ರದ ಸುತ್ತಲೂ ಸೃಜನಶೀಲತೆಯನ್ನು ಸೃಷ್ಟಿಸಿ ದೇಶ ಪ್ರೇಮದ ಹಣತೆಯನ್ನು ಕಲಾತ್ಮಕವಾಗಿ ನೋಡಿರುವುದು, ಮಾವು ಕೇವಲ ಹಣ್ಣು ಎಂದು ನೋಡದೆ ಅದನ್ನು ಕಲಿಕೆಯಲ್ಲಿ ಕಲೆಯೊಂದಿಗೆ ಸಮ್ಮಿಳಿತಗೊಳಿಸಿರುವುದು, ಬಸರೂರಿನ ಶಾಸನಗಳನ್ನು ಮಕ್ಕಳು ಅಭ್ಯಾಸ ಮಾಡಿರುವುದು, ತನ್ನ ಸುತ್ತಮುತ್ತಲಿನ ಕೀಟ ಪ್ರಪಂಚವನ್ನು ಬೆರಗುಗಣ್ಣಿನಿಂದ ನೋಡಿ ಕಲಾತ್ಮಕವಾಗಿ ಕಲಿಕೆಗೆ ತೆರೆದುಕೊಂಡಿರುವುದು, ಹಸೆ ಚಿತ್ತಾರವನ್ನು ಮಕ್ಕಳು ಬಗೆಬಗೆಯಾಗಿ ಚಿತ್ರಿಸಿರುವುದು, ಗೊಂಬೆಯಾಟದ ಪ್ರದರ್ಶನ, ಹಿಂದುಸ್ತಾನಿ ಸಂಗೀತ ಹೀಗೆ ಹತ್ತು ಹಲವು ಕಲೆ ಮತ್ತು ಸಾಹಿತ್ಯದ ಪ್ರಕಾರಗಳನ್ನು ತರಗತಿ ಅಧ್ಯಯನದೊಂದಿಗೆ

ಬೆಸೆದಿರುವ ಯೋಜನೆಗಳು ಕಲಿಕೆಯಲ್ಲಿ ನಾವೀನ್ಯತೆಯನ್ನು ಮೂಡಿಸಿವೆ. ರಾಜ್ಯದ ಉದ್ದಗಲಕ್ಕೂ ಇರುವ ಬೇರೆ ಬೇರೆ ಜಿಲ್ಲೆಗಳ ಶಿಕ್ಷಕರಿಗೆ ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ಸಂಸ್ಥೆಯ ಪರಿಚಯ ಮಾಡಲು ಯೋಜನೆಗಳನ್ನು ಕೈಗೊಂಡ ಸಂಪನ್ಮೂಲ ವ್ಯಕ್ತಿಗಳಿಂದಲೇ ಅನುವು ಮಾಡಿಕೊಡುವ ಕಲಾ ಯಾತ್ರೆ ಕಾರ್ಯಕ್ರಮವು ಸಂಸ್ಥೆಯ ಪರಿಚಯವನ್ನು ನೀಡುವುದರ ಜೊತೆಗೆ ಹೊಸತನಕ್ಕಾಗಿ ತುಡಿಯುತ್ತಿರುವ ಶಿಕ್ಷಕರಿಗೆ ತಮ್ಮ ಯೋಚನೆಗಳ ಹರವನ್ನು ಯೋಜನೆಗಳನ್ನಾಗಿ ರೂಪಿಸುವ ಉತ್ಸಾಹವನ್ನು ಮೂಡಿಸಿದೆ.

ವೈಯುಕ್ತಿಕ ಯೋಜನೆಗಳಲ್ಲದೆ ಈ 'ಹೆಜ್ಜೆಗಳು' ಪುಸ್ತಕದಲ್ಲಿ ಸಾಂಸ್ಥಿಕ ಯೋಜನೆಗಳ ಪರಿಚಯವೂ ಇರುವುದು ವಿಶೇಷ. ಕಾಶ್ಮೀರದಂತಹ ರಾಜಕೀಯ ಅಸ್ಥಿರತೆಯ ನಾಡಿನಲ್ಲಿ 'ಅರಳುವ ಮೊಗ್ಗು' ಯೋಜನೆಯ ಮೂಲಕ ಮಕ್ಕಳಲ್ಲಿ ಕಲೆಯ ಬಗೆಗೆ ಆಸಕ್ತಿ ಮೂಡಿಸುತ್ತಿರುವ ಇಂಟರ್ ನ್ಯಾಷನಲ್ ಎಜುಕೇಶನಲ್ ಇನ್‌ಸ್ಟಿಟ್ಯೂಟ್, ಇದೇ ರೀತಿ ದೆಹಲಿಯ 'ಮೇರೆ ಆಸ್ ಪಡೋಸ್', ಬಂಗಾಳದ 'ಪುಸ್ತಕದಾಚೆಗಿನ ಆಕಾಶ', ಮಧ್ಯಪ್ರದೇಶದ 'ಸ್ಥಳೀಯ ಭಾಷೆ ಮತ್ತು ಪಠ್ಯಕ್ರಮ', ಮೈಸೂರಿನ ಅರಿವು ಸಂಸ್ಥೆಯ 'ಮಾಲ್ಗುಡಿಯಲ್ಲೊಂದು ಮನೆಯ ಮಾಡಿ', ಒಡಿಶಾದ 'ಬುಡಕಟ್ಟು ಕಲೆಗಳ ಪಠ್ಯಪ್ರಯೋಗ' ಇವೆಲ್ಲವೂ ಕಲಿಕೆಯನ್ನು ಕೇವಲ ತರಗತಿ ಮತ್ತು ಪಠ್ಯಪುಸ್ತಕಕ್ಕೆ ಸೀಮಿತಗೊಳಿಸದೇ ಕಲಾ ಸಮ್ಮಿಳಿತಗೊಳಿಸಿ, ಬದುಕಿಗೆ ಹತ್ತಿರವಾಗಿಸುವ ಪ್ರಯತ್ನವಾಗಿದೆ.

ಇಂತಹ ಕಲಾತ್ಮಕ ಚಟುವಟಿಕೆಗಳನ್ನು ತರಗತಿಯ ಕೋಣೆಯೊಳಗೆ ತಂದಿರುವ ಯೋಜನೆಗಳನ್ನು ಹೆಜ್ಜೆಗಳಲ್ಲಿ ಪಡಿಮೂಡಿಸುವ ಸಂಪಾದಕೀಯ ತಂಡದಲ್ಲಿ ನಮಗೆ ಜವಾಬ್ದಾರಿಯನ್ನು ನೀಡಿರುವುದಕ್ಕಾಗಿ ಐಎಫ್‌ಎ ಸಂಸ್ಥೆಗೆ ಆಭಾರಿಯಾಗಿದ್ದೇವೆ.



# ವೀರ ವನಿತೆಯರು ಯಕ್ಷಗಾನ ಪ್ರಯೋಗ

2023-24
ಶಿಕ್ಷಕರ ಯೋಜನೆ




ಆನಂದ ಕುಲಾಲ್
ಶಿಕ್ಷಕರು
9880946905


'ಯಕ್ಷಗಾನದ ಮೂಲಕ ಕರಾವಳಿಯ ವೀರ ವನಿತೆಯರು ಸಾಮಾಜಿಕ ಶೋಷಣೆ ಮತ್ತು ಬ್ರಿಟಿಷರ ವಿರುದ್ಧ ಮಾಡಿದ ಹೋರಾಟಗಳ ಅಧ್ಯಯನ' ಒಂದು ವಿಶಿಷ್ಟ ಕಲಾಂತರ್ಗತ ಶೈಕ್ಷಣಿಕ ಪ್ರಯೋಗವಾಗಿದೆ.

ಕರ್ನಾಟಕ ಕರಾವಳಿ ಎಂದಾಗ ನೆನಪಾಗುವುದು ಸಮುದ್ರ ಮತ್ತು ಅದರಷ್ಟೇ ಆಳವಾಗಿರುವ ಯಕ್ಷಗಾನ. ಉಡುಪಿ ಜಿಲ್ಲೆಯ ಕುಂದಾಪುರ ವಲಯದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೈಲೂರು. ಇಲ್ಲಿಯ ಸಹಶಿಕ್ಷಕ ಆನಂದ ಕುಲಾಲ್‌ರವರು ಇಂಡಿಯಾ ಫೌಂಡೇಶನ್ ಫಾರ್ ದ ಆರ್ಟ್ಸ್ ಸಂಸ್ಥೆಯ ಕಲಿ ಕಲಿಸು ಯೋಜನೆಯ ಮೂಲಕ ಪ್ರಯೋಗಿಸಿದ ವಿಶಿಷ್ಟ ಯೋಜನೆಯೇ 'ಕರಾವಳಿಯ ವೀರ ವನಿತೆಯರು ಸಾಮಾಜಿಕ ಶೋಷಣೆ ಮತ್ತು ಬ್ರಿಟಿಷರ ವಿರುದ್ಧ ಮಾಡಿದ ಹೋರಾಟಗಳ ಅಧ್ಯಯನ – ಯಕ್ಷಗಾನದ ಮೂಲಕ'.

ಬೈಲೂರು ಶಾಲೆಯ ನಾಲ್ಕು, ಐದು, ಆರು ಮತ್ತು ಏಳನೇ ತರಗತಿಯ ಸುಮಾರು ನಲ್ವತ್ತು ಮಕ್ಕಳಿಗೆ ಸ್ಥಳೀಯ ವೀರ ವನಿತೆಯರ ಚರಿತ್ರೆಯನ್ನು ತಿಳಿಸುವುದರ ಜೊತೆಗೆ ಅದನ್ನು ಸ್ಥಳೀಯ ಕಲೆಯಾದ ಯಕ್ಷಗಾನದ ಮೂಲಕ ಸಾರ್ವಜನಿಕವಾಗಿ



ಪ್ರದರ್ಶಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಇತಿಹಾಸ ಮತ್ತು ಕಲೆ ಎರಡರ ಕಲಿಕೆಯನ್ನು ಮಾಡಿಸಿದ ಶೈಕ್ಷಣಿಕ ಪ್ರಯತ್ನ ಇದಾಗಿದೆ.

ಈ ಯೋಜನೆಯ ಮೊದಲನೇ ಹಂತವಾಗಿ ನಾಲ್ಕು ತರಗತಿಗಳಿಗೆ ಕರಾವಳಿಯ ನಾಲ್ಕು ವೀರ ಮಹಿಳೆಯರಾದ ಉಳ್ಳಾಲದ ರಾಣಿ ಅಬ್ಬಕ್ಕ, ಮೆಣಸಿನ ರಾಣಿ ಚೆನ್ನಭೈರಾದೇವಿ, ತಿರುವಾಂಕೂರಿನ ಮಕ್ಕಲಂ ನಂಗೇಲಿ ಹಾಗೂ ಕಮಲಾದೇವಿ ಚಟ್ಟೋಪಾಧ್ಯಾಯ ಇವರ ವೀರಗಾಥೆಯನ್ನು ಸಂಪನ್ಮೂಲ ವ್ಯಕ್ತಿಗಳ ಮೂಲಕ ವಿದ್ಯಾರ್ಥಿಗಳಿಗೆ ತಿಳಿಯಪಡಿಸಿ ಐತಿಹಾಸಿಕವಾಗಿ ಈ ಮಹಿಳೆಯರು ಬೀರಿದ ಪ್ರಭಾವ ಹಾಗೂ ಸಾಮಾಜಿಕ ಪ್ರಾಮುಖ್ಯತೆಯನ್ನು ತಿಳಿಯಪಡಿಸಲಾಯಿತು. ನಂತರದ ಹಂತವಾಗಿ ಈ ನಾಲ್ಕು ಮಹಿಳೆಯರ ಕತೆಗಳನ್ನು ಕಲಾರೂಪವಾದ ಯಕ್ಷಗಾನದ ಚೌಕಟ್ಟಿಗೆ ಹೊಂದಿಸಿಕೊಂಡು ರಂಗದ ಮೇಲಿನ ಪ್ರಯೋಗಕ್ಕೆ ಮಕ್ಕಳನ್ನು ಸಿದ್ಧಪಡಿಸುವುದು. ಈ ಎಲ್ಲಾ ಹಂತಗಳನ್ನು ಯಶಸ್ವಿಯಾಗಿ ಮುಗಿಸಿ ವಿದ್ಯಾರ್ಥಿಗಳು ನಾಲ್ಕು ಮಹಿಳೆಯರ ಇತಿಹಾಸವನ್ನು ಮನೋಜ್ಞವಾಗಿ ಪ್ರದರ್ಶನ ಮಾಡುವುದರ ಮೂಲಕ ಕಲೆ ಎಂಬುದು ಕಲಿಕೆಯ ಅವಿಭಾಜ್ಯ ಅಂಗ ಎಂಬುದನ್ನು ಮತ್ತೊಮ್ಮೆ ನಿಜವಾಗಿಸಿದರು. ಹೆಚ್ಚು ಸ್ಥಳೀಯವಾದದು ಹೆಚ್ಚು ವಿಶ್ವವ್ಯಾಪಿಯೂ ಆಗಿರುತ್ತದೆ ಎಂಬುದನ್ನು ಈ ಯೋಜನೆ ಮತ್ತೊಮ್ಮೆ ಸಾಬೀತುಪಡಿಸಿದೆ. ●

> ಯಕ್ಷಗಾನದ ಮೂಲಕ ಕರಾವಳಿಯ ವೀರವನಿತೆಯರ ಕತೆಗಳನ್ನು ತಿಳಿದ ನಂತರ ಮಹಿಳೆಯರಿಗೆ ದೊರೆಯುತ್ತಿರುವ ಅವಕಾಶಗಳು ಮತ್ತು ಸ್ವಾತಂತ್ರ್ಯದ ಹಿಂದೆ ಹಲವರ ಬಲಿದಾನಗಳ ಮಹತ್ವ ಅರಿತೆನು.
> – ಆದ್ಯಾ ಪಿ. 7ನೇ ತರಗತಿ



# ನೇಸರ ಬಾನಂಗಳದ ಬೆರಗು

2023-24
ಶಿಕ್ಷಕರ ಯೋಜನೆ



**ರಾಮಚಂದ್ರ ಭಟ್,**
**ಶಿಕ್ಷಕರು**
7892163470

ಈ ಪ್ರಪಂಚದ ಎಲ್ಲಾ ನಾಗರೀಕತೆಗಳ ಮೂಲದಿಂದಲೂ ಮನುಷ್ಯನಿಗೆ ಅಚ್ಚರಿಯಾಗಿ, ವಿಸ್ಮಯವಾಗಿ, ಆಚರಣೆಯಾಗಿ ಅಧ್ಯಯನ ವಸ್ತುವಾಗಿ ಇಂದಿಗೂ ಸಂಪೂರ್ಣವಾಗಿ ಬಿಡಿಸಲಾರದ ಒಗಟಿನಂತೆ ಬೆರಗಾಗಿರುವ ಸೂರ್ಯನನ್ನು ಕುರಿತಂತೆ ವಿಜ್ಞಾನ ವಿಷಯ ಶಿಕ್ಷಕರಾದ ರಾಮಚಂದ್ರ ಭಟ್, ಸರಕಾರಿ ಪ್ರೌಢ ಶಾಲೆ ಬ್ಯಾಟರಾಯನಪುರ ಇಲ್ಲಿಯ ವಿದ್ಯಾರ್ಥಿಗಳಿಗಾಗಿ ನಡೆಸಿದ ವಿಜ್ಞಾನದ ಜತೆಗಿನ ಕಲಾ ಸಮ್ಮಿಳಿತ ಶೈಕ್ಷಣಿಕ ಪ್ರಯೋಗ 'ನೇಸರ ಬಾನಂಗಳದ ಬೆರಗು'. ಎಂಟನೇ ತರಗತಿಯ ಸುಮಾರು ನಲ್ವತ್ತು ವಿದ್ಯಾರ್ಥಿಗಳನ್ನು ಕೇಂದ್ರವಾಗಿರಿಸಿಕೊಂಡು ಈ ಕಲಾಂತರ್ಗತ ಪ್ರಯೋಗವನ್ನು ಐಎಫ್‌ಎಯ ಕಲಿ ಕಲಿಸು ಯೋಜನೆಯಡಿ ನಡೆಸಲಾಗಿದೆ.

ಶಾಲೆಯಲ್ಲಿ ಹಲವು ಧರ್ಮಗಳ, ಸಮುದಾಯಗಳ ವಿದ್ಯಾರ್ಥಿಗಳು ಜತೆಯಾಗಿ ಕಲಿಕೆಯಲ್ಲಿ ತೊಡಗಿರುವ ಜತೆ ಜತೆಗೆ ತಮ್ಮ ಮನೆಗಳಲ್ಲಿ ಹಲವು ಸಂಪ್ರದಾಯಗಳನ್ನು, ಆಚರಣೆಗಳನ್ನು ಪಾಲಿಸುತ್ತಾ ಬಂದಿರುತ್ತಾರೆ. ಇವುಗಳಲ್ಲಿ ಅನೇಕ ಬಾರಿ ಕಂಡು ಬರುವ ಸಾಮ್ಯತೆ ಎಂದರೆ ಇವುಗಳಲ್ಲಿ ಹೆಚ್ಚಿನ ಆಚರಣೆಗಳು ಸೂರ್ಯನನ್ನು, ಸೂರ್ಯನ





ಚಲನೆಯನ್ನು ಅವಲಂಬಿಸಿರುತ್ತವೆ. ಈ ಸಂಪ್ರದಾಯಗಳ, ಆಚರಣೆಗಳ ಜಾಡು ಬಿಡಿಸುತ್ತಾ ಅವುಗಳ ಜತೆಗಿನ ವೈಜ್ಞಾನಿಕ ಕಾರಣಗಳನ್ನು ಹುಡುಕುತ್ತಾ ಈ ಮೂಲಕ ಸೂರ್ಯನನ್ನು ಹೆಚ್ಚು ಅರ್ಥ ಮಾಡಿಕೊಳ್ಳುವ ವಿಶೇಷ ಕಲಿಕಾ ಪ್ರಯೋಗ ಇದಾಗಿದೆ.

ಈ ಶೈಕ್ಷಣಿಕ ಪ್ರಯೋಗದ ಮೂಲಕ ವಿದ್ಯಾರ್ಥಿಗಳು ಹಲವು ಸಂಪ್ರದಾಯಗಳ ಪರಿಚಯವನ್ನು ಮಾಡಿಕೊಳ್ಳುವುದರ ಜತೆಗೆ ಅವುಗಳ ಹಿನ್ನಲೆ ಮತ್ತು ಪ್ರಾಕೃತಿಕವಾಗಿ ಅವುಗಳಿಗಿರುವ ಮಹತ್ವವನ್ನು ಅರ್ಥವಾಡಿಕೊಂಡರು. ಸೂರ್ಯನಿಗೆ ಆಚರಣೆಯ ಹೊರತಾಗಿ ಋತುಮಾನಗಳ ಜತೆಗೆ, ಐತಿಹಾಸಿಕ ವಾಸ್ತುಶಿಲ್ಪಗಳು ಗಣಿತದ ಜತೆಗೆ ಇರುವಂತಹ ಸಂಬಂಧಗಳನ್ನು ತಿಳಿದುಕೊಂಡರು. ಈ ಮೂಲಕ ಖಗೋಳ ವಿಜ್ಞಾನವು ಬಹಳ ಆದಿಕಾಲದಿಂದಲೂ ಮನುಷ್ಯನ ಜೀವನದ ಜತೆ ಜತೆಗೆ ಬೆಳೆದು ಬಂದ ಬಗೆಯನ್ನು ಕಂಡುಕೊಂಡರು. ಮಾತ್ರವಲ್ಲದೆ ವಿವಿಧ ಕಲಾ ಪ್ರಕಾರಗಳಾದ ನೃತ್ಯ, ಯಕ್ಷಗಾನ, ಮೈಮ್, ರೂಪಕಗಳ ಮೂಲಕ ಇವುಗಳನ್ನು ಅಭಿವ್ಯಕ್ತಿಗೊಳಿಸುತ್ತಾ ತಮ್ಮೊಳಗೆ ವಿಜ್ಞಾನದ ಕಲಿಕೆಯನ್ನು ಅಂತರ್ಗತ ಮಾಡಿಕೊಳ್ಳಲು ಸಹಕಾರಿಯಾದುದು ಈ ಪ್ರಯೋಗದ ಯಶಸ್ಸಿನ ಇನ್ನೊಂದು ಆಯಾಮವೆನ್ನಬಹುದು.

> ಸೂರ್ಯ ಕೇವಲ ಆಕಾಶಕಾಯವಾಗಿರದೆ ನಮ್ಮ ಸಂಸ್ಕೃತಿಯ ಭಾಗವೇ ಆಗಿದ್ದಾನೆ. ಸೂರ್ಯನಿಗೆ ಸಂಬಂಧಿಸಿದ ಆಚರಣೆಗಳು ಹಾಗೂ ಅವುಗಳ ವೈಜ್ಞಾನಿಕ ಹಿನ್ನಲೆಯನ್ನು ಈ ಯೋಜನೆಯ ಮೂಲಕ ವಿದ್ಯಾರ್ಥಿಗಳು ಅನುಭವಾತ್ಮಕವಾಗಿ ಅರ್ಥಮಾಡಿಕೊಂಡರು.
>
> – ರಾಮಚಂದ್ರ ಭಟ್, ಶಿಕ್ಷಕರು.

# ಕಲೆಯೊಂದಿಗೆ ಪರಿಸರ ಜಾಗೃತಿ



ರವಿ ಸೋ. ದೇವರೆಡ್ಡಿ
**ಶಿಕ್ಷಕರು**
9481726315

ಗದಗ ಜಿಲ್ಲೆ ಮುಂಡರಗಿ ತಾಲೂಕಿನ ಸರ್ಕಾರಿ ಪ್ರೌಢಶಾಲೆ ಹೆಸರೂರು. ಇಲ್ಲಿನ ಮಕ್ಕಳಿಗೆ ತಮ್ಮ ಸುತ್ತಲಿನ ಕಾಡು–ಮೇಡು, ಬೆಟ್ಟ–ಗುಡ್ಡಗಳಲ್ಲಿ ಓಡಾಡುವ ಅವಕಾಶ ಸಿಗಬೇಕು, ಅಲ್ಲಿ ಓಡಾಡಿ ಅದನ್ನು ತನ್ನ ಕಲಿಕೆಯ ಭಾಗವಾಗಿ ತೆಗೆದುಕೊಳ್ಳಬೇಕು ಎಂಬ ಯೋಚನೆ ಇಲ್ಲಿನ ವಿಜ್ಞಾನ ಶಿಕ್ಷಕರಾದ ರವಿ ಸೋ. ದೇವರೆಡ್ಡಿಯವರದು. ತಮ್ಮ ಶಾಲಾ ಎಂಟನೇ ತರಗತಿಯ ಮಕ್ಕಳಿಗೆ 'ಕಲೆಯೊಂದಿಗೆ ಪರಿಸರ ಜಾಗೃತಿ' ಎಂಬ ಕಲಾ ಸಂಯೋಜಿತ ಕಲಿಕೆಗೆ ಮಕ್ಕಳನ್ನು ತೊಡಗಿಸಿದ್ದಾರೆ.

ತಮ್ಮ ಶಾಲೆಯ ಸನಿಹದಲ್ಲಿರುವ ಕಪ್ಪತಗುಡ್ಡದ ಪ್ರಾಕೃತಿಕ ಸಂಪತ್ತು ಜನರ ಬದುಕಿನೊಂದಿಗೆ ಬೆಸೆದುಕೊಂಡಿರುವ ಬಗೆಯನ್ನು ಹಲವಾರು ಚಟುವಟಿಕೆಗಳ ಮೂಲಕ ತಿಳಿಸಿದ್ದಾರೆ. ಕಪ್ಪತಗುಡ್ಡದ ಪ್ರಾಕೃತಿಕ ವೈಶಿಷ್ಟ್ಯವನ್ನು ಮಕ್ಕಳು ಕಲಾತ್ಮಕ ಮತ್ತು ಸಾಹಿತ್ಯದ ದೃಷ್ಟಿಯಿಂದ ನೋಡುವ ಬಗ್ಗೆ ಯೋಜನೆ ರೂಪಿಸಲಾಯಿತು. ಈ ಮಕ್ಕಳಿಗೆ ಕಪ್ಪತಗುಡ್ಡದ ಕಾಡಿನಲ್ಲಿರುವ ಪ್ರಮುಖ ಮರಗಳನ್ನು, ಪಕ್ಷಿಗಳನ್ನು, ಸ್ಥಳೀಯ ಜನರ ಆಹಾರದಲ್ಲಿ ಬಳಕೆ ಆಗುವ ಕಾಡು ಕಾಯಿಗಳು, ಎಲೆ, ಗಡ್ಡೆ–ಗೆಣಸುಗಳ ಪರಿಚಯ,





ಇಲ್ಲಿನ ಗಿಡಮರಗಳ ಮೂಲಕ ಆರೋಗ್ಯದ ಗುಟ್ಟು ಇವೆಲ್ಲವುಗಳ ಬಗ್ಗೆ ಕಾಡಿನ ವೀಕ್ಷಣೆಯೊಂದಿಗೆ ತಿಳಿಸಲಾಯಿತು. ತೊಟ್ಟಲು ಕಾಯಿ, ಸೀಗೆಸೊಪ್ಪು, ಚೊಗಚಿ ಕುಡಿಯನ್ನು ತರಕಾರಿಯಂತೆ ಬಳಸುತ್ತಾರೆ ಎಂಬ ಸರಳ ಜನಪದ ಪದಗಳನ್ನು ತಿಳಿಯುವುದರ ಜೊತೆಗೆ ಮಕ್ಕಳ ಕಲಿಕೆಗೆ ಸಾಹಿತ್ಯದ ಮತ್ತು ನಾಟಕದ ಸ್ಪರ್ಶ ನೀಡಲಾಯಿತು.

> ಕಪ್ಪತಗುಡ್ಡದ ಪ್ರವಾಸದಲ್ಲಿ ನಾನು ಪರಿಸರದ ಬಗ್ಗೆ ಬಹಳ ವಿಷಯಗಳನ್ನು ತಿಳಿದುಕೊಂಡಿದ್ದು ನನಗೆ ಬಹಳ ಖುಷಿ ತರಿಸಿತು
> – ಸಂಜನಾ, 8ನೇ ತರಗತಿ

ಸಾಹಿತ್ಯ ರಚನಾ ಕಮ್ಮಟ ನಡೆಸಿ, ಮಕ್ಕಳು ಪುಸ್ತಕದ ಓದು ಮತ್ತು ಬರವಣಿಗೆಗೆ ತೆರೆದುಕೊಳ್ಳುವಂತೆ ಮಾಡಿ, ಊರಿನ ಗ್ರಂಥಾಲಯದ ಭೇಟಿ, ಪಾಲಕರೊಡನೆ ಸಂವಾದ, ಬಾಲ ಪ್ರತಿಭೆ ಸಾಹಿತಿಗಳೊಂದಿಗೆ ಚರ್ಚೆ ಇಂತಹ ಚಟುವಟಿಕೆಗಳನ್ನು ನಡೆಸಿದಾಗ ಮಕ್ಕಳು ತಾವೇ ಹನಿಗವನ, ಕವಿತೆ, ಕಥೆಗಳನ್ನು ಬರೆಯುವುದರ ಮೂಲಕ ಬರವಣಿಗೆಯಲ್ಲಿ ಆಸಕ್ತಿ ತಳೆದರು. ಮಕ್ಕಳು ಬರೆದ ಉತ್ತಮ ಲೇಖನಗಳನ್ನು ದಿನಪತ್ರಿಕೆಗೂ ಕಳಿಸಲಾಗುತ್ತಿತ್ತು.



ಮಕ್ಕಳ ಕಲಾ ಅಭಿವ್ಯಕ್ತಿಗೆ ಪ್ರೇರಣೆ ನೀಡಲು ನಾಟಕವನ್ನು ಕಲಾ ಮಾಧ್ಯಮವನ್ನಾಗಿ ಮಾಡಿ ಕೊಳ್ಳಲಾಯಿತು. ●

# ಉರ್ದು ಭಾಷಾ ಸಮ್ಮಿಳಿತ ಕಲಿಕೆ



ಬಾಲನಾಗಮ್ಮ ದಾಸರ
ಶಿಕ್ಷಕರು
9008871425

ವಿದ್ಯಾರ್ಥಿಗಳಿಗೆ ಅವರ ಮಾತೃಭಾಷೆಯೊಂದಿಗೆ ಕನ್ನಡ ಕಲಿಕೆಯನ್ನು ಸರಳೀಕರಣಗೊಳಿಸುವ ಹಾಗೂ ಉರ್ದು ಶಿಶುಗೀತೆಗಳನ್ನು ಕನ್ನಡಕ್ಕೆ ತರ್ಜುಮೆಗೊಳಿಸುವ ಜೊತೆಗೆ ಸ್ಥಳೀಯ ಇತಿಹಾಸವನ್ನು ಅರಿಯುವ ನಿಟ್ಟಿನಲ್ಲಿ ಕಲಿ ಕಲಿಸು ಯೋಜನೆಯನ್ನು ಕೈಗೆತ್ತಿಕೊಂಡವರು ಕೊಪ್ಪಳದ ಶ್ರೀಶೈಲ ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕರಾದ ಬಾಲನಾಗಮ್ಮ ದಾಸರ. ಇವರು ತಮ್ಮ ಶಾಲೆಯ ಆರನೇ ತರಗತಿಯ ಮಕ್ಕಳನ್ನು ಈ ಯೋಜನೆಯಲ್ಲಿ ತೊಡಗಿಸಿಕೊಂಡು ಹತ್ತಾರು ಚಟುವಟಿಕೆಗಳನ್ನು ನಡೆಸುತ್ತಾ ಸಾಗಿದರು.

ಉರ್ದು ಮಾತೃಭಾಷೆಯ ಮಕ್ಕಳಿಗೆ ಸ್ಥಳೀಯ ಘಟನೆಗಳು ಮತ್ತು ಸನ್ನಿವೇಶಗಳನ್ನು ಆಧರಿಸಿ ಅವುಗಳನ್ನು ಕ್ರಮವತ್ತಾಗಿ ಜೋಡಿಸಿ, ಉರ್ದು ಮತ್ತು ಕನ್ನಡ ಭಾಷೆಯಲ್ಲಿ ಅಭಿನಯಿಸುವ ಸರಳ ವಿಧಾನಗಳನ್ನು ಕಲಿಸಲಾಯಿತು. ಸ್ಥಳೀಯವಾಗಿ ಸಿಗುವ ಕಲ್ಲು, ಮಣ್ಣು, ಎಲೆ, ಕಡ್ಡಿ, ದಾರ, ಪ್ಲಾಸ್ಟಿಕ್ ತುಂಡುಗಳನ್ನು ಬಳಸಿಕೊಂಡು ಕೊಪ್ಪಳದ ಕೋಟೆ, ಸಿರಸಪ್ಪಯ್ಯನವರ ಮಠ, ಗವಿ ಸಿದ್ದೇಶ್ವರ ಮಠ, ಮಲೆ ಮಲ್ಲೇಶ್ವರ ದೇವಸ್ಥಾನ, ನಿಜಾಮರ ಕಾಲದ ಕೋಟೆಗಳು, ಅಶೋಕನ ಶಾಸನಗಳು ಮಕ್ಕಳ ಕೈಯಲ್ಲಿ ಕಲಾಕೃತಿಗಳಾಗಿ ಅರಳಿದವು.



ಬಹದ್ದೂರ್ ಬಂಡಿ ಕೋಟೆಯನ್ನು ತಲುಪಲು ಚಾರಣವನ್ನು ಏರ್ಪಡಿಸಲಾಗಿತ್ತು. ಕೋಟೆಯನ್ನು ಕಟ್ಟುವಾಗ ಬಳಸಿದ ರಕ್ಷಣಾ ಕ್ರಮಗಳು, ಕಟ್ಟಿದ ಬಗೆ ಇತ್ಯಾದಿ ಮಾಹಿತಿಗಳನ್ನು ಮಕ್ಕಳು ಪಡೆದರು. ಐದು ಸುತ್ತಿನ ಈ ಕೋಟೆಯ ಮಾಹಿತಿಯನ್ನು ಮಕ್ಕಳು ಸಂಪನ್ಮೂಲ ವ್ಯಕ್ತಿಗಳ ಮೂಲಕ ಪಡೆದು ಹೆಮ್ಮೆಪಟ್ಟರು. ಕೊಪ್ಪಳ ಕೋಟೆಯ ಭೇಟಿಯು ಟಿಪ್ಪು ಸುಲ್ತಾನ್, ಕಿತ್ತೂರು ಚೆನ್ನಮ್ಮ, ಮಲ್ಲಸರ್ಜ ದೇಸಾಯಿ, ಮುಂಡರಗಿ ಭೀಮರಾಯ ಇವರು ಕೋಟೆಯೊಂದಿಗೆ ಆಗ ಹೊಂದಿದ್ದ ಸಂಬಂಧವನ್ನು ಇತಿಹಾಸದ ಆಧಾರದಲ್ಲಿ ತಿಳಿಯಲು ಸಹಾಯಕವಾಯಿತು. ಸ್ಥಳೀಯ ಇತಿಹಾಸದ ಮರು ಸೃಷ್ಟಿಯ ಕಲಾಂತರ್ಗತ ಕಲಿಕೆ ಇಲ್ಲಿ ಕಾಣಬಹುದು.

> ಈ ಯೋಜನೆಯಲ್ಲಿ ನಾವು ಹತ್ತಾರು ಚಟುವಟಿಕೆಗಳಲ್ಲಿ ಭಾಗವಹಿಸಿದೆವು. ಇವುಗಳಲ್ಲಿ ಯಾವುದು ಇಷ್ಟ ಎಂದರೆ ಯಾವುದು ಅಂತ ಹೇಳಲಿ, ಎಲ್ಲವೂ ಚೆಂದ, ಎಲ್ಲವೂ ಇಷ್ಟ, ಎಲ್ಲವೂ ಖುಷಿ ಕೊಟ್ಟವು.
> –ಪೂಜಾ ಎಸ್ ಗಾಣಿಗೇರ
> 6ನೇ ತರಗತಿ

ಕ್ರಾಫ್ಟ್, ಲಾವಣಿ ಹಾಡುಗಳು, ತತ್ವ ಪದಗಳು, ಸಣ್ಣ ಕಥೆಗಳು ಯೋಜನೆಯ ಭಾಗವಾಗಿದ್ದು ಮಕ್ಕಳ ಉತ್ಸಾಹದ ಇಮ್ಮಡಿಗೆ ಕಾರಣವಾಗಿತ್ತು. ಪಾಠದ ಸನ್ನಿವೇಶಗಳನ್ನು ನಾಟಕ ರೂಪದಲ್ಲಿ ಅಭಿನಯಿಸುವಾಗ ಮಕ್ಕಳು ಉರ್ದು ಮತ್ತು ಕನ್ನಡ ಸಮ್ಮಿಳಿತಗೊಳಿಸಿ ಭಾಷಾ ಕೌಶಲ ಪಡೆಯಲು ಸಾಧ್ಯವಾಯಿತು. ಬಣ್ಣ ಹಚ್ಚುವ ವಿಧಾನ, ಸೀರೆ ತಯಾರಾಗುವ ಬಗೆಯನ್ನು ತಿಳಿಯುವ ಮೂಲಕ ಪ್ರಾದೇಶಿಕ ಉಡುಗೆಯ ಬಗ್ಗೆ ತಿಳಿದರು. ಆದಿವಾಸಿ ಜನಾಂಗಗಳ ಮನೆಗಳಿಗೆ ಭೇಟಿ ನೀಡುವ ಮೂಲಕ ಸ್ಥಳೀಯ ಜನ ಜೀವನದ ಬಗ್ಗೆ ತಿಳಿದರು. ವಿವಿಧ ಚಟುವಟಿಕೆಗಳ ಮೂಲಕ ಮಕ್ಕಳು ಕಂಡುಕೊಂಡ ಅನುಭವಗಳನ್ನು ಬರವಣಿಗೆ ಮಾಡಿಸಿ ಪುಸ್ತಕ ಪ್ರಕಟಣೆ ಮಾಡಿರುವುದು ಯೋಜನೆಯ ಫಲಿತವಾಗಿದೆ.



# ಮುಟ್ಟು ಗುಟ್ಟಲ್ಲ ಅರಿವಿನ ಯೋಜನೆ

2023–24
ಶಿಕ್ಷಕರ ಯೋಜನೆ



**ಜಲಜಾಕ್ಷಿ ಕೆ.ಡಿ.**
**ಶಿಕ್ಷಕರು**
9449254077

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸ.ಹಿ.ಪ್ರಾ.ಶಾಲೆ ಕೋಲ್ಚಾರು, ಇಲ್ಲಿಯ ಸಹಶಿಕ್ಷಕಿ ಜಲಜಾಕ್ಷಿ. ಇವರು ಐಎಫ್ಎಯ ಕಲಿ ಕಲಿಸು ಯೋಜನೆಯಡಿ ನಡೆಸಿದ ಎರಡನೇ ಶೈಕ್ಷಣಿಕ ಯೋಜನೆ 'ಅಂದದ ಬದುಕಿಗೆ ಚೆಂದದ ಉಡುಗೊರೆ, ಬಟ್ಟೆಯಿಂದ ಬಟ್ಟಲಿಗೆ, ಮುಟ್ಟು ಗುಟ್ಟಲ್ಲ' ಶಾಲೆಯ ಆರು ಮತ್ತು ಏಳನೇ ತರಗತಿ ವಿದ್ಯಾರ್ಥಿಗಳ ಜತೆಗೆ ಸಮುದಾಯವನ್ನೂ ಕೂಡ ಭಾಗೀದಾರರನ್ನಾಗಿ ಮಾಡಿಕೊಂಡು ನಡೆಸಿದ ಯೋಜನೆ ಇದಾಗಿದೆ.

ವೈಜ್ಞಾನಿಕವಾಗಿ ಬಹಳಷ್ಟು ಮುಂದುವರೆದ ಈ ಕಾಲದಲ್ಲೂ ಮಹಿಳೆಯರ ಋತುಚಕ್ರದ ಬಗೆಗೆ ಇಂದಿಗೂ ಸಮಾಜದಲ್ಲಿ ಹಲವಾರು ಅಂಧಾಚರಣೆಗಳು, ನಂಬಿಕೆಗಳು ಮುಂದುವರೆದುಕೊಂಡು ಬಂದಿವೆ. ಈ ವಿಷಯದ ಬಗ್ಗೆ ಇರುವ ಮಡಿವಂತಿಕೆಯ ಕಾರಣದಿಂದಾಗಿ ಶೇ. 20 ರಷ್ಟು ಹದಿಹರೆಯದ ಮಕ್ಕಳಿಗೆ ತಾವು ಏಕೆ ಋತುಮತಿಗಳಾಗುತ್ತೇವೆ ಎಂಬುದೇ ತಿಳಿದಿಲ್ಲ. ಈ ಕಾರಣದಿಂದಲೇ ಅವರ ಬದುಕಿನಲ್ಲಿ ಉಂಟಾಗುವ ಏರುಪೇರುಗಳು ಅನೇಕ. ಇವುಗಳನ್ನು ವಿದ್ಯಾರ್ಥಿ ದೆಸೆಯಿಂದಲೇ ಹೋಗಲಾಡಿಸಬೇಕೆಂಬ ಉದ್ದೇಶದಿಂದ ಕೈಗೊಂಡ ಯೋಜನೆ ಇದಾಗಿದೆ. ಏಕಕಾಲಕ್ಕೆ ವಿಜ್ಞಾನಕ್ಕೂ, ಸಮಾಜ ವಿಜ್ಞಾನಕ್ಕೂ ಸಂಬಂಧಿಸಿದ ಯೋಜನೆ ಇದಾಗಿದೆ.






ಈ ಯೋಜನೆಯನ್ನು ಎರಡು ಹಂತಗಳಲ್ಲಿ ಕಾರ್ಯಗತಗೊಳಿಸಲಾಗಿದೆ. ಮೊದಲನೆಯದಾಗಿ ವಿದ್ಯಾರ್ಥಿಗಳಿಗೆ ವೈದ್ಯರಿಂದ ಹಾಗೂ ಸಂಪನ್ಮೂಲ ವ್ಯಕ್ತಿಗಳಿಂದ ಶರೀರ ಶಾಸ್ತ್ರದ ಬಗ್ಗೆ ಮತ್ತು ಋತುಚಕ್ರದ ವೈಜ್ಞಾನಿಕ ಕಾರಣಗಳ ಬಗ್ಗೆ ಮಾಹಿತಿ ಕಾರ್ಯಾಗಾರವನ್ನು ಏರ್ಪಡಿಸುವುದು. ಋತುಚಕ್ರದ ಬಗ್ಗೆ ಸಮಾಜದಲ್ಲಿರುವ ಅಪನಂಬಿಕೆ ಮತ್ತು ಆಚರಣೆಗಳನ್ನು ವೈಜ್ಞಾನಿಕ ಕಾರಣಗಳೊಂದಿಗೆ ಎದುರಿಸುವುದು. ಎರಡನೆಯದಾಗಿ ಬೀದಿ ನಾಟಕ, ಚಿತ್ರ ರಚನೆ, ಹಾಡು ಕಟ್ಟುವಿಕೆಯಂತಹ ಕಲಾ ಸಮ್ಮಿಳಿತ ಚಟುವಟಿಕೆಗಳೊಂದಿಗೆ ಸಾಮಾಜಿಕ ಜಾಗೃತಿಯನ್ನು ಮೂಡಿಸುವುದು. ಪ್ರತೀ ಪ್ರದರ್ಶನದ ನಂತರ ವಿದ್ಯಾರ್ಥಿಗಳು ತಮ್ಮ ಸಂಬಂಧಿಕರಿಗೆ ಹಾಗೂ ಮಿತ್ರರಿಗೆ ಪತ್ರವನ್ನು ಬರೆಯುವ ಮೂಲಕ ತಮ್ಮ ಅನುಭವಗಳನ್ನು ಹಂಚಿಕೊಂಡು ಸಾಮಾಜಿಕ ಜಾಗೃತಿಯನ್ನು ವಿಸ್ತರಿಸುವಂತೆ ಮಾಡಿರುವುದು ಈ ಯೋಜನೆಯ ಹೆಚ್ಚುಗಾರಿಕೆ.

> ಮುಟ್ಟಿನ ಬಗೆಗಿನ ಮೂಢನಂಬಿಕೆಗಳು ಮತ್ತು ಮಡಿವಂತಿಕೆಯಿಂದ ಮುಂದಿನ ಪೀಳಿಗೆಯನ್ನಾದರೂ ಮುಕ್ತವಾಗಿಸಬೇಕೆಂಬ ಬಯಕೆಗೆ ಈ ಯೋಜನೆ ಬಹಳಷ್ಟು ಅನುಕೂಲಗಳನ್ನು ಮಾಡಿಕೊಟ್ಟಿದೆ.
> – ಜಲಜಾಕ್ಷಿ ಕೆ.ಡಿ., ಶಿಕ್ಷಕರು.

# ಮಕ್ಕಳ ಗೊಂಬೆರಾಮ



**ಮಲ್ಲಿಕಾರ್ಜುನ ವಿ ಕೋರಳ್ಳಿ**
**ಶಿಕ್ಷಕರು**
7353069191

ತೊಗಲು ಗೊಂಬೆಗಳನ್ನು ತಯಾರಿಸಿ ಆಡಿಸುವ ಮೂಲಕ ಪಠ್ಯವನ್ನು ಕಲಿ ಕಲಿಸು ಕಲಾಂತರ್ಗತ ಕಲಿಕೆಗೆ ಅಳವಡಿಸುವ ಯೋಜನೆಯನ್ನು ರೂಪಿಸಿದವರು ಕಲ್ಬುರ್ಗಿಯ ಕರ್ನಾಟಕ ಪಬ್ಲಿಕ್ ಶಾಲೆ ಎಂ.ಬಿ. ನಗರದ ಚಿತ್ರಕಲಾ ಶಿಕ್ಷಕರಾದ ಮಲ್ಲಿಕಾರ್ಜುನ ವಿ ಕೋರಳ್ಳಿ. ಮಕ್ಕಳ ಭಾಷಾ ಸಾಮರ್ಥ್ಯವನ್ನು ಹೆಚ್ಚಿಸಲು ಆಯ್ದ ಪಾಠ ಮತ್ತು ಪದ್ಯಗಳನ್ನು ಸವಿಸ್ತಾರವಾಗಿ ತಿಳಿಸಿಕೊಟ್ಟು ರಾಜಮನೆತನಗಳ ಪರಿಚಯ ಮಾಡಿ ಆ ವಿಷಯಗಳನ್ನು ನಾಟಕ ರೂಪದಲ್ಲಿ ಮರು ರಚನೆ ಮಾಡುವುದು, ಧ್ವನಿಗಳ ಏರಿಳಿತ ಮೂಲಕ ನಾಟಕದ ಸಂಭಾಷಣೆ, ಪದ್ಯಗಳನ್ನು ಪ್ರಾಸಬದ್ಧವಾಗಿ ಹಾಡುವುದು, ವಚನಗಳನ್ನು ಹಾಡುವುದು ಇವೆಲ್ಲವೂ ಯೋಜನೆಯ ಭಾಗವಾಗಿವೆ.

ಕರ್ನಾಟಕದ ವಿವಿಧ ಭಾಗಗಳಲ್ಲಿ, ಅದರಲ್ಲೂ ಮುಖ್ಯವಾಗಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ತೊಗಲು ಗೊಂಬೆಯಾಟ ನಡೆಯುವ ಸ್ಥಳಗಳ ಪರಿಚಯ ಮಾಡಿಕೊಡಲಾಯಿತು. ತೊಗಲು ಗೊಂಬೆಗಳ ರೇಖಾಚಿತ್ರವನ್ನು ರಚಿಸುವುದು, ತದನಂತರ ಆ ರೇಖಾಚಿತ್ರಗಳನ್ನು ತೊಗಲಿನ ಮೇಲೆ ಬರೆಯುವುದು, ನಂತರ ಬಣ್ಣ ಹಾಕುವುದು, ಹೀಗೆ ವಿಷಯಕ್ಕೆ ಸಂಬಂಧಪಟ್ಟ ಎಲ್ಲಾ ಚಿತ್ರಗಳನ್ನು ಮಕ್ಕಳು ಗೊಂಬೆಗಳಾಗಿ ರಚಿಸಿದರು. ಪಾಠಗಳನ್ನು ನಾಟಕದ ರೂಪಾಂತರ ಮಾಡಿ ಅವುಗಳಿಗೆ ಸಂಭಾಷಣೆ ಸಿದ್ಧಪಡಿಸಲು ಸಂಪನ್ಮೂಲ ವ್ಯಕ್ತಿಯಾಗಿ ನಾಟಕ ಶಿಕ್ಷಕ ಅಶೋಕ್ ತೋಟ್ನಳ್ಳಿ





ಸಹಕರಿಸಿದರು. ಸಮಾಜ ವಿಜ್ಞಾನದ ಆಯ್ದ ಪಾಠಗಳನ್ನು ಹಾಡುಗಳ ರೂಪದಲ್ಲಿ ಬರೆಯಲಾಯಿತು. ನಾಟಕದ ಸಂಭಾಷಣೆ, ಹಾಡುಗಳು, ವಚನಗಳು ಇವುಗಳನ್ನು ಇವುಗಳನ್ನು ರೆಕಾರ್ಡಿಂಗ್ ರೂಮಿನಲ್ಲಿ ಧ್ವನಿ ಮುದ್ರಣವೂ ಮಾಡಲಾಯಿತು. ನಂತರ ಈ ಧ್ವನಿಯನ್ನು ಆಧರಿಸಿ ಪರದೆಯ ಮೇಲೆ ನಾಟಕದ ರೂಪದಲ್ಲಿ ತೊಗಲುಗೊಂಬೆ ಆಟವನ್ನು ಪ್ರದರ್ಶಿಸಲು ಮಕ್ಕಳು ತರಬೇತುಗೊಂಡರು. ಗೊಂಬೆ ಆಟದ ಪ್ರದರ್ಶನದ ಬಿಳಿ–ಪರದೆ ಸುಮಾರು ಹಾಗೂ ನಾಲ್ಕು ಅಡಿ ಅಳತೆಯ ಚೌಕಟ್ಟು ಅದಕ್ಕೆ ಹೊಂದುವಂತೆ ಪ್ರೊಫೈಲ್ ಲೈಟ್ ಹಾಗೂ ಪ್ರೇಕ್ಷಕರಿಗೆ ಕಾಣಿಸುವ ಅಷ್ಟೇ ಕಪ್ಪು ಬಟ್ಟೆಯಿಂದ ಮುಚ್ಚುವ ಹಾಗೆ ಮಾಡಿ ಪರದೆಯ ಹಿಂದಿನ ಭಾಗದಿಂದ ಪರದೆಯ ಮುಂದೆ ಗೊಂಬೆ ಆಟವನ್ನು ಆಡಿಸುವುದು ಈ ಎಲ್ಲ ಕೌಶಲ್ಯಗಳನ್ನು ಮಕ್ಕಳು ಕಲಿಯುವಂತಾಯಿತು.

> ಮಕ್ಕಳ ಗೊಂಬೆರಾಮದ ಪ್ರದರ್ಶನದ ಭಾಗವಾದ ನಾನು ಪ್ರಾರಂಭದಲ್ಲಿದ್ದ ಆತಂಕ, ಅಂಜಿಕೆ ದೂರವಾಗಿ ಕೊನೆ ಹಂತದಲ್ಲಿ ಉತ್ಸಾಹ ತುಡಿತದವರೆಗೆ ಸಂತೋಷ, ಸಡಗರವನ್ನು ಅನುಭವಿಸಿದೆ.
> –ಪ್ರಿಯಾಂಕ, 10ನೇ ತರಗತಿ

ಉಪನ್ಯಾಸ, ಸಂಭಾಷಣೆ, ಹಾಡುಗಳು, ಚಿತ್ರಕಲೆ, ಗೊಂಬೆ ತಯಾರಿಕೆ, ಧ್ವನಿ ಮುದ್ರಣ, ಪರದೆಯ ಹಿಂದೆ ನಿಂತು ಗೊಂಬೆಗಳನ್ನು ಪ್ರೇಕ್ಷಕರ ಮನಮುಟ್ಟುವ ಹಾಗೆ ಕುಣಿಸುವುದು ಈ ಎಲ್ಲ ಚಟುವಟಿಕೆಗಳು ಸಕ್ರಿಯವಾಗಿ ಯೋಜನೆಯ ಪರಿಪೂರ್ಣತೆಗೆ ಸಹಾಯಕ ಎಂಬಂತಿದ್ದವು. "ಯೋಜನೆಯ ಕೊನೆಯಲ್ಲಿ ಗೊಂಬೆ ಆಟದ ರೇಖಾಚಿತ್ರಗಳ ಪ್ರದರ್ಶನ ಮತ್ತು ಪರದೆಯ ಹಿಂದೆ ಗೊಂಬೆಯಾಟ ಪ್ರದರ್ಶನ ಮಾಡಿದ ನಂತರ ಮಕ್ಕಳಿಗೆ ಕಲಿಕೆಯನ್ನು ಕಲಾತ್ಮಕವಾಗಿ ಪಡೆದ ಖುಷಿ ಸಿಕ್ಕಿತು." ಎಂಬುದು ಸಂಘಟಕರ ಅಭಿಪ್ರಾಯವಾಗಿದೆ. ಮಕ್ಕಳು ತಯಾರಿಸಿದ ತೊಗಲು ಗೊಂಬೆಗಳನ್ನು ಶಾಲೆಯಲ್ಲಿ ಪ್ರದರ್ಶನ ಗ್ಯಾಲರಿ ಮಾಡಿಕೊಂಡು ಪ್ರದರ್ಶಿಸಲಾಗುತ್ತಿದೆ.



# ಮಾವು ನಾವು



**ಉಜ್ವಲ್ ಯು.ವಿ.**
**ಕಲಾವಿದರು**
9900772221

ಕಡಲ ತಡಿಯ ಜಿಲ್ಲೆ ದಕ್ಷಿಣ ಕನ್ನಡದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಉಳಾಯಿಬೆಟ್ಟು. ಇಲ್ಲಿ ಆರ್ಥಿಕ ಅಧ್ಯಯನದ 'ಮಾವು ನಾವು' ಎಂಬ ಕಲಾ ಸಂಯೋಜಿತ ಕಲಿಕೆಯನ್ನು ಹಮ್ಮಿಕೊಂಡವರು ಕಲಾವಿದರಾದ ಉಜ್ವಲ್ ಯು.ವಿ.

ಮಕ್ಕಳ ಕೈ ಬೆರಳುಗಳ ಅಚ್ಚುಗಳನ್ನು ಮಾವಿನ ಚಿತ್ರದೊಳಕ್ಕೆ ಪಡಿಮೂಡಿಸುವ ಒಂದು ವಿನೂತನ ಚಟುವಟಿಕೆ ಹಾಗೂ ರಂಗಗೀತೆಗಳ ಮೂಲಕ ಮಾವಿನ ವಿಷಯಗಳೊಂದಿಗೆ ಮಕ್ಕಳು ಬೆರೆಯಲು ಅವಕಾಶ ಮಾಡುವ ಮೂಲಕ ಯೋಜನೆಯ ಮೊದಲ ಹೆಜ್ಜೆ ಆರಂಭವಾಗಿತ್ತು. ಒಗಟುಗಳು ಹಾಗೂ ಹಾಡುಗಳೊಂದಿಗೆ ಮಾವಿನ ವೈಜ್ಞಾನಿಕ ಹೆಸರುಗಳು, ಜಾತಿಗಳು ಇದರ ಕುರಿತಾಗಿ ಮಕ್ಕಳ ಅರಿವನ್ನು ಕಲಾ ಸಂಯೋಜಿತವಾಗಿ ಹೆಚ್ಚಿಸುವಂತಹ ಚಟುವಟಿಕೆ ನಡೆಯಿತು.

ಶಾಲೆಗೆ ಸಮೀಪದಲ್ಲಿರುವ ಪಿಲಿಕುಳಕ್ಕೆ ಕ್ಷೇತ್ರ ಭೇಟಿ ಹಾಗೂ ಅಲ್ಲಿ ಮಾವಿನ ಎಲೆಗಳನ್ನು ತೆಗೆದುಕೊಂಡು ಅದರ ಅಚ್ಚನ್ನು ಬಿಡಿಸುವ ಒಂದು ಸುಂದರ ಪ್ರವಾಸ ನಡೆಯಿತು. ಚರ್ಚೆ ಸಂವಾದಗಳ ಮೂಲಕ ಮಾವಿನ ಬಗ್ಗೆ ಹೆಚ್ಚಿನ ವಿವರ





ತಿಳಿದುಕೊಳ್ಳುವುದಲ್ಲದೆ, ಮಾವು ಅಲ್ಲದೆ ಇತರ ಸಸ್ಯಗಳ ಪರಿಚಯವನ್ನು ಮಕ್ಕಳು ಮಾಡಿಕೊಂಡರು. ಸಂಪನ್ಮೂಲ ವ್ಯಕ್ತಿಗಳಿಂದ ನಟನೆಯ ಮೂಲಕ ಮಾವಿನ ಒಂದಷ್ಟು ಸಂಗತಿಗಳನ್ನು ತಿಳಿಸುತ್ತಾ, ಇದನ್ನು ಪಥ್ಯಕ್ಕೆ ಹೇಗೆ ಅಳವಡಿಸಿಕೊಳ್ಳುವುದು, ಆ ಪಥ್ಯ ಮತ್ತು 'ಮಾವು ನಾವು' ಹೇಗೆ ಅಂತರ್ ಸಂಬಂಧಿತವಾಗಿದೆ ಎಂಬುದನ್ನು ಮಕ್ಕಳು ನಟನೆ ಮತ್ತು ಹಾಡುಗಳ ಮೂಲಕ ಆನಂದಿಸುತ್ತಾ ತಿಳಿದರು. ಪರಿಸರದ ಜೀವಿಗಳ ಮಾದರಿಯನ್ನು ಕ್ರಾಫ್ಟ್ ಮೂಲಕ ಕಲಿಕೆ, ಮಾವು ಶೇಖರಣಾ ಗೋದಾಮಿಗೆ ಭೇಟಿ ಕೂಡ ಕಲಿಕೆಯ ಭಾಗವಾಗಿದೆ.

> ಈ ಯೋಜನೆಯ ಭಾಗವಾಗಿ ಪಾಲ್ಗೊಳ್ಳುತ್ತಿರುವ ಅನುಭವಗಳು ಚೇತೋಹಾರಿಯಾಗಿವೆ. ವಿದ್ಯಾರ್ಥಿಗಳಿಗೆ ತಿಳಿದಿರುವ ಮಾವಿನ ವಿಷಯ ಜ್ಞಾನವನ್ನು ಕಲಾ ಅಂತರ್ಗತಗೊಳಿಸುವ ಪ್ರಕ್ರಿಯೆ ಮಕ್ಕಳ ಬೆಳವಣಿಗೆಗೆ ಸಹಾಯವಾಗುತ್ತಿದೆ.
> –ಚೇತನ್ ಕೊಪ್ಪ, ಅಧ್ಯಾಪಕರು

'ಕಣ್ಣಾ ಮುಚ್ಚೆ ಅದರಾಚೆ' ಎಂಬ ಮಕ್ಕಳ ಮಾಸಪತ್ರಿಕೆಯನ್ನು ಬಿಡುಗಡೆ ಮಾಡಲಾಯಿತು. ಮಂಗಳೂರಿನ ನಂದಿನಿ ಡೈರಿ ಭೇಟಿಯಲ್ಲಿ ಮ್ಯಾಂಗೋ ಲಸ್ಸಿ ಕುರಿತು ತಿಳುವಳಿಕೆ, ಪಚ್ಚನಾಡಿಯ ಡಂಪಿಂಗ್ ಯಾರ್ಡ್ ಭೇಟಿಯಲ್ಲಿ ಕಸದ ವಿಲೇವಾರಿ ಕುರಿತು ಚರ್ಚೆ, ಮಾವಿನ ತೋಟಕ್ಕೆ ಭೇಟಿಯಲ್ಲಿ ವಿವಿಧ ತಳಿಗಳ ವೀಕ್ಷಣೆ ಮಾಡಲಾಯಿತು.'ಮಾವು–ನಾವು ನಮ್ಮಂಗಡಿ' ಎಂಬ ಹೆಸರಲ್ಲಿ ಮಾವಿನ ತಿನಿಸುಗಳ ಮಾರಾಟ ಮತ್ತು ಅದರಿಂದ ಬಂದ ಹಣವನ್ನು 'ಟೂರ್ ಡಬ್ಬಿ'ಎಂಬ ಉಳಿತಾಯ ಖಾತೆಯ ಆರಂಭ ಮಾಡಲಾಯಿತು. ಮಾವಿನ ಸುತ್ತ ಹತ್ತಾರು ವಿಷಯಗಳನ್ನು ತಿಳಿಯುವುದರ ಜೊತೆಗೆ ಕಲಾಂತರ್ಗತವಾದ ಹೊಸ ಚಟುವಟಿಕೆಗಳಿಗೆ ಮಕ್ಕಳು ತೆರೆದುಕೊಂಡರು.

# ಪರಿಸರ ರಂಗಭೂಮಿ

2023-24
ಕಲಾವಿದರ ಯೋಜನೆ



ಗಿರೀಶ್ ಕೆ.ಆರ್.
ಕಲಾವಿದರು
7259926431

ಪರಿಸರದ ಜೊತೆಗೆ ಸಹಜ ಬದುಕು ಮತ್ತು ರಂಗ ತರಬೇತಿ ಶಿಕ್ಷಣದ ಕಲಾಂತರ್ಗತ ತರಬೇತಿಯನ್ನು ಮಂಡ್ಯ ಜಿಲ್ಲೆ ಪಾಂಡವಪುರ ತಾಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕರ ಶಾಲೆ ಮೇಲುಕೋಟೆಯಲ್ಲಿ ನಡೆಸಿದವರು ಕಲಾವಿದರಾದ ಗಿರೀಶ್ ಕೆ.ಆರ್. ಶಾಲೆಯ ಐದರಿಂದ ಏಳನೇ ತರಗತಿಯ 35 ಮಕ್ಕಳು ಈ ಕಲಾಂತರ್ಗತ ಚಟುವಟಿಕೆಯಲ್ಲಿ ಭಾಗಿಯಾಗಿದ್ದರು.

ಸಂಪನ್ಮೂಲ ವ್ಯಕ್ತಿಗಳ ಸಹಾಯದಿಂದ ಮಂಡ್ಯ ಜಿಲ್ಲೆಯ ಮೂಡಲಪಾಯ ಯಕ್ಷಗಾನ ಹೆಜ್ಜೆ ತರಬೇತಿಯ ಕಾರ್ಯಗಾರದಲ್ಲಿ ನಡಿಗೆ ಮತ್ತು ಚಲನೆಯನ್ನು ಮಕ್ಕಳು ತಿಳಿಯುವುದರ ಮೂಲಕ ಕಲಾಂತರ್ಗತ ಕಲಿಕೆಗೆ ತೆರೆದುಕೊಂಡರು. ಮಾತುಗಾರಿಕೆಯ ಚಟುವಟಿಕೆಯಲ್ಲಿ ಅಕ್ಷರ ದೋಷ ಮತ್ತು ಪದದ ಉಚ್ಚಾರಣೆಯನ್ನು ಗುರುತಿಸಿಕೊಳ್ಳಲು ತೊಡಗಿದರು. ಮಕ್ಕಳಲ್ಲಿರುವ ಬಣ್ಣದ ಅರಿವು ಮತ್ತು ಸೃಜನಾತ್ಮಕ ಯೋಚನೆ ಹೆಚ್ಚಿಸಲು ಚಿತ್ರಕಲೆ ಕಾರ್ಯಾಗಾರ ನಡೆಸಲಾಯಿತು. ಗಿಡ ನೆಡಿ ಎಂಬ ಚಟುವಟಿಕೆಯಲ್ಲಿ ಪರಿಸರ ಗೀತೆಗಳ ಅಭ್ಯಾಸ, ವಿವಿಧ ಗಿಡಗಳ ಪರಿಚಯ, ಇವು ಪರಿಸರದೊಂದಿಗಿನ ಕಲಾ ಸಂಯೋಜಿತ ಕಲಿಕೆಗೆ ಸಹಾಯ ಮಾಡಿದವು. ಸ್ವರ ಮತ್ತು ಶಬ್ದಗಳ ಜೊತೆಗೆ ಆಟದ ಮೂಲಕ ಅಭಿವ್ಯಕ್ತಿ ಮತ್ತು ಧ್ವನಿಗಳನ್ನು ಅಭ್ಯಾಸ ಮಾಡಿದರು. ಮಣ್ಣಿನ ಆಕೃತಿ ತಯಾರಿಕೆಯಲ್ಲಿ ಮಣ್ಣಿನ ಆಭರಣ ವಿವಿಧ ಆಕೃತಿಗಳ ತಯಾರಿ ಮೂಲಕ ಮಣ್ಣಿನ ಜೊತೆ ಮಕ್ಕಳು ಬೆರೆತರು. ಮೂಕಾಭಿನಯ, ಅಭಿನಯ ಗೀತೆ, ಕನಸಿನ ಮರ ಎಂಬ ಮರದ






ಮೇಲೆ ತಮ್ಮ ಕನಸುಗಳನ್ನು ಬರೆಯುವ ಚಟುವಟಿಕೆ, ರಂಗಗೀತೆ, ರಂಗಾಟಗಳು, ಕಾಡಿನೆಡೆಗೆ ನಡಿಗೆ, ಅನುಕರಣೆ ಮತ್ತು ಗ್ರಹಿಕೆ ಈ ಎಲ್ಲ ಚಟುವಟಿಕೆಗಳು ಕಲಾ ಸಂಯೋಜಿತವಾಗಿ ಪರಿಸರದ ಕಲಿಕೆಗೆ ಸಹಕಾರಿ ಆದವು. ಪರಿಸರದ ಕುರಿತಾಗಿ ಸ್ವರಚಿತ ಚಿಕ್ಕ ಪದ್ಯಗಳ ರಚನೆ, ಪಠ್ಯದ ಪದ್ಯಗಳನ್ನು ಸಂಗೀತದ ಮೂಲಕ ಹಾಡುವುದು, ಪಠ್ಯವನ್ನು ನಾಟಕವಾಗಿ ಅಭಿನಯಿಸುವುದು, ತನ್ನ ಸುತ್ತಲಿನ ಪರಿಸರದ ಬಗ್ಗೆ ಹೆಚ್ಚಿನ ಕಾಳಜಿ ಎಲ್ಲವೂ ಯೋಜನೆಯ ಫಲಿತಾಂಶಗಳಾಗಿವೆ.

ಮಕ್ಕಳಲ್ಲಿ ಭಾವನಾತ್ಮಕ ಚಿಂತನೆಯ ಕೌಶಲ, ಗುಂಪಿನಲ್ಲಿ ನಾಯಕತ್ವದ ಕೌಶಲ, ಪಠ್ಯವನ್ನೇ ನಾಟಕವಾಗಿ ಅಭಿನಯಿಸುವುದು, ರಂಗಭೂಮಿಯ ಮೂಲಕ ಪರಿಸರವನ್ನು ನೋಡುವುದು ಈ ಎಲ್ಲ ಕಾರ್ಯಗಳು ಈ ಯೋಜನೆಯ ಮುಂದಿನ ಭಾಗದಲ್ಲಿ ನಡೆಯಲಿವೆ. ●

> "ಮಕ್ಕಳಿಗೆ ಪಠ್ಯವನ್ನು ಅರ್ಥೈಸಲು ಈ ಯೋಜನೆಯ ಚಟುವಟಿಕೆಗಳು ಸಹಾಯಕವಾದವು. ಮಕ್ಕಳು ಗುಂಪು ಚಟುವಟಿಕೆಗಳಲ್ಲಿ ಭಾಗವಹಿಸಿದ್ದರಿಂದ ಒಬ್ಬರನ್ನೊಬ್ಬರು ಅರಿತುಕೊಳ್ಳಲು ಸಹಾಯವಾಯಿತು. ಇದರಿಂದ ಮಕ್ಕಳ ಸಂಕುಚಿತ ಮನೋಭಾವ ಕಡಿಮೆಯಾಗಿ ಮುಕ್ತವಾಗಿ ಸಂವಹಿಸಲು ತೊಡಗಿಸಿಕೊಂಡಿದ್ದಾರೆ. ನಮ್ಮ ಶಾಲೆಯ ವಾತಾವರಣವೇ ಬದಲಾಗಿ ಹಸಿರಿನಿಂದ ಕಂಗೊಳಿಸುತ್ತಿದೆ.
>
> –ಸಂತಾನ ರಾಮನ್,
> ಮುಖ್ಯಶಿಕ್ಷಕರು

# ಹೆಸರಾದ ಪಟ್ಟಣ ಬಸರೂರು

**2023-24**
**ಕಲಾವಿದರ ಯೋಜನೆ**



**ಪೃಥ್ವಿನ್ ಕೆ.**
**ಕಲಾವಿದರು**
9972393795

ಶಾಸನಗಳು ಮತ್ತು ಪ್ರಾಗೈತಿಹಾಸಿಕ ಕುರುಹುಗಳನ್ನು ತನ್ನೊಳಗೆ ಇರಿಸಿಕೊಂಡಿರುವ ಊರು ಉಡುಪಿ ಜಿಲ್ಲೆಯ ಬಸರೂರು. ಈ ಪಟ್ಟಣಕ್ಕೆ ಸಮೀಪದಲ್ಲಿರುವ ಹಳ್ಳಿ ಹಕ್ಲಾಡಿ. ಸರಕಾರಿ ಪ್ರೌಢಶಾಲೆ, ಹಕ್ಲಾಡಿ, ಬೈಂದೂರು ವಲಯ ಇಲ್ಲಿನ ಎಂಟನೇ ತರಗತಿಯ ವಿದ್ಯಾರ್ಥಿಗಳನ್ನು ಕಲಾಂತರ್ಗತ ಕಲಿಕಲಿಸು ಯೋಜನೆಗೆ ಒಳಪಡಿಸಿದವರು ರಂಗಭೂಮಿ ಕಲಾವಿದ ಹಾಗೂ ಬೆಳಕಿನ ವಿನ್ಯಾಸಗಾರರಾದ ಪೃಥ್ವಿನ್ ಕೆ.

ರಂಗಭೂಮಿಯ ಹಾಡು, ನೃತ್ಯ, ರಂಗಾಟದಂತಹ ಚಟುವಟಿಕೆಗಳ ಜೊತೆಗೆ ಮಕ್ಕಳು ಶಾಸನಗಳ ಅಧ್ಯಯನಕ್ಕೆ ತೊಡಗಿದರು. ತಮ್ಮ ಊರಿಗೆ ಆ ಹೆಸರು ಬರಲು ಕಾರಣ, ಪುರಾತನ ಕಥೆಗಳು, ದಂತಕಥೆಗಳು ಹೀಗೆ ಲಭ್ಯ ಮಾಹಿತಿ ಆಧರಿಸಿ ತಾವೇ ಕಥೆ



ಬರಹ, ವರದಿ ಬರಹ, ಚಿತ್ರ ಬರೆಯುವ ಮೂಲಕ ಕಲಾ ಅಂತರ್ಗತ ಕಲಿಕೆ ಸಾಗಿತ್ತು. ಪ್ರಾಚ್ಯ ಪ್ರಜ್ಞೆಯ ಅರಿವಿನ ತಮ್ಮ ಊರಿನ ಇತಿಹಾಸದ ಕುರುಹುಗಳನ್ನು ಚಿತ್ರಿಸುವುದು, ಶಾಸನಗಳನ್ನು ಓದುವುದು, ಶಾಸನಗಳ ವಿಧಗಳ ಬಗ್ಗೆ ತಿಳಿಯುವುದು, ಅವುಗಳ ಸಂರಕ್ಷಣೆ ಬಗ್ಗೆ ಮಕ್ಕಳು ಕ್ರಿಯಾಶೀಲರಾದರು. ರಂಗ ಪ್ರಯೋಗಕ್ಕೆ ಅಣಿಯಾದರು.

ಶಾಸನಗಳ ಬಗ್ಗೆ ಒಂದಿಷ್ಟು ಅಧ್ಯಯನ, ಅದರ ಪ್ರಕಾರಗಳು ಅದರ ವಿಭಿನ್ನತೆ ಹೀಗೆ ಶಾಸನಗಳ ಕುರಿತು ಮಕ್ಕಳು ಆಸಕ್ತಿಯುತವಾಗಿ ಅರಿಯುವಂತಹ ಚಟುವಟಿಕೆಗಳು ನಡೆದವು. ಶಾಸನಗಳ ಮೇಲೆ ಕೆತ್ತಿದ ಚಿತ್ರಗಳನ್ನು ಅಷ್ಟೇ ಗಮನಿಸಿ



ಗುರುತಿಸುತ್ತಿದ್ದ ಮಕ್ಕಳಿಗೆ ಅದರ ಅಚ್ಚು ತೆಗೆದು ಇನ್ನೂ ಸ್ವಲ್ಪ ಆಳದ ಅಧ್ಯಯನ ಮಾಡುವುದು ಹೇಗೆ? ಎಂಬುದನ್ನು ಸಂಪನ್ಮೂಲ ವ್ಯಕ್ತಿಗಳಿಂದ ತಿಳಿಸಿಕೊಟ್ಟಾಗ ಅವರ ಕುತೂಹಲ ಹೆಚ್ಚಾಯಿತು. ಶಾಸನದ ಅಚ್ಚು ತೆಗೆಯುವ ಮೂಲಕ ಮಕ್ಕಳು ತಮ್ಮ ಬಸರೂರಿನ ಶಾಸನಗಳ ಬಗ್ಗೆ ವಿಶೇಷ ಮಾಹಿತಿ ಪಡೆದರು.



ಇತಿಹಾಸಕ್ಕೆ ಸಂಬಂಧಿಸಿದ ಶಾಸನಗಳ ಅಧ್ಯಯನದಲ್ಲಿ ಕೇವಲ ಸಂಶೋಧನಾತ್ಮಕ ನೋಟವಲ್ಲದೆ ಕಲಾತ್ಮಕ ನೋಟವು ಮುಖ್ಯ ಎನ್ನುವ ಶಾಸನ ಭೇಟಿ ಕಾರ್ಯಕ್ರಮವನ್ನು ಮಕ್ಕಳು ಬಹಳ ಇಷ್ಟ ಪಟ್ಟರು. ಯೋಜನೆಯ ಪ್ರತಿಯೊಂದು ಚಟುವಟಿಕೆಗಳು ಮಕ್ಕಳಿಗೆ ಕಲಾ ಜಗತ್ತನ್ನೇ ತೆರೆದಿಟ್ಟಿತು.
– ಪೃಥ್ವಿನ್ ಕೆ.

ಕಲಾ ಸಂಯೋಜಿತ ಕಲಿಕೆಯಲ್ಲಿ ಮಧುಬನಿ ಆರ್ಟ್, ವರ್ಲಿ ಆರ್ಟ್, ಹಸೆ ಚಿತ್ರಗಳ ಚಿತ್ತಾರವನ್ನು ಗೋಡೆ ಚಿತ್ರದಲ್ಲಿ ಬರೆಯುವುದು, ಕವನ ರಚನೆ,ಬಸರೂರಿನ ಕಾಲೇಜು ಮ್ಯೂಸಿಯಂ ಭೇಟಿ, ಅಲ್ಲಿನ ದೇವಾಲಯಗಳ ವೀಕ್ಷಣೆ, ಇವು ಸ್ಥಳೀಯ ಇತಿಹಾಸದ ಬಗ್ಗೆ ಅರಿವು ಮೂಡಿಸಿದವು.

ಯಕ್ಷಗಾನ, ರಂಗಾಟಗಳು, ಮ್ಯಾಪ್ ಚಿತ್ರ, ನಾಟಕ ಈ ಎಲ್ಲವೂ ಮಕ್ಕಳ ಸೃಜನಶೀಲತೆಯನ್ನು ತೆರೆದಿಟ್ಟವು. ನಾಟಕ ರಚನೆ, ನಿರ್ದೇಶನ, ಪರದೆಯ ಹಿಂದಿನ ತಯಾರಿ, ನಟನೆ, ಮ್ಯೂಸಿಕ್, ಎಲ್ಲವನ್ನು ಮಕ್ಕಳೇ ನಿರ್ವಹಿಸಿ ಈ ಯೋಜನೆಯು ನಾಟಕ ಪ್ರದರ್ಶನದೊಂದಿಗೆ ಮುಕ್ತಾಯಗೊಂಡಿತು.

# ತೇಜಸ್ವಿ ಶಾಲೆ



**ವಿನೀತ್ ಕುಮಾರ್ ಎಂ.**
**ಕಲಾವಿದರು**
9980469984

ಚಿಕ್ಕಮಗಳೂರು ಜಿಲ್ಲೆಯ ಮಲೆನಾಡ ಮಡಿಲಿನ ಸರ್ಕಾರಿ ಪ್ರೌಢಶಾಲೆ ಹಿರೇಗೌಜ. ಮಲೆನಾಡಿನ ಜೀವವೈವಿಧ್ಯತೆಗಳು ಪರಿಸರದ ಆಗುಹೋಗುಗಳು ಇಲ್ಲಿನ ಮಕ್ಕಳಿಗೆ ಸಹಜ ಅನುಭವಕ್ಕೆ ಬರುತ್ತವೆ. ತೇಜಸ್ವಿ ಅವರ ಬರಹಗಳಲ್ಲೂ ಮಲೆನಾಡು ಹಾಸು ಹೊಕ್ಕಾಗಿದೆ. ತೇಜಸ್ವಿಯವರ ಪರಿಸರದ ಕಥೆ ಪುಸ್ತಕವನ್ನು ಆಧಾರವಾಗಿಟ್ಟುಕೊಂಡು 'ಗಮನಿಸುವಿಕೆ', 'ಗ್ರಹಿಸುವಿಕೆ' ಮತ್ತು 'ನಂಬಿಕೆ' ಎಂಬ ವಿಷಯಗಳ ಮೂಲಕ ಕಲಿ ಕಲಿಸು ಯೋಜನೆಯಲ್ಲಿ 'ತೇಜಸ್ವಿ ಶಾಲೆ' ಎಂಬ ಕಲಾ ಅಂತರ್ಗತ ಪ್ರಯೋಗ ನಡೆಸಿದವರು ಚಿಕ್ಕಮಗಳೂರು ಜಿಲ್ಲೆಯ ವಿನೀತ್ ಕುಮಾರ್ ಎಂ. ಇಲ್ಲಿನ ಹಿರೇಗೌಜ ಪ್ರೌಢಶಾಲೆಯ ಎಂಟು ಮತ್ತು ಒಂಬತ್ತನೇ ತರಗತಿಯ ವಿದ್ಯಾರ್ಥಿಗಳನ್ನು ರಂಗ ಶಿಕ್ಷಣದ ಮೂಲಕ ಕಲಾ ಸಂಯೋಜಿತ ಕಲಿಕೆಯಲ್ಲಿ ತೊಡಗಿಸಿಕೊಳ್ಳಲಾಗಿದೆ.

ಪರಿಸರದ ಕಥೆಗಳಲ್ಲಿ ಬರುವ ಅವಾಂತರದ ಸೀನಪ್ಪ ಕಥೆಗೂ ಎಂಟನೇ ತರಗತಿಯ ಕನ್ನಡ ಪಾಠದಲ್ಲಿ ಬರುವ ಆಟೋರಿಕ್ಷಾದ ರಸಪ್ರಸಂಗಗಳು ಪಾಠಕ್ಕೂ, ಪರಿಸರದ ಕಥೆಗಳಲ್ಲಿನ ಇತರ ಕಥೆಗಳಿಗೆ ಮಗ್ಗದ ಸಾಹೇಬ, ರಾಮಧಾನ್ಯ ಚರಿತೆಯಂತಹ ಕನ್ನಡ ಪಾಠಗಳನ್ನು ಪಠ್ಯಕ್ಕೆ ಅಂತರ್ಗತಗೊಳಿಸಿ ತೇಜಸ್ವಿಯವರ ಪರಿಸರದ ಕಥೆಗಳಲ್ಲಿನ ಸಾಮ್ಯತೆಗಳನ್ನು ಈ ಪ್ರಯೋಗದಲ್ಲಿ ತೆರೆದಿಡಲಾಗಿದೆ. ತೇಜಸ್ವಿಯವರ ಬರಹಗಳಲ್ಲೂ ಹಾಗೂ ಈ ಪಾಠಗಳಲ್ಲೂ ಇರುವ ಸಾಮ್ಯತೆಯನ್ನು ಗುರುತಿಸುವ ಮೂಲಕ ಮಕ್ಕಳಲ್ಲಿ ಗುರುತಿಸುವಿಕೆ, ಗ್ರಹಿಸುವಿಕೆ ಮತ್ತು ನಂಬಿಕೆಯ ಕೌಶಲಗಳನ್ನು ಬೆಳೆಸಿಕೊಳ್ಳುತ್ತಾ ಸಾಗುವಂತೆ ಮಾಡಲಾಗಿದೆ.





ಒಂಬತ್ತನೇ ತರಗತಿಯ ಸಮಾಜ ವಿಜ್ಞಾನ ವಿಷಯದ ಜಗತ್ತಿನ ಪ್ರಮುಖ ನಾಗರಿಕತೆಗಳು ಪಾಠದಲ್ಲಿನ ಅಂಶಗಳಿಗೂ ತೇಜಸ್ವಿಯವರ “ಮಿಸ್ಸಿಂಗ್ ಲಿಂಕ್” ಕಾದಂಬರಿಗೂ ಇರುವ ಸಾಮ್ಯತೆಯನ್ನು ಕೂಡ ಮಕ್ಕಳು ಗ್ರಹಿಸುವ ಗುರುತಿಸುವ ಚಟುವಟಿಕೆಯಲ್ಲಿ ತೊಡಗಿದ್ದಾರೆ. ರಂಗಾಟಗಳು, ಸಮುದಾಯದ ಜೊತೆಗೆ ತರಗತಿ, ಹಾಡು, ಕುಣಿತ, ಪಕ್ಷಿ ವೀಕ್ಷಣೆ, ಪ್ರವಾಸ, ಫೋಟೋಗ್ರಫಿ ಕಾರ್ಯಾಗಾರ, ಕತೆ ಓದು, ಕತೆ ಬರವಣಿಗೆ, ಕಾಡಿನ ಒಡಲು ಛಾಯಾಚಿತ್ರ ವೀಕ್ಷಣೆ ಇಂತಹ ಚಟುವಟಿಕೆಗಳ ಮೂಲಕ ಮಕ್ಕಳು ತೇಜಸ್ವಿ ಶಾಲೆಯಲ್ಲಿ ವಿನೂತನ ರಂಗ ಪ್ರಯೋಗಗಳೊಂದಿಗೆ ಪಠ್ಯಂತರ್ಗತ ಕಲಿಕೆಯನ್ನು ಮಾಡಿದ್ದಾರೆ. ಯೋಜನೆಯ ಕೊನೆಯಲ್ಲಿ ತೇಜಸ್ವಿಯ ಪಾತ್ರವನ್ನೇ ರಂಗಕ್ಕೆ ತಂದು, ಮಕ್ಕಳಿಗೆ ತೇಜಸ್ವಿ ಕತೆ ಹೇಳುತ್ತಾ, ಆ ಕತೆಗೆ ಮಕ್ಕಳು ತಮ್ಮ ಪಾಠದ ಕತೆಗಳನ್ನು ಸಂಯೋಜಿಸುತ್ತಾ ಒಂದು ನಾಟಕ ಪ್ರದರ್ಶನ ಮಾಡಿ ಮಕ್ಕಳು ತಮ್ಮ ತೇಜಸ್ವಿಯವರ ಶಾಲೆಯ ಕಲಿಕೆಯನ್ನು ಅನಾವರಣಗೊಳಿಸಿದ್ದಾರೆ.

> ತೇಜಸ್ವಿ ಬರಹಗಳಿಗೂ ಪಠ್ಯದ ಕೆಲವು ಪಾಠಗಳಿಗೂ ಇರುವ ಸಾಮ್ಯತೆಯನ್ನು ಗುರುತಿಸುವ ಮೂಲಕ ಗಮನಿಸುವ, ಗ್ರಹಿಸುವ, ಮತ್ತು ನಂಬಿಕೆ ಇಡುವ ವಿಷಯಗಳ ಸುತ್ತ ‘ತೇಜಸ್ವಿ ಶಾಲೆ’ ಎಂಬ ಕಲಾ ಅಂತರ್ಗತ ಪ್ರಯೋಗವನ್ನು ನಿರ್ಮಿಸುವ ಪ್ರಯತ್ನ ಇದಾಗಿದೆ. ಮಕ್ಕಳೊಂದಿಗೆ ವಿವಿಧ ಚಟುವಟಿಕೆಗಳ ಮೂಲಕ ನಡೆಸಿದ ಪ್ರಯೋಗ ಖುಷಿ ಕೊಟ್ಟಿದೆ.
>
> – ವಿನೀತ್ ಕುಮಾರ್ ಎಂ.



# ಹಸೆ ಚಿತ್ತಾರ ಚಿತ್ರಸಂಪುಟ



**ಉಷಾ ಜಿ.ಎ.**
**ಕಲಾವಿದರು**
8660489901

ಮಲೆನಾಡಿನ ಆಚರಣೆ ಮೂಲದ ಜನಪದ ಕಲೆಯಾದ ಆದಿಮ ರೇಖಾಶೈಲಿಯ ಹಸೆ ಚಿತ್ತಾರ ಶೈಲಿಯನ್ನು ಪಠ್ಯಪುಸ್ತಕದಲ್ಲಿ ಮುದ್ರಿತವಾಗಿರುವ ಶಿಷ್ಟ ಚಿತ್ರಗಳಿಗೆ ಪ್ರತಿಯಾಗಿ ಮಕ್ಕಳು ತಮ್ಮದೇ ಆದ ಕಲ್ಪನೆ ಮತ್ತು ಸೃಜನಶೀಲತೆಯೊಂದಿಗೆ ಚಿತ್ರಿಸುವ ಹಸೆ ಚಿತ್ತಾರದ ಕಲಿ ಕಲಿಸು ಪಠ್ಯಂತರ್ಗತ ಯೋಜನೆಯಲ್ಲಿ ತೊಡಗಿಕೊಂಡವರು ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಹಸೆ ಚಿತ್ತಾರ ಕಲಾವಿದೆ ಉಷಾ ಜಿ.ಎ. ಸಾಗರ ತಾಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಂಡಗಳಲೆಯ ಐದು ಮತ್ತು ಆರನೇ ತರಗತಿಯ ಇಪ್ಪತ್ತನಾಲ್ಕು ಮಕ್ಕಳನ್ನು ಈ ಯೋಜನೆಯಲ್ಲಿ ಆಯ್ಕೆ ಮಾಡಿಕೊಂಡು ಮಕ್ಕಳಿಗೆ ಜನಪದೀಯ ಜ್ಞಾನವನ್ನು ನೀಡುವ ಪ್ರಯೋಗವನ್ನು ನಡೆಸಲಾಯಿತು.

ಶಾಲಾ ಪಾಠಗಳ ಸನ್ನಿವೇಶ ಕಾರ್ಡು ಮತ್ತು ಪಾಠಗಳಿಗೆ ಹಸೆ ಚಿತ್ತಾರ ಶೈಲಿ ಮೂಡಿಸುವಲ್ಲಿ, ಮೂರನೇ ತರಗತಿಯ ಇಂಗ್ಲೀಷ್ ಕಾರ್ಡಿಗೆ ಸಂಬಂಧಿಸಿದ ಚಿತ್ರಗಳಿಗೆ ಸಂಬಂಧಿಸಿದಂತೆ ಹಸೆ ಚಿತ್ತಾರ ಮರು ಸೃಷ್ಟಿಸಲಾಗಿದೆ. ಸ್ಥಳೀಯ ಪ್ರಾದೇಶಿಕ ಹಬ್ಬಗಳಾದ ಆದ್ರೆ ಮಳೆ, ಭೂಮಿ ಹುಣ್ಣಿಮೆ, ಸುಗ್ಗಿ ಹಬ್ಬ ಮುಂತಾದ ಹಬ್ಬಗಳನ್ನು ಆದಿಮ ರೇಖಾ ಸಂಯೋಜನೆ ಹಸೆ ಚಿತ್ತಾರ ಶೈಲಿಯಲ್ಲಿ ಚಿತ್ರಿಸಲಾಗಿದೆ.

ಕನ್ನಡ, ಇಂಗ್ಲೀಷ್ ಮತ್ತು ಹಿಂದಿ ವರ್ಣಮಾಲೆಯನ್ನು ಹಸೆ ಚಿತ್ತಾರ ಶೈಲಿಯಲ್ಲಿ ಮಕ್ಕಳು ಬರೆದಿದ್ದಾರೆ. ಶಾಲಾ ಗೋಡೆಗಳಿಗೆ ಮಕ್ಕಳಿಂದಲೇ ಹಸೆ ಚಿತ್ತಾರ ಅಲಂಕಾರ ಮಾಡಿಸಲಾಗಿದೆ. ನೈಸರ್ಗಿಕ ಬಣ್ಣಗಳ ತಯಾರಿಕೆ, ನೈಸರ್ಗಿಕ ಬಣ್ಣಗಳಿಂದ ಬುಟ್ಟಿ ಚಿತ್ತಾರ, ಅಲಂಕಾರ ಮಾಡುವ ಪರಿಕಲ್ಪನೆಯನ್ನು ಈ ಮೂಲಕ ಮಕ್ಕಳು ಪಡೆದರು. ಮಕ್ಕಳಿಂದ ಹಸೆ ಚಿತ್ತೋತ್ಸವ, ಮಕ್ಕಳು ಬಿಡಿಸಿದ ಹಸೆ ಚಿತ್ತಾರಗಳನ್ನು ಸಮುದಾಯ, ಮಕ್ಕಳು ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳು ವೀಕ್ಷಿಸಲು ಒಂದು ಕಲಾಪ್ರದರ್ಶನವನ್ನು ಕೂಡ





ಏರ್ಪಡಿಸಲಾಗಿತ್ತು. ಇದಲ್ಲದೆ ಸಾಗರದ ವಿವಿಧ ಶಾಲೆ ಮತ್ತು ಹಾಸ್ಟೆಲ್‌ಗಳಲ್ಲಿ ಮಕ್ಕಳು ಬಿಡಿಸಿದ ಹಸೆ ಚಿತ್ತಾರ ಪ್ರದರ್ಶನ ಏರ್ಪಡಿಸಲಾಗಿದೆ. ಹಸೆ ಚಿತ್ತಾರಕ್ಕೆ ಸಂಬಂಧಿಸಿದಂತೆ ಮಕ್ಕಳು ಟಿಪ್ಪಣಿ, ಪ್ರಬಂಧ, ಕಿರುಲೇಖನ, ಕವನ, ಜಾನಪದ ಸಂಗ್ರಹಗಳನ್ನು ಕೂಡ ಬರೆದಿದ್ದಾರೆ.

ರಾಜ್ಯ ಅಂತಾರಾಷ್ಟ್ರೀಯ ಮಟ್ಟದ ಹಸೆ ಚಿತ್ತಾರ ಕಲಾವಿದರನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಆಹ್ವಾನಿಸಿ, ಮಕ್ಕಳಿಗೆ ಹಸೆ ಚಿತ್ತಾರದ ಜನಪದೀಯ ಅರಿವನ್ನು ಮೂಡಿಸಲಾಗಿದೆ. ಮಂಡಗಳಲೆ ಊರಿನ ದೀವರು ಸಮುದಾಯದ ಕಲಾವಿದರ ಮನೆಗೆ ಭೇಟಿ ನೀಡಿ ಕಲಾವಿದರ ಸಂದರ್ಶನ, ಅವರು ಬಿಡಿಸುತ್ತಿರುವ ಹಾಗೂ ಈ ಮೊದಲು ಬಿಡಿಸಿದ ಚಿತ್ತಾರಗಳನ್ನು ಮಕ್ಕಳ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗಿದೆ. ಅಂತೆಯೇ ಬಿದಿರಿನ ಬುಟ್ಟಿಗಳ ಮೇಲೆ ಮಕ್ಕಳು ತಮ್ಮ ಕೈಯಿಂದ ಸಗಣಿ ಸಾರಿಸಿ, ಕೆಮ್ಮಣ್ಣು ಹಚ್ಚಿ, ಅಕ್ಕಿ ಹಿಟ್ಟಿನ ಬಣ್ಣ ತಯಾರಿಸಿಕೊಂಡು ಬುಟ್ಟಿಗಳ ಮೇಲೆ ಹಸೆ ಚಿತ್ತಾರವನ್ನು ಚಿತ್ರಿಸಿದ್ದಾರೆ. ಈ ರೀತಿ ಪ್ರಾಯೋಗಿಕ ಕಲಿಕೆಗೆ ಮಕ್ಕಳು ತೆರೆದುಕೊಂಡು ಜನಪದೀಯ ಕಲೆಯನ್ನು ಪಠ್ಯಕ್ಕೆ ಅಂತರ್ಗತಗೊಳಿಸಿಕೊಂಡಿದ್ದಾರೆ.

> ಮಲೆನಾಡಿನ ಸಾಂಪ್ರದಾಯಿಕ ಹಸೆ ಚಿತ್ತಾರದ ಆದಿಮ ರೇಖಾ ಶೈಲಿಯ ವಿನ್ಯಾಸವು ಒಳಗೊಂಡಿರುವ ಸರಳರೇಖೆಗಳು, ಸಮಾನಾಂತರ ರೇಖೆಗಳು, ವೃತ್ತ, ತ್ರಿಭುಜ, ಚೌಕ, ಆಯತ, ವಜ್ರಾಕೃತಿಗಳು, ಷಡ್ಭುಜಾಕೃತಿಗಳು, ಮತ್ತಿತರ ಜ್ಯಾಮಿತಿಯ ಅಂಶಗಳ ಸಂಕೀರ್ಣ ಶೈಲಿಯಲ್ಲಿ ಶಾಲಾ ಪಠ್ಯದ ಕನ್ನಡ, ಇಂಗ್ಲೀಷ್, ಪರಿಸರ, ವಿಜ್ಞಾನ ಪಾಠಗಳಿಗೆ ಸಂಬಂಧಿಸಿದಂತೆ ಇರುವ ಆಧುನಿಕ ವರ್ಣ ಶೈಲಿಯ ಚಿತ್ರಗಳ ಬದಲಿಗೆ ಹಸೆಚಿತ್ತಾರ ಶೈಲಿಯಲ್ಲಿ ಚಿತ್ರಿಸುವ ಶೈಕ್ಷಣಿಕ ಪರಿಕಲ್ಪನೆಯಾಗಿದೆ.
>
> –ಉಷಾ ಜಿ.ಎ.

ಯೋಜನೆಯ ಮುಕ್ತಾಯದ ಹಂತದಲ್ಲಿ ಮಕ್ಕಳು ಯಾವುದೇ ಸನ್ನಿವೇಶ ಕೊಟ್ಟರೂ ಹಸೆ ಚಿತ್ತಾರ ಶೈಲಿಯಲ್ಲಿ ಬರೆಯುವ ಮಟ್ಟದಲ್ಲಿ ಈ ಜನಪದ ಕಲೆಯನ್ನು ಮೈಗೂಡಿಸಿಕೊಂಡಿದ್ದಾರೆ. ಮಕ್ಕಳ ಬರಹಗಳ ಸಂಪಾದಕ ಕೃತಿಯನ್ನು ಕೂಡ ಹೊರತರಲಾಗಿದೆ.

# ಕಾಶ್ಮೀರದ ಅರಳುವ ಮೊಗ್ಗು

2023–24
ರಾಷ್ಟ್ರೀಯ ಶಾಲೆಗಳ
ಯೋಜನೆ

**ಇಂಟರ್‌ನ್ಯಾಷನಲ್ ಎಜುಕೇಶನಲ್ ಇನ್‌ಸ್ಟಿಟ್ಯೂಟ್**
**ಕಾಶ್ಮೀರ**

'ಅರಳುವ ಮೊಗ್ಗು' ಇದು 'ಇಂಟರ್‌ನ್ಯಾಷನಲ್ ಎಜುಕೇಶನಲ್ ಇನ್‌ಸ್ಟಿಟ್ಯೂಟ್' ಎಂಬ ಕಾಶ್ಮೀರದ ಸಂಸ್ಥೆಯ ಮೂಲಕ ಆ ಸಂಸ್ಥೆಯಲ್ಲಿನ ಎಲ್ಲಾ ವಿದ್ಯಾರ್ಥಿಗಳನ್ನು ಅನುಕೂಲಿಸುವ ಕಲಾಂತರ್ಗತ ಶೈಕ್ಷಣಿಕ ಪ್ರಯೋಗದ ಹೆಸರು. ಕಾಶ್ಮೀರದ ಕಠಿಣ ಭೌಗೋಳಿಕ ಪರಿಸ್ಥಿತಿ ಮತ್ತು ಇತರೆ ಆಡಳಿತಾತ್ಮಕ ಕಾರಣಗಳಿಂದಾಗಿ ಈ ವಿದ್ಯಾರ್ಥಿಗಳಿಗೆ ವರ್ಷದಲ್ಲಿ ಕನಿಷ್ಠ ಆರು ತಿಂಗಳು ಶಾಲೆ ತೆರೆದು ಶೈಕ್ಷಣಿಕ ಚಟುವಟಿಕೆಗಳು ನಡೆಯುವ ಸಾಧ್ಯತೆಗಳು ಕೂಡ ಕಡಿಮೆ ಇದೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ಕಲೆಯೆಂಬುದು ಬದುಕಿಗೆ ಸಾಂತ್ವನದ ಆಶಾ ಕಿರಣವಾಗಿ ಮೂಡಲು ಸಾಧ್ಯ.

'ಭಾಂಡ್ ಪಾತೆರ್' ಎಂಬುದು ಕಾಶ್ಮೀರದ ಪ್ರಾಚೀನವಾದ ಜನಪದ ರಂಗಭೂಮಿ ಕಲೆಯಾಗಿದೆ. ಕತೆ, ಸಂಗೀತ, ನೃತ್ಯ ಮತ್ತು ಹಾಸ್ಯದ ಮೂಲಕ ವರ್ತಮಾನವನ್ನು ರಂಗದ ಮೇಲೆ ಪ್ರದರ್ಶಿಸುವ ಈ ಅಪೂರ್ವ ಕಲೆಯ ಜತೆಗೆ ಇನ್ನೊಂದು ಪ್ರಾಚೀನ ಪ್ರಾದೇಶಿಕ ಕಲೆಯಾದ 'ಪಾಪಿರ್ ಮಾಚೆ'ಯನ್ನು ಅಂತರ್ಗತಗೊಳಿಸಿಕೊಂಡು ನಡೆಸುವಂತಹ ಯೋಜನೆ ಇದಾಗಿದೆ. ಪಾಪಿರ್ ಮಾಚೆ ಎಂಬುದು ಕುಶಲ ಕಲಾ ಪ್ರಕಾರವಾಗಿದ್ದು ಇದರಲ್ಲಿ ಕ್ರಾಫ್ಟ್ ಮತ್ತು ಅಲಂಕಾರಿಕ ವಸ್ತುಗಳನ್ನು ಪೇಪರ್ ಮತ್ತು ಅಂಟನ್ನು ಬಳಸಿ ತಯಾರಿಸುವ ಮೂಲಕ ವಿದ್ಯಾರ್ಥಿಗಳು





ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸುತ್ತಾರೆ. ಸ್ಥಳೀಯ ಸಂಸ್ಕೃತಿ ಮತ್ತು ಪರಂಪರೆಯ ಬಗೆಗೆ ವಿದ್ಯಾರ್ಥಿಗಳಲ್ಲಿ ಹೆಮ್ಮೆ ಮತ್ತು ಆಸಕ್ತಿಯನ್ನು ಬೆಳೆಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಜತೆಗೆ ಸ್ಥಳೀಯ ಕಲಾವಿದರೊಂದಿಗೆ ಮುಖಾಮುಖಿ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುವ ಮೂಲಕ ಸ್ಥಳೀಯ ಕಲೆಯ ಆಳವಾದ ಬೇರುಗಳನ್ನು ಪರಿಚಯಿಸುವ ಉದ್ದೇಶವನ್ನೂ ಹೊಂದಿದೆ.

ಹದಿನೆಂಟು ತಿಂಗಳ ಯೋಜನೆಯ ಅಂತಿಮ ಹಂತವಾಗಿ ವಿದ್ಯಾರ್ಥಿಗಳಿಂದ ರಂಗಭೂಮಿ ಪ್ರದರ್ಶನ ಮತ್ತು ಅವರು ತಯಾರಿಸಿದ ಅಲಂಕಾರಿಕ ವಸ್ತುಗಳ ಪ್ರದರ್ಶನ ನಡೆಯಲಿದೆ. ●

> ಶಾಲಾ ಪರಿಸರದಲ್ಲೇ ಲಭ್ಯವಿರುವ ಭಾಂಡ್ ಪಾತೆರ್ ಕಲಾವಿದರನ್ನು ವಿದ್ಯಾರ್ಥಿಗಳ ಜತೆಗೆ ನೇರವಾಗಿ ಒಗ್ಗೂಡಿಸುವುದರಿಂದ ವಿದ್ಯಾರ್ಥಿಗಳಲ್ಲಿ ಸ್ಥಳೀಯ ಕಲೆಯ ಬಗ್ಗೆ ಹೆಚ್ಚು ಒಲವು, ಗೌರವ ಮೂಡಿಸಲು ಸಾಧ್ಯ ಮತ್ತು ಇದರಿಂದ ವಿದ್ಯಾರ್ಥಿಗಳ ಜ್ಞಾನವನ್ನು ಇನ್ನಷ್ಟು ಹೆಚ್ಚಿಸಬಹುದಾಗಿದೆ.
>
> – ಶೀಬಾ, ಶಿಕ್ಷಕಿ.



# ಮೇರಾ ಘರ್ ಮೊಹಲ್ಲಾ

2023–24
ರಾಷ್ಟ್ರೀಯ ಶಾಲೆಗಳ
ಯೋಜನೆ

**ದೇಹತ್ ಉತ್ಥಾನ್ & ಕಲ್ಚರಲ್ ಸೊಸೈಟಿ**
**ದೆಹಲಿ**

ದೆಹಲಿಯ ಶೈಕ್ಷಣಿಕ ಸಂಸ್ಥೆ 'ದೇಹತ್ ಉತ್ಥಾನ್ & ಕಲ್ಚರಲ್ ಸೊಸೈಟಿ' ಸಂಸ್ಥೆಯ ನೂರ ಅರವತ್ತೈದು ವಿದ್ಯಾರ್ಥಿಗಳಲ್ಲಿ ಬಹುತೇಕರು ಮೂಲ ದೆಹಲಿ ನಿವಾಸಿಗಳಲ್ಲ, ಬೇರೆ ಬೇರೆ ಊರುಗಳಿಂದ ಒಂದೆರಡು ತಲೆಮಾರು ಅಥವಾ ಅದಕ್ಕೂ ಹಿಂದಿನಿಂದ ಇಲ್ಲಿಗೆ ವಲಸೆ ಬಂದು ನೆಲೆಸಿದವರು. ಇವರೆಲ್ಲರ ಸಾಂಸ್ಕೃತಿಕ ಹಿನ್ನಲೆ, ಆಹಾರ ಪದ್ಧತಿ ಇವೆಲ್ಲವೂ ಬೇರೆ ಬೇರೆ. ಇವುಗಳನ್ನೇ ಕೇಂದ್ರವಾಗಿರಿಸಿ ಈ ಸಂಸ್ಥೆಯ ಮೂಲಕ ನಡೆಸಲ್ಪಡುವ ಶೈಕ್ಷಣಿಕ ಕಲಾಂತರ್ಗತ ಪ್ರಯೋಗ ಇದಾಗಿದೆ.

'ಕತ್ವಾರಿಯಾ' ಎಂಬುದು ದೆಹಲಿಯ ಲಾಲ್ ದೊರಾ ಎಂಬ ಭಾಗದ ಒಂದು ಗ್ರಾಮವಾಗಿದೆ. ಬ್ರಿಟಿಷರ ಆಳ್ವಿಕೆಯ ಕಾಲದಿಂದಲೂ ಲಾಲ್ ದೊರಾ ಜನವಸತಿಯು ಬಹಳ ಪ್ರಾಮುಖ್ಯತೆಯನ್ನು ಪಡೆದಿದೆ. ಸ್ವಾತಂತ್ರ್ಯ ನಂತರವೂ ದೆಹಲಿಯ ಆಡಳಿತ ರೀತಿ ನಿಯಮಾವಳಿಗಳಿಂದ ಹೆಚ್ಚು ಬದಲಾವಣೆಗೆ ಒಳಪಟ್ಟ ಈ ಭಾಗವು ನಗರ ಬೆಳೆದಂತೆ ಬೇರೆ ಬೇರೆ ಊರುಗಳಿಂದ ವಲಸೆ ಬಂದ ಜನರಿಂದಾಗಿ ಸಾಂಸ್ಕೃತಿಕವಾಗಿ ವೈವಿಧ್ಯತೆಯನ್ನು ಮತ್ತು ವಿಶಿಷ್ಟತೆಯನ್ನು ಪಡೆದಿದೆ.

ಮುಖ್ಯವಾಗಿ ಈ ಯೋಜನೆಯು ಎರಡು ಹಂತಗಳಲ್ಲಿ ನಡೆಯಲಿದೆ. ಮೇರಾ ಘರ್ ಮತ್ತು ಮೇರಾ ಮೊಹಲ್ಲಾ. ಈ ಹಂತಗಳಲ್ಲಿ ವಿದ್ಯಾರ್ಥಿಗಳು ತಮ್ಮ ತಮ್ಮ ಮನೆಗಳ ಮಾದರಿಗಳನ್ನು ತಯಾರಿಸುವರು. ನಂತರ ತಮ್ಮ ಶಾಲೆಯ ಮಾದರಿಯನ್ನು ಸಿದ್ಧಪಡಿಸುವರು. ತಮ್ಮ ಸಹಪಾಠಿಗಳ ಗುಂಪಿನಲ್ಲಿ ಇವುಗಳನ್ನು ಪ್ರದರ್ಶಿಸಿ ಮಾದರಿಗಳ





ಜತೆಗೆ ಚಿತ್ರಕಲೆ ಹಾಗೂ ಲೇಖನಗಳನ್ನೂ ಕೂಡ ವಿದ್ಯಾರ್ಥಿಗಳು ಬರೆಯುವರು. ಪರಸ್ಪರ ಚರ್ಚಿಸುವ ಮೂಲಕ ಪ್ರತಿ ಮನೆಯ ಸಾಂಸ್ಕೃತಿಕ ಹಿನ್ನಲೆ, ಆಹಾರ ಪದ್ಧತಿ, ಆಚರಣೆಗಳ ಬಗ್ಗೆ ತಿಳಿಯುವರು.

ಅಂತಿಮವಾಗಿ ವಿದ್ಯಾರ್ಥಿಗಳು ತಾವು ರಚಿಸಿದ ಮಾದರಿ ಮತ್ತು ಚಿತ್ರಕಲೆಗಳ ವಸ್ತುಪ್ರದರ್ಶನ ಮತ್ತು ಸಂಗ್ರಹಿಸಿದ ಮಾಹಿತಿ, ಲೇಖನಗಳ ಕುರಿತಾದ ಪುಸ್ತಕವನ್ನು ಪ್ರಕಟಿಸಲಿದ್ದಾರೆ.

> ವಿದ್ಯಾರ್ಥಿಗಳು ಒಂದೇ ಗಲ್ಲಿಯಲ್ಲಿ ಬಹಳ ವರ್ಷಗಳಿಂದ ವಾಸವಿದ್ದರೂ ದೆಹಲಿಯ ಮೂಲ ನಿವಾಸಿಗಳಲ್ಲದ ಕಾರಣ ಮನೆಯಿಂದ ಮನೆಗೆ ಸಂಸ್ಕೃತಿ, ಆಚಾರಗಳು, ಆಹಾರ ಪದ್ಧತಿಗಳು ವಿಶಿಷ್ಟವಾಗಿರುವುದನ್ನು ಮನಗಂಡು ವಿವಿಧತೆಯಲ್ಲಿ ಏಕತೆಯ ತತ್ವವನ್ನು ಅರಿತರು.
>
> – ಬಬೀಶ್, ಶಿಕ್ಷಕ



# ಮಾಲ್ಗುಡಿಯಲ್ಲೊಂದು ಮನೆಯ ಮಾಡಿ

2023-24
ರಾಷ್ಟ್ರೀಯ ಶಾಲೆಗಳ ಯೋಜನೆ

**'ಅರಿವು' ಶಿಕ್ಷಣ ಸಂಸ್ಥೆ**
**ಕರ್ನಾಟಕ,**



ಮೈಸೂರಿನ 'ಅರಿವು' ಶಿಕ್ಷಣ ಸಂಸ್ಥೆ ಇತರೆ ಖಾಸಗೀ ಶಿಕ್ಷಣ ಸಂಸ್ಥೆಗಳಿಗಿಂತ ಭಿನ್ನವಾಗಿ ಪ್ರಾರಂಭಿಕ ಶಿಕ್ಷಣದ ಬಗ್ಗೆ ತನ್ನ ಒಳನೋಟವನ್ನು ಹೊಂದಿದ್ದು, ಕಲೆ ಮತ್ತು ಸಾಹಿತ್ಯಕ್ಕೆ ಪ್ರಾಧಾನ್ಯತೆಯನ್ನು ನೀಡುತ್ತಾ ಶಿಕ್ಷಣವನ್ನು ನೀಡುವ ಉದ್ದೇಶವನ್ನು ಹೊಂದಿದೆ. ಈ ಸಂಸ್ಥೆಯ ಐದು, ಆರು ಮತ್ತು ಏಳನೇ ತರಗತಿಯ ವಿದ್ಯಾರ್ಥಿಗಳಿಗಾಗಿ ನಡೆಸಲ್ಪಡುವ ಸಾಂಸ್ಥಿಕ ಕಲಾಂತರ್ಗತ ಪ್ರಯೋಗ 'ಮಾಲ್ಗುಡಿಯಲ್ಲೊಂದು ಮನೆಯ ಮಾಡಿ' ಆಗಿದೆ.

ಭಾರತದ ಪ್ರಸಿದ್ಧ ಸಾಹಿತಿಗಳಾದ ಆರ್.ಕೆ. ನಾರಾಯಣ್ ಮತ್ತು ಅವರ ಸಹೋದರ ಪ್ರಸಿದ್ಧ ವ್ಯಂಗ್ಯಚಿತ್ರಕಾರರಾದ ಆರ್.ಕೆ. ಲಕ್ಷ್ಮಣ್ ಇವರು ಮೂಲತಃ ಮೈಸೂರಿನವರಾದರೂ, ಸ್ಥಳೀಯರಿಗೆ ಇವರ ಪರಿಚಯ ಇಲ್ಲದಿರುವುದು ವಿಪರ್ಯಾಸ. ಅದರಲ್ಲೂ ಮಕ್ಕಳಿಗೆ ಅವರ ಬಗೆಗೆ ಪಾಠವೂ ಇಲ್ಲ, ಹಾಗಾಗಿ ಅವರ ಬಗ್ಗೆ ತಿಳಿಯುವ





ಅವಕಾಶವೂ ಇಲ್ಲದಾಗಿದೆ. ಈ ಯೋಜನೆಯ ಮೂಲಕ ಇಬ್ಬರು ಮಹಾನ್ ಸಾಹಿತಿಗಳ ಪರಿಚಯದ ಜತೆಗೆ ಅವರ ಸಾಹಿತ್ಯ ಮತ್ತು ವ್ಯಂಗ್ಯ ಚಿತ್ರಗಳ ವಿಶ್ಲೇಷಣೆ, ಅಧ್ಯಯನ ಮತ್ತು ಅಭಿನಯ ಮಾಡುವ ಅವಕಾಶವನ್ನು ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತದೆ.

ಈ ಇಬ್ಬರು ಸಾಹಿತಿಗಳು ತಮ್ಮ ಕೃತಿಗಳಲ್ಲಿ ಚಿತ್ರಿಸಿದ ಮೈಸೂರಿನ ಸ್ಥಳಗಳು, ಜನಜಂಗುಳಿ, ರೈಲು ನಿಲ್ದಾಣ ಇತ್ಯಾದಿಗಳಿಗೆ ವಿದ್ಯಾರ್ಥಿಗಳು ಕ್ಷೇತ್ರ ಭೇಟಿಯನ್ನು ಮಾಡುವ ಮೂಲಕ ಇದೇ ಸ್ಥಳಗಳನ್ನು ಅವರ ಕಣ್ಣುಗಳಲ್ಲಿ ಚಿತ್ರಿಸಲಿದ್ದಾರೆ. ಅಂತಿಮವಾಗಿ 'ಮಾಲ್ಗುಡಿಯ ದಿನಗಳು', 'ಬ್ಯಾಂಕರ್ ಮಾರ್ಗಯ್ಯ' ಮತ್ತು 'ಸ್ವಾಮಿ ಮತ್ತು ಅವನ ಸ್ನೇಹಿತರು' ಕೃತಿಗಳನ್ನು ನಾಟಕ ರೂಪದಲ್ಲಿ ಪ್ರದರ್ಶನ ಮಾಡಲಿದ್ದಾರೆ ಮತ್ತು ಆರ್.ಕೆ. ಲಕ್ಷ್ಮಣ್ ಅವರ ಸಂಗ್ರಹಿತ ಚಿತ್ರಗಳ ಪ್ರದರ್ಶನವನ್ನು ಕೈಗೊಳ್ಳಲಿದ್ದಾರೆ.

> ಆರ್.ಕೆ. ನಾರಾಯಣ್‌ರವರ ಮನೆಯ ಭೇಟಿ ಮತ್ತು ಅವರ ಪುಸ್ತಕಗಳ ಓದನ್ನು ಆಲಿಸಿದ್ದು ಮಕ್ಕಳಿಗೆ ರೋಚಕ ಅನುಭವವನ್ನು ನೀಡಿತು.
> ಅವರ ಕಥೆಯ ಆಳ ಅಗಲಗಳನ್ನು ಮಕ್ಕಳು ವಿಮರ್ಶಿಸಿಕೊಳ್ಳುತ್ತಾ, ಅರ್ಥಮಾಡಿಕೊಳ್ಳುತ್ತಾ ತಮ್ಮ ರಚನೆಯ ಕಥೆಗಳಲ್ಲಿ ಅದನ್ನು ಸೇರಿಸಿಕೊಳ್ಳುತ್ತಾ ಒಳಗೊಂಡಿದ್ದು ಖುಷಿ ಕೊಟ್ಟಿತ್ತು.
> –ಮಂಜುಳಾ, ಶಿಕ್ಷಕಿ



# ಕೊಂತೆ ರೊಟ್ಟಿ ಸುಗ್ಗಿ ಸಂಭ್ರಮ





ಗಂಗಣ್ಣ ವಂದಾಲಿ
ಶಿಕ್ಷಕರು
9035588597

ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಸುಂದರ ಶಾಲೆ ಸರ್ಕಾರಿ ಪ್ರೌಢಶಾಲೆ, ಚನ್ನಳ್ಳಿ. ಸುಗ್ಗಿಯ ಆಚರಣೆಯ ಆಹಾರ ತಯಾರಿಕೆಯಿಂದ ಹಿಡಿದು ವಿವಿಧ ಸಾಂಪ್ರದಾಯಿಕ ಆಹಾರಗಳ ಉತ್ಪಾದನೆ, ಬಳಕೆ, ಆಹಾರ ಧಾನ್ಯಗಳ ಉಪಯೋಗಗಳನ್ನು ಕುರಿತು ಕಲಾ ಸಂಯೋಜಿತ ಕಲಿಕೆಗೆ ಮಕ್ಕಳನ್ನು ಅಣಿಗೊಳಿಸಿದವರು ಶಿಕ್ಷಕರಾದ ಗಂಗಣ್ಣ ವಂದಾಲಿ.

ಸಂಸ್ಕರಿತ ರಾಸಾಯನಿಕಯುಕ್ತ ಆಹಾರಗಳು, ಕೇವಲ ಬಾಯಿಗೆ ರುಚಿ ನೀಡುವ ಆಹಾರವನ್ನು ಸೇವಿಸುವ ಬದಲು ಸಮಕಾಲೀನ ಆಹಾರ ಸೇವನೆಯ ಅಭ್ಯಾಸಗಳನ್ನು ತಿಳಿಸುವ ಉದ್ದೇಶದಿಂದ ಯೋಜನೆ ಸಾಗಿತು. ದೇಶಿಯ ಆಹಾರ ಸಂಸ್ಕರಣಾ ಪದ್ಧತಿಯನ್ನು ಹಿರಿಯ ಮಹಿಳೆಯರಿಂದ ಸಂದರ್ಶನಗಳ ಮೂಲಕ ಸಂಗ್ರಹಿಸಿ ಆಧುನಿಕ ಸಂಸ್ಕರಣಾ ಪದ್ಧತಿಗಳಿಗೆ ಹೋಲಿಸಿ ನೋಡುವ ಹುಡುಕಾಟದ ಕಲಾ ಸಂಯೋಜಿತ ಕಲಿಕೆ ಇದಾಗಿದೆ. ಚನ್ನಳ್ಳಿಯ ವಿಶಿಷ್ಟವಾದ ಆಚರಣೆಯಾದ ಸುಗ್ಗಿಯ ಬೆಳೆ ಒಕ್ಕಲು ಆರಂಭದ ಸಮಯದಲ್ಲಿ ಬರುವ ಸಂಸ್ಕೃತಿ ಸಂಪ್ರದಾಯವನ್ನು ಬಿಂಬಿಸುವ ಮೂಲಕ ಚಟುವಟಿಕೆ ಸಾಗುತ್ತದೆ. ಇಲ್ಲಿನ ವಿಶೇಷ ಹಬ್ಬದ ಆಚರಣೆಯಾದ ಸಕ್ಕರೆಯಿಂದ ತಯಾರಿಸಿದ ಗೌರಿದೇವಿ, ಶಿವ, ಪಾರ್ವತಿ, ಗಣೇಶ ಮತ್ತು ಇನ್ನಿತರ ಮೂರ್ತಿಗಳ ಖರೀದಿ, ಹಾಗೆಯೇ ಎಳ್ಳು-ಚಿಗಳಿ, ಮಿಠಾಯಿ, ಸೌತೆಕಾಯಿ, ಗಜ್ಜರಿ ಇವುಗಳನ್ನು ಹಾಡು ಹಾಡುತ್ತ ನೈವೇದ್ಯ ಮಾಡುವುದು, ಆ ಸಮಯದಲ್ಲಿ ಆಡುವ ಗ್ರಾಮೀಣ ಕ್ರೀಡೆಗಳ ಪರಿಚಯ ಕೂಡ ನಡೆದಿದೆ.








> ಈ ಯೋಜನೆಯಲ್ಲಿ ಹಲವಾರು ಚಟುವಟಿಕೆಗಳನ್ನು ಮಾಡಿಸಲು ಸಾಧ್ಯವಾಗಿದೆ. ಸಕ್ಕರೆ ಬೊಂಬೆ ತಯಾರಿಸುವುದು, ಗೌರಿ ಹಾಡುಗಳ ಸಂಗ್ರಹ ಕಾರ್ಯ ಹೀಗೆ ಹತ್ತು ಹಲವಾರು ಚಟುವಟಿಕೆಗಳಲ್ಲಿ ಎಲ್ಲಾ ಮಕ್ಕಳು ಸಂತಸದಿಂದ ಭಾಗವಹಿಸಿದ್ದಾರೆ.
>
> – ಗಂಗಣ್ಣ ವಂದಾಲಿ

ಇಪ್ಪತ್ತರ ದಶಕಕ್ಕೂ ಮೊದಲು ಗೌರಿ ಹುಣ್ಣಿಮೆಯಲ್ಲಿ ಹಬ್ಬದ ಕೊಂತೆ ರೊಟ್ಟಿಯ ದಿನವೆಂದು ವಿಶೇಷವಾಗಿ ಆಚರಿಸಿ ದೊಡ್ಡಾಟದ ಪ್ರಸಂಗಗಳನ್ನು ಆಡುತ್ತಿದ್ದರು. ಶಾಲಾ ಮಕ್ಕಳಿಗೂ ಈ ದೊಡ್ಡಾಟವನ್ನು ಗಂಗಣ್ಣನವರು ಸದ್ಯದಲ್ಲೇ ಆಡಿಸಲಿದ್ದಾರೆ. ವಿವಿಧ ಧಾನ್ಯಗಳ ಪರಿಚಯ, ಕನಕದಾಸರ 'ರಾಮಧಾನ್ಯ ಚರಿತೆ'ಯ ಪ್ರಸಂಗವನ್ನು ನಾಟಕ ಮಾಡಿಸುವುದು, ವಿವಿಧ ವೃತ್ತಿಯ ಪ್ರದರ್ಶನಗಳು, ರೊಟ್ಟಿಯ ಹಿನ್ನೆಲೆಯನ್ನು ನಾಟಕ ರೂಪಕ್ಕೆ ಇಳಿಸಿ ಕೊಂತೆ ರೊಟ್ಟಿ ಆಚರಣೆಯಲ್ಲಿ ಪ್ರಧಾನವಾಗಿ ಮೂಡಿಸುವುದು. ಈ ರೀತಿಯಲ್ಲಿ ಹಲವು ಚಟುವಟಿಕೆಗಳ ಮೂಲಕ ಸುಗ್ಗಿಯ ಸಂಭ್ರಮವನ್ನು ಮಕ್ಕಳ ಸರ್ವತೋಮುಖ ಬೆಳವಣಿಗೆಯ ಕಲಿಕೆಯ ಭಾಗವಾಗಿ ಸಾಗುವತ್ತ ಯೋಜನೆ ನಡೆಯುತ್ತಿದೆ. ●

# ಅರಳಿ ಕಟ್ಟೆ ತೆರೆದ ವಾಚನಾಲಯ

2024-25
ಶಿಕ್ಷಕರ ಯೋಜನೆ



ಡಾ. ಲಿಂಗರಾಜ ರಾಮಾಪೂರ
ಶಿಕ್ಷಕರು
9964571330

ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂಕಿನ ಸರ್ಕಾರಿ ಪ್ರೌಢಶಾಲೆ ಕಿರೇಸೂರ. ಶಾಲೆಯ ಆಟದ ಮೈದಾನದಲ್ಲಿರುವ ವಿಶಾಲವಾದ ಅರಳಿಮರವನ್ನು ಗಮನಿಸಿ, ಶಾಲೆಯ ಆಂಗ್ಲಭಾಷಾ ಶಿಕ್ಷಕರಾದ ಡಾ. ಲಿಂಗರಾಜ ರಾಮಾಪೂರ ಅವರು ತಮ್ಮ ಶಾಲೆಯ ಎಂಟನೇ ತರಗತಿಯ ಮಕ್ಕಳನ್ನು ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಇಂದು ಅರಳಿಮರವನ್ನು ಕಲಿಕಾ ಕೇಂದ್ರವನ್ನಾಗಿ ರೂಪಿಸಿದ್ದಾರೆ.

ಮರದ ಕೆಳಗೆ, ಸುತ್ತಲೂ ಮುಳ್ಳಿನ ಕಂಟಿಗಳಿಂದ ಕೂಡಿದ್ದವು. ಇಂತಹ ಮರದ ಕೆಳಗೆ ಒಂದು ಕಲಿಕೆಯ ವಾತಾವರಣ ನಿರ್ಮಿಸಬೇಕು, ವೈಜ್ಞಾನಿಕವಾಗಿ ಅರಳಿಮರದ ಮಹತ್ವವನ್ನು ಮಕ್ಕಳು ತಿಳಿಯಬೇಕು ಎಂಬ ಉದ್ದೇಶದಿಂದ 'ಅರಳಿಕಟ್ಟೆ ತೆರೆದ ವಾಚನಾಲಯ' ಎಂಬ ಯೋಜನೆಯನ್ನು ಹಮ್ಮಿಕೊಳ್ಳಲಾಯಿತು. ಶ್ರಮದಾನದ ಮೂಲಕ ಅರಳಿಮರಕ್ಕೆ ಕಟ್ಟೆಯ ನಿರ್ಮಾಣ, ಅಲ್ಲಿ ತೆರೆದ ವಾಚನಾಲಯವನ್ನು ನಿರ್ಮಿಸಿ ಮಕ್ಕಳೇ ನಿರ್ವಹಿಸುವುದು, ಹೀಗೆ ಸಾಹಿತ್ಯದ ಸಂಯೋಜಿತ ಯೋಜನೆ ನಡೆದಿದೆ. ಈ ವಾಚನಾಲಯದಲ್ಲಿ ದಿನಪತ್ರಿಕೆ, ವಾರಪತ್ರಿಕೆ, ಪಾಕ್ಷಿಕ, ಮಾಸಪತ್ರಿಕೆ ಹಾಗೂ ಇತರ ಪುಸ್ತಕಗಳನ್ನು ಇಡಲಾಗಿದ್ದು ಮಕ್ಕಳು ಶಾಲಾ ಅವಧಿಯ ಮೊದಲು, ನಂತರ ಹಾಗೂ ಬಿಡುವಿನ ವೇಳೆಯಲ್ಲಿ ಓದಿಕೊಳ್ಳುತ್ತಾರೆ. ಇದು ಪರೀಕ್ಷೆಗಾಗಿ ಓದು ಅಲ್ಲ, ಮಕ್ಕಳ ಪುಸ್ತಕ ಪ್ರೀತಿಯ ಓದು ಎಂಬಂತಾಗಿದೆ.





ಗಾಳಿಪಟ ಮಾಡುವುದು, ಮುಖವಾಡ ರಚನೆ, ಸಂವಿಧಾನ ಗೀತೆ ಹಾಡುವುದು, ಆಟ, ಜಾನಪದ ಅಭಿನಯ, ನಟನೆ, ಜೀವವೈವಿಧ್ಯತೆಯ ದಾಖಲೆ, ಪಕ್ಷಿಗಳ ಗುರುತಿಸುವಿಕೆ, ಪಕ್ಷಿಗಳಿಗೆ ಆಹಾರ ನೀರು ಉಣಿಸುವುದು, ಪರೀಕ್ಷೆಯೊಂದು ಹಬ್ಬ, ಪತ್ರ ಬರೆಯುವ ಕಲೆ, ಹೀಗೆ ಹಲವಾರು ಕಲಾ ಸಂಯೋಜಿತ ಚಟುವಟಿಕೆಗಳು ಈ ಅರಳಿ ಕಟ್ಟೆಯ ಮೇಲೆ ನಡೆಯುತ್ತಿವೆ. ಮಕ್ಕಳು ತಾವೇ ಕತೆ, ಕವಿತೆ ಬರೆದು ಅವುಗಳ ವಾಚನ–ಪ್ರದರ್ಶನ ಕೂಡ ಇದೇ ಅರಳಿಕಟ್ಟೆಯ ಮೇಲೆ ನಡೆಯುತ್ತಿದೆ. ಪಕ್ಷಿಗಳಿಗೆ ಗೂಡು ನಿರ್ಮಿಸುವ, ಅವುಗಳಿಗೆ ಆಹಾರ–ನೀರು ಇಡುವ, ಖಾದಿ ಬಟ್ಟೆ ಧರಿಸುವ, ಮಣ್ಣಿನ ಮಡಿಕೆಯ ನೀರು ಕುಡಿಯುವ, ಒಣಗುತ್ತಿರುವ ಸಸ್ಯಗಳಿಗೆ ನೀರು ಕೊಡುವ ಕಾರ್ಯವನ್ನು ಮಕ್ಕಳು ಮಾಡುತ್ತಿದ್ದಾರೆ. ಇದು ಮಕ್ಕಳ ಪರಿಸರ ಕಾಳಜಿಯ ಹೆಗ್ಗುರುತಾಗಿದೆ.

> ವಿವಿಧ ಕಲಾ ಚಟುವಟಿಕೆಗಳ ಮೂಲಕ ಭಾಷೆ, ಗಣಿತ, ವಿಜ್ಞಾನ ವಿಷಯಗಳಲ್ಲಿ ಸಹಜ ಆಸಕ್ತಿ ಕುತೂಹಲ ಮೂಡುವಂತೆ ಮಾಡಿದ ನಿರಂತರ ಪ್ರಯತ್ನಗಳಿಂದಾಗಿ ಮಕ್ಕಳ ಕಲಿಕೆಯ ವೇಗ ಹೆಚ್ಚಾಗಿದೆ. ತರಗತಿಗಳು ಅರಳಿಮರದ ಬುಡದಲ್ಲಿ ನಡೆಯುವುದರಿಂದ ಹಾಗೂ ಪರಿಸರ ಚಟುವಟಿಕೆಗಳಿಂದಾಗಿ ಮಕ್ಕಳಲ್ಲಿ ಪರಿಸರ ಪ್ರಜ್ಞೆ ಹೆಚ್ಚಾಗಿದೆ.
> – ಡಾ. ಲಿಂಗರಾಜ ರಾಮಾಪೂರ

ಮಕ್ಕಳು ವಾಚನಾಲಯದಲ್ಲಿ ಓದಲು ಅನುಕೂಲವಾಗುವಂತೆ 'ಪುಸ್ತಕ ಜೋಳಿಗೆ' ಕಾರ್ಯಕ್ರಮದ ಮೂಲಕ ಮನೆ ಮನೆಗೆ ಭೇಟಿ ನೀಡಿ ಪುಸ್ತಕ ಸಂಗ್ರಹ ಮಾಡಲಾಗಿದೆ. "ಈ ಪುಟ್ಟ ಗ್ರಂಥಾಲಯದ ಮೂಲಕ ಮಕ್ಕಳಲ್ಲಿ ಓದುವ ಅಭಿರುಚಿ ಬೆಳೆಯುತ್ತಿದೆ. ಶಾಲಾ ಹಾಜರಾತಿ ಹೆಚ್ಚಿದೆ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳು ಅರಳಿಕಟ್ಟೆಯ ವಿಶೇಷ ಚಟುವಟಿಕೆಗಳತ್ತ ಆಕರ್ಷಿತರಾಗಿದ್ದಾರೆ. ಮಕ್ಕಳಲ್ಲಿ ಕಲಿಕೆಯ ಭಯ ದೂರವಾಗಿ ಸಂತಸದಾಯಕ ವಾತಾವರಣ ನಿರ್ಮಾಣವಾಗಿದೆ." ಎಂಬುದು ಡಾ. ಲಿಂಗರಾಜ ರಾಮಾಪೂರ ಅವರ ಅಭಿಪ್ರಾಯವಾಗಿದೆ.

ಮಕ್ಕಳೇ ಬರೆದಿರುವ ಕತೆ, ಕವನ, ಚುಟುಕ, ಕಿರು ಲೇಖನಗಳ ಸಂಗ್ರಹದ ಒಂದು ಪುಸ್ತಕ ಕೂಡ ಪ್ರಕಟವಾಗಲಿದೆ. ಅರಳಿಕಟ್ಟೆಯು ಪುಸ್ತಕ ಪ್ರೀತಿಯ ಕೇಂದ್ರವಾಗಿ, ಪರಿಸರ ಕಾಳಜಿಯ ಸಂಕೇತವಾಗಿ ರೂಪುಗೊಳ್ಳುತ್ತಿದೆ.

# ಕಿಟಕಿಯಾಚೆಗಿನ ಕೀಟ ವಿಸ್ಮಯ





**ಪೂರ್ಣೇಶ್ ಎಂ.ಎಂ.**
**ಶಿಕ್ಷಕರು**
9980953426

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬಣಕಲ್ ವಿಲೇಜ್ ಒಂದು ಸುಂದರ ಶಾಲೆಯಾಗಿದೆ. ಶಾಲೆಗೆ ಬರುವ ಎಲ್ಲಾ ಮಕ್ಕಳ ಪೋಷಕರು ಕಾಫಿ ತೋಟದಲ್ಲಿ ಕೆಲಸ ಮಾಡುವ ಕೂಲಿ ಕಾರ್ಮಿಕರಾಗಿದ್ದು, ಇಲ್ಲಿನ ಪ್ರಾಕೃತಿಕ ಸಂಪತ್ತಿನೊಂದಿಗೆ ಜೀವನ ಸಾಗಿಸುತ್ತಿದ್ದಾರೆ.

ಈ ಶಾಲೆಯ ಸನಿಹದಲ್ಲೇ 'ದೇವರ ಮನೆ' ಎಂಬ ಪ್ರಾಕೃತಿಕ ತಾಣವಿದೆ. ಅದು ಪಶ್ಚಿಮ ಘಟ್ಟಗಳ ಅವಿಭಾಜ್ಯ ಅಂಗವಾಗಿದ್ದು ಅಪರೂಪದ ಜೀವ ವೈವಿಧ್ಯತೆಗಳನ್ನು ಹೊಂದಿದೆ. ಈ ಪಶ್ಚಿಮ ಘಟ್ಟದ ಪ್ರಾಕೃತಿಕ ಜೀವವೈವಿಧ್ಯತೆಯನ್ನು ಪರಿಚಯಿಸುವ 'ಕಿಟಕಿಯಾಚೆಗಿನ ಕೀಟ ವಿಸ್ಮಯ' ಎಂಬ ಕಲಿ ಕಲಿಸು ಯೋಜನೆಯನ್ನು ಹಮ್ಮಿಕೊಂಡವರು ಶಾಲೆಯ ಸಹಶಿಕ್ಷಕರಾದ ಪೂರ್ಣೇಶ್ ಎಂ.ಎಂ. ಇವರು ತಮ್ಮ ಶಾಲೆಯ ಒಂದರಿಂದ ಐದನೇ ತರಗತಿಯವರೆಗಿನ ಮಕ್ಕಳನ್ನು ಯೋಜನೆಯಲ್ಲಿ ತೊಡಗಿಸಿಕೊಂಡು ಕೀಟಗಳ ಜೊತೆಗಿನ ಒಡನಾಟ ಮತ್ತು ಅವುಗಳ ಜೊತೆಗಿನ ಕಲಿಕಾ ಅನುಭವಗಳ ಅನ್ವೇಷಣೆಯನ್ನು ನಡೆಸಿದ್ದಾರೆ. ಕೀಟಗಳ ಮೂಲಕ ಕಲಿಕೆಯಲ್ಲಿ ಅನುಭವಾತ್ಮಕ ಜ್ಞಾನವನ್ನು ಕಟ್ಟಿಕೊಡುವುದು, ಚಿತ್ರಕಲೆ, ಬರವಣಿಗೆ, ನಾಟಕ ಅಭಿನಯ ಕಲೆಯನ್ನು ಬೆಳೆಸುವುದು ಯೋಜನೆಯ ಕಲಿಕಾ ಉದ್ದೇಶಗಳಾಗಿವೆ. ಇವುಗಳಿಗೆ ಪೂರಕವಾಗಿ ವಿಜ್ಞಾನ, ಸಮಾಜ ವಿಜ್ಞಾನ ಮತ್ತು ಭಾಷಾ ಕಲೆಯ ಸಂಯೋಜಿತ ಪಠ್ಯಕ್ರಮಗಳಿಗೆ ಹೊಂದುವಂತೆ ಈ





ಕಲಾ ಸಂಯೋಜಿತ ಯೋಜನೆ ನಡೆದಿದೆ. ಕೀಟಗಳಿಂದ ಪ್ರಾಕೃತಿಕ, ಆರ್ಥಿಕ ಪ್ರಾಮುಖ್ಯತೆ ಮತ್ತು ಉಪಯುಕ್ತತೆ ಇದ್ದಾಗ್ಯೂ ಇಲ್ಲಿನ ಕೀಟ ಸಂಕುಲ ಇಂದಿನ ಆಧುನಿಕ ಕೃಷಿ ಪದ್ಧತಿಗಳಿಂದ ಮತ್ತು ಪಾರಿಸರಿಕ ಬದಲಾವಣೆಗಳಿಂದ ಎದುರಿಸುತ್ತಿರುವ ಅಪಾಯಗಳ ಅರಿವು ಮೂಡಿಸುವ ಉದ್ದೇಶದಿಂದಲೂ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಮಾತುಕತೆ ಮತ್ತು ಪ್ರಾಯೋಗಿಕ ಚಟುವಟಿಕೆಗಳ ಮೂಲಕ ಯೋಜನೆ ಮುಂದುವರೆದಿದೆ. ಪೂರ್ಣೇಶ್ ಅವರು ಕೀಟ ಶಾಸ್ತ್ರಜ್ಞರನ್ನು ಆಹ್ವಾನಿಸಿ ಅವರಿಂದ ಪರಿಸರದಲ್ಲಿನ ಕೀಟಗಳನ್ನು ಗಮನಿಸುವುದು ಮತ್ತು ಗುರುತಿಸುವುದು ಹೇಗೆ? ಎಂಬುದನ್ನು ಕೂಡಾ ಮಕ್ಕಳಿಗೆ ಪರಿಚಯಿಸುತ್ತಿದ್ದಾರೆ. ಕೊಟ್ಟಿಗೆಹಾರದ ತೇಜಸ್ವಿ ಪ್ರತಿಷ್ಠಾನದ ಕೀಟ ಸಂಗ್ರಹಾಲಯ, ಸ್ಥಳೀಯ ತೋಟಗಳು ಮತ್ತು ಆಂಥೋರಿಯಂ ನರ್ಸರಿಗೆ ಭೇಟಿ ನೀಡಿ ಕೀಟಗಳ ಉಪಯೋಗ ಮತ್ತು ಅವುಗಳಿಂದ ಆಗುವ ಹಾನಿಯ ಬಗ್ಗೆ ಮಾಹಿತಿಗಳನ್ನು ಸಹ ಮಕ್ಕಳಿಗೆ ಪರಿಚಯಿಸಲಾಗಿದೆ. ಚಿತ್ರಕಲಾ ಶಿಬಿರ, ಪೇಪರ್‌ಕ್ರಾಫ್ಟ್, ಕ್ಲೇ ಮಾಡೆಲಿಂಗ್ ಈ ರೀತಿಯ ಸಾಕಷ್ಟು ಕಲಾ ಸಂಯೋಜಿತ ಚಟುವಟಿಕೆಗಳು ಮಕ್ಕಳಲ್ಲಿ ಕಲಿಕಾ ಆಸಕ್ತಿಗಳನ್ನು ಉತ್ತಮಗೊಳಿಸುತ್ತಿವೆ. ಈ ಎಲ್ಲಾ ಚಟುವಟಿಕೆಗಳು ಮಕ್ಕಳಲ್ಲಿ ಕೀಟಗಳಿಗೆ ಸಂಬಂಧಿಸಿದ ಪುಸ್ತಕಗಳ ಓದು, ಅದರಲ್ಲೂ ಕಥಾ ಪುಸ್ತಕಗಳ ಓದಿನ ಆಸಕ್ತಿಯನ್ನು ಹೆಚ್ಚಿಸಿದೆ.

> ಸುತ್ತಲೂ ಕಾಣುವ ಕೀಟಗಳ ಬಗ್ಗೆ ಮಕ್ಕಳು ಆಸಕ್ತಿ ಮತ್ತು ಜ್ಞಾನ ಬೆಳೆಸಿಕೊಂಡಿದ್ದಾರೆ. ಪರಿಸರ ಸಂರಕ್ಷಣೆಯಲ್ಲಿ ತೊಡಗಲು ಈ ಯೋಜನೆ ಸಹಕಾರಿ ಆಗಿದೆ.
> –ಪೂರ್ಣೇಶ್ ಎಂ.ಎಂ.

ಸದ್ಯದಲ್ಲೇ ಪೂರ್ಣೇಶ್ ಅವರು ಮೂಡಿಗೆರೆಯಲ್ಲಿನ ಕೃಷಿ ವಿಜ್ಞಾನ ಕೇಂದ್ರಕ್ಕೆ ಮಕ್ಕಳನ್ನು ಕರೆದುಕೊಂಡು ಹೋಗುವ ಆಲೋಚನೆಯಲ್ಲಿದ್ದಾರೆ. ಮಕ್ಕಳು ತಾವೇ ಕೀಟಗಳಾಗಿ ನಾಟಕದ ತಾಲೀಮು ನಡೆಸಿ ಯೋಜನೆಯ ಅಂತ್ಯಕ್ಕೆ ಪ್ರದರ್ಶನ ನೀಡಲು ಸಿದ್ಧರಾಗುತ್ತಿದ್ದಾರೆ. ಅವರು ರಚಿಸಿದ ಚಿತ್ರಕಲೆ, ಬರೆದ ಕತೆಗಳು ಮತ್ತು ಅವರ ದಾಖಲಿಸಿದ ಅನುಭವಗಳ ಪುಸ್ತಕ ಕೂಡ ಹೊರಬರಲಿದೆ.

# ನೆಲದಲ್ಲೂ ನೂಲಿನಲ್ಲೂ ದೇಶಪ್ರೇಮ



**ಸಕ್ಕು ರಾಯಣ್ಣವರ್**
**ಶಿಕ್ಷಕರು**
9986338880

ರಾಷ್ಟ್ರಪ್ರೇಮಕ್ಕೆ ಸಂಬಂಧಿಸಿದ ಹಲವಾರು ಅಂಶಗಳನ್ನು ಕ್ರೋಢೀಕರಿಸಿ, ವಿವಿಧ ಕಲಾ ಪ್ರಕಾರಗಳನ್ನು ಸಮ್ಮಿಳಿಸಿ, ಕಲಿ ಕಲಿಸು ಯೋಜನೆಯನ್ನು ನಡೆಸಿದವರು ಧಾರವಾಡ ಜಿಲ್ಲೆಯ ಬಾರ ಇಮಾಮ್ ಗಲ್ಲಿಯ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕಿಯಾದ ಸಕ್ಕು ರಾಯಣ್ಣವರ್. ಶಾಲೆಯ ಐದನೇ ತರಗತಿಯ ವಿದ್ಯಾರ್ಥಿಗಳನ್ನು ಕಲಿ ಕಲಿಸು ಯೋಜನೆಯಲ್ಲಿ ತೊಡಗಿಸಿಕೊಂಡು, ರಾಷ್ಟ್ರಧ್ವಜ ತಯಾರಿಕಾ ಕೇಂದ್ರವಾದ ಗರಗವನ್ನು ತಮ್ಮ ಯೋಜನೆಯ ಕೇಂದ್ರ ಬಿಂದುವನ್ನಾಗಿಸಿಕೊಂಡು ಈ ಯೋಜನೆಯನ್ನು ನಡೆಸಿದರು.

ಧಾರವಾಡದ ಗರಗ ಗ್ರಾಮದಲ್ಲಿ 'ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘ' 1957ರಿಂದ ಕಾರ್ಯನಿರ್ವಹಿಸುತ್ತಿದ್ದು, ದೇಶಕ್ಕೆ ಬೇಕಾದ ರಾಷ್ಟ್ರಧ್ವಜವನ್ನು ತಯಾರಿಸುತ್ತಿದೆ. ಇಲ್ಲಿ ಕೈಮಗ್ಗದಿಂದ ರಾಷ್ಟ್ರಧ್ವಜದ ತಯಾರಿ ಮತ್ತು ಖಾದಿ ಬಟ್ಟೆಗಳ ಉತ್ಪಾದನೆಯು ನಡೆಯುತ್ತದೆ. ಈ ಸಂಸ್ಥೆಯಲ್ಲಿ ನಡೆಯುವ ಹತ್ತಾರು ಕೆಲಸಗಳನ್ನು ಗಮನಿಸುವುದರ ಜೊತೆಗೆ ಮಕ್ಕಳು ಕಲಾ ಪ್ರಕಾರಗಳೊಂದಿಗೆ ಕಲಿಕೆಯಲ್ಲಿ ತೊಡಗಿಕೊಂಡರು. ರಾಷ್ಟ್ರಧ್ವಜವನ್ನು ಚಿತ್ರಿಸಿ ಬಣ್ಣ ಹಚ್ಚುವುದು, ಧ್ವಜ ವಂದನೆಯ ಚಿತ್ರ ಬರೆದು ಬಣ್ಣ ತುಂಬುವುದು ಇಂತಹ ಚಿತ್ರಕಲಾ ಚಟುವಟಿಕೆಗಳು ನಡೆದವು. ಕಾಗದ, ಪ್ಲಾಸ್ಟಿಕ್ ಶೀಟ್, ಹತ್ತಿಬಟ್ಟೆ ಇವುಗಳನ್ನು ಬಳಸಿಕೊಂಡು ಮಕ್ಕಳು ಕ್ರಾಫ್ಟ್ ಚಟುವಟಿಕೆಯ ಮೂಲಕ ತಾವೇ ಬಾವುಟ ತಯಾರಿಸಿದರು. ಕಡ್ಡಿ ಮತ್ತು ಸ್ಟ್ರಾಗಳನ್ನು ಬಳಸಿಕೊಂಡು ಪುಟ್ಟ ಬಾವುಟಗಳನ್ನು ಕೂಡ ಮಾಡಿದರು. ಯೋಜನೆಗೆ ಪೂರಕವಾಗಿ ರಸಪ್ರಶ್ನೆ, ಡಂಬಲ್ಸ್ ಪ್ರದರ್ಶನಗಳು ಮಕ್ಕಳಿಗೆ ಹೊಸತನದ ಕಲಿಕೆಯನ್ನು ನೀಡಿದವು.






ಇವರ ಈ ಯೋಜನೆಯು ಇನ್ನೂ ನಡೆಯುತ್ತಿರುವುದರಿಂದ ಹತ್ತಾರು ಚಟುವಟಿಕೆಗಳ ರೂಪರೇಷೆಗಳನ್ನು ಸಿದ್ಧಪಡಿಸಿಕೊಂಡಿದ್ದಾರೆ. ಧ್ವಜ, ಗಾಂಧೀಜಿ, ಅಶೋಕ ಚಕ್ರಗಳನ್ನು ಪ್ರತಿನಿಧಿಸುವ ಕಿರು ನಾಟಕ ಪ್ರದರ್ಶನ ಮತ್ತು ಗರಗ ಜನರ ಜೀವನವನ್ನು ಬಿಂಬಿಸುವ ಪಾತ್ರಾಭಿನಯ ಮಾಡಿಸುವ ಉದ್ದೇಶ ಹೊಂದಲಾಗಿದೆ. ಹಾಡು ಮತ್ತು ನೃತ್ಯದ ಮೂಲಕ ಧ್ವಜದ ಕುರಿತಾದ ಪ್ರಮುಖ ಮಾಹಿತಿಯನ್ನು ರೂಪಕದಲ್ಲಿ ತಿಳಿಸಿಕೊಡಲಿದ್ದಾರೆ. ಗರಗ ಗ್ರಾಮದ ಖಾದಿ ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿ ನಮ್ಮ ರಾಷ್ಟ್ರಧ್ವಜ ಮತ್ತು ಖಾದಿ ಬಟ್ಟೆಗಳು ತಯಾರಾಗುವ ಬಗ್ಗೆ ತಿಳಿದು, ಮಹಿಳಾ ಕೆಲಸಗಾರರನ್ನು ಸಂದರ್ಶನ ಮಾಡಿ, ಅವರ ಬದುಕಿನ ಕುರಿತು ರೂಪಕ ಮಾಡುವ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಕ್ಯಾಲಿಗ್ರಫಿಯ ಚಟುವಟಿಕೆಯಲ್ಲಿ ಧ್ವಜದ ಕುರಿತಂತೆ 'ವಂದೇಮಾತರಂ' 'ಜೈಹಿಂದ್' ಅಥವಾ ಧ್ವಜದ ಸಂವಿಧಾನಬದ್ಧ ನಿಯಮಗಳನ್ನು ಬರೆಯುವ ಪೋಸ್ಟರ್‌ಗಳನ್ನು ಮಕ್ಕಳು ತಯಾರಿಸಲಿದ್ದಾರೆ.

ಯೋಜನೆಯ ಕೊನೆಯಲ್ಲಿ ಒಂದು ಮಾಸಪತ್ರಿಕೆ ಹೊರತರುವ ಆಶಯ ಹೊಂದಲಾಗಿದೆ. ಮಕ್ಕಳು ವಿವಿಧ ಚಟುವಟಿಕೆಗಳ ಮೂಲಕ ತಮ್ಮದೇ ಜಿಲ್ಲೆಯಲ್ಲಿ ಇರುವ ರಾಷ್ಟ್ರಧ್ವಜ ತಯಾರಿಕಾ ಕೇಂದ್ರದ ಬಗೆಗೆ ತಿಳಿಯುತ್ತಾ ರಾಷ್ಟ್ರಪ್ರೇಮವನ್ನು ಹೆಚ್ಚಿಸಿಕೊಳ್ಳುವ ಯೋಜನೆ ಇದಾಗಿದೆ.

> ನಾವು ಈ ಯೋಜನೆಯಿಂದ ರಾಷ್ಟ್ರಧ್ವಜದ ಬಗ್ಗೆ ತಿಳಿದುಕೊಂಡೆವು. ರಾಷ್ಟ್ರಧ್ವಜ ತಯಾರಿಕಾ ಕೇಂದ್ರಕ್ಕೆ ಭೇಟಿ ನೀಡಿದ್ದು ನಮಗೆಲ್ಲಾ ಹೆಮ್ಮೆ ಅನಿಸಿತು. ವಿವಿಧ ಚಟುವಟಿಕೆಗಳ ಮೂಲಕ ನಮ್ಮ ನೆಲದ ಮಹತ್ವ ತಿಳಿದುಕೊಂಡೆವು.
>
> –ಬೀಬಿ ಆಶೀಯಾ ನರಗುಂದ, 6ನೆಯ ತರಗತಿ

# ಮಾಗಡಿ ಪಕ್ಷಿಧಾಮ ವಿದೇಶಿ ಹಕ್ಕಿಗಳ ತಾಣ

2024–25
ಶಿಕ್ಷಕರ ಯೋಜನೆ



ಶಾಂತಗೌಡ ಮರಿಗೌಡರ
**ಶಿಕ್ಷಕರು**
9663251070

ಗದಗ ಜಿಲ್ಲೆಯ ಹಿರಿಯ ಪ್ರಾಥಮಿಕ ಶಾಲೆ ನಂ.1 ಕುರ್ತಕೋಟಿ. ಇಲ್ಲಿಯ ಸಹಶಿಕ್ಷಕರಾದ ಶಾಂತಗೌಡ ಮರಿಗೌಡರ ಇವರು ತಮ್ಮ ಶಾಲೆಯ ಆರನೇ ತರಗತಿಯ ವಿದ್ಯಾರ್ಥಿಗಳನ್ನು ಕೇಂದ್ರವಾಗಿರಿಸಿ ಸಮಾಜ ವಿಜ್ಞಾನ ವಿಷಯದಲ್ಲಿ ಐಎಫ್‌ಎಯ ಕಲಿ ಕಲಿಸು ಯೋಜನೆಯಡಿ ಕೈಗೊಂಡ ಯೋಜನೆ ಇದು. ಆರನೇ ತರಗತಿಯ ಸಮಾಜ ವಿಜ್ಞಾನ ವಿಷಯದಲ್ಲಿ 'ನಮ್ಮ ಹೆಮ್ಮೆಯ ರಾಜ್ಯ ಕರ್ನಾಟಕ' ಪಾಠದಲ್ಲಿ ವಿವಿಧ ವಿಭಾಗಗಳ ಪಕ್ಷಿಧಾಮಗಳ ಕುರಿತು ಪ್ರಸ್ತಾಪಿಸಿದ್ದು, ಅದರ ಸಹ ಸಂಬಂಧವಾಗಿ ವಿದ್ಯಾರ್ಥಿಗಳಿಗೆ ಸಮೀಪದ ವಿದೇಶಿ ಹಕ್ಕಿಗಳ ತಾಣವಾದ ಮಾಗಡಿ ಪಕ್ಷಿಧಾಮವನ್ನು ಚಿತ್ರಕಲೆ, ಭಾಷೆ, ಕಲೆ, ಸಾಹಿತ್ಯ, ರಂಗಕಲೆ ಮತ್ತು ಕರಕುಶಲ ಕಲೆಗಳ ಮೂಲಕ ಅನುಭವಾತ್ಮಕ ಕಲಿಕಾ ಕೇಂದ್ರವಾಗಿಸುವ ಪ್ರಯೋಗ ಇದಾಗಿದೆ.



ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಮಾಗಡಿ ಗ್ರಾಮವು ವಿದೇಶಿ ಹಕ್ಕಿಗಳ ತಾಣವಾಗಿ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿದೆ. ಈ ಪಕ್ಷಿಧಾಮಕ್ಕೆ ಪ್ರತಿವರ್ಷ ಚಳಿಗಾಲದ ಆರಂಭದೊಂದಿಗೆ ಸಾವಿರಾರು ಕಿಲೋಮೀಟರ್ ದೂರದಿಂದ, ಸುಮಾರು 130 ದೇಶಗಳಿಂದ ನೂರಾರು ಜಾತಿಯ ಪಕ್ಷಿಗಳು ಇಲ್ಲಿಗೆ ವಲಸೆ ಬರುತ್ತವೆ. ನವೆಂಬರ್‌ನಿಂದ ಮಾರ್ಚ್‌ವರೆಗೆ ಇಲ್ಲಿರುವ ಪಕ್ಷಿಗಳು ಅನೇಕ ಪಕ್ಷಿಪ್ರಿಯರ




ಆಕರ್ಷಣೀಯ ಕೇಂದ್ರವಾಗಿವೆ. ಇಲ್ಲಿಗೆ ಭೇಟಿ ನೀಡಿ ಪಡೆದ ಅನುಭವ ಜನ್ಯ ಜ್ಞಾನವನ್ನು ವಿವಿಧ ಕಲಾ ಮಾಧ್ಯಮಗಳ ಮೂಲಕ ಕಟ್ಟಿಕೊಳ್ಳುವ ವಿನೂತನ ಪ್ರಯತ್ನ ಈ ಯೋಜನೆಯಲ್ಲಿದೆ. ಮಾಗಡಿಯನ್ನು ಕೇಂದ್ರವಾಗಿಟ್ಟುಕೊಂಡು ಇಲ್ಲಿಗೆ ತಲುಪುವ ವಿವಿಧ ದೇಶಗಳ ಸಮಗ್ರ ಭೌಗೋಳಿಕ ನಕ್ಷೆಯನ್ನು ತಯಾರಿಸಿ ಶಾಲೆ, ಸಮುದಾಯ ಕೇಂದ್ರ, ಶಿಕ್ಷಣ ಇಲಾಖೆಯ ಕಚೇರಿಯ ಬಳಿ ಭಿತ್ತಿ ಚಿತ್ರದ ಖಾಯಂ ಪ್ರದರ್ಶನ ಮಾಡಿಸುವುದು ಈ ಯೋಜನೆಯ ಭಾಗವಾಗಿದೆ. ಯೋಜನೆಯ ಅಂತಿಮ ಹಂತದಲ್ಲಿ ಹಕ್ಕಿಗಳ ಕುರಿತಾದ ನಾಟಕ ಪ್ರದರ್ಶನ ನಡೆಯಲಿದೆ.

> ಈ ಯೋಜನೆಯ ಮೂಲಕ ಪಕ್ಷಿತಜ್ಞರು ತಿಳಿಸಿದ ಹಾಗೂ ನಾನು ಗಮನಿಸಿದ ಇತರ ಪಕ್ಷಿಗಳ ಬಣ್ಣ, ಗಾತ್ರ ಮತ್ತು ಸ್ವಭಾವಗಳ ಬಗ್ಗೆ ಕುತೂಹಲ, ಆಸಕ್ತಿ ಹೆಚ್ಚಾಗಿದೆ.
> – ಅರುಣ ಕಪ್ಪರಶೆಟ್ಟಿ,
> 7ನೇ ತರಗತಿ

ಹಕ್ಕಿಗಳ ವಲಸೆ ಮತ್ತು ಭೌಗೋಳಿಕವಾಗಿ ಋತುಮಾನ ಬದಲಾವಣೆಯ ಸಂಬಂಧಗಳು ಪರಸ್ಪರ ಬೆಸೆದುಕೊಂಡಿರುವ ರೀತಿ, ಈ ಮೂಲಕ ಭೂಮಿಯ ಒಂದು ಮೂಲೆಯಲ್ಲಿ ಪ್ರಕೃತಿಯಲ್ಲಿ ಉಂಟಾಗುವ ಸಣ್ಣ ಬದಲಾವಣೆಯೂ ಕೂಡ ಸಂಪೂರ್ಣ ಪ್ರಾಣಿ, ಪಕ್ಷಿ ಸಂಕುಲವನ್ನು ಬಾಧಿಸಬಹುದು ಎಂಬುದನ್ನು ಅರ್ಥೈಸಿ, ಪರಿಸರ ಸಂರಕ್ಷಣೆಯ ನಿಜಾರ್ಥವನ್ನು ವಿದ್ಯಾರ್ಥಿಗಳು ಅರಿತುಕೊಳ್ಳುವುದೇ ಈ ಯೋಜನೆಯ ಉದ್ದೇಶವಾಗಿದೆ.



# ಭಾಷಾ ಸಂಕರಣದ ಸುನ್ನಾ ವಡ್ಡಿ

2024–25
ಶಿಕ್ಷಕರ ಯೋಜನೆ

ಭಾನುಪ್ರಕಾಶ
ಶಿಕ್ಷಕರು
9901279831

ನೀನಾಸಂ ಪದವೀಧರ ಹಾಗೂ ಛಾಯಾಗ್ರಾಹಕರಾಗಿರುವ ಭಾನುಪ್ರಕಾಶ ಇವರು ಕರ್ನಾಟಕ ಆಂಧ್ರ ಗಡಿಭಾಗದ ಮಧುಗಿರಿ ಶೈಕ್ಷಣಿಕ ಜಿಲ್ಲೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಡಗತ್ತೂರು, ಇಲ್ಲಿಯ ಮಕ್ಕಳನ್ನು ಸೇರಿಸಿಕೊಂಡು ನಡೆಸುವ ಯೋಜನೆ 'ಸೊನ್ನೆ ಸುನ್ನಾ, ವಡ್ಡಿ ಬಡ್ಡಿ'. ಗಡಿ ಪ್ರದೇಶವಾದ ಕಾರಣ ಇಲ್ಲಿಯ ಜನರು ಬಳಸುವ ಭಾಷೆಯಲ್ಲಿ ತೆಲುಗು ಭಾಷೆಯ ಪ್ರಭಾವ ಬಹಳಷ್ಟಿದೆ. ಇಲ್ಲಿಯ ವಿದ್ಯಾರ್ಥಿಗಳು ಎರಡು ಭಾಷೆಗಳನ್ನು ಬಳಸಿಕೊಂಡು ಹೊಸ ಶಬ್ದಗಳನ್ನು ಟಂಕಿಸಿಕೊಂಡು ವ್ಯವಹರಿಸುತ್ತಾರೆ. ಇದು ಬಹಳಷ್ಟು ಬಾರಿ ಇಲ್ಲಿಯ ಶಿಕ್ಷಕರಿಗೆ ಬೋಧನೆಯ ಸಂದರ್ಭದಲ್ಲಿ ಸವಾಲಾಗುವ ಪ್ರಮೇಯವೂ ಇದೆ.

ಶಾಲಾ ಶೈಕ್ಷಣಿಕ ಚಟುವಟಿಕೆಯ ಸಂದರ್ಭಗಳಲ್ಲಿ ಭಾಷಾ ಬಳಕೆಯ ಸಂಕೀರ್ಣತೆಯನ್ನು ಪರಿಹರಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಉದಾಹರಣೆಗೆ ವಿದ್ಯಾರ್ಥಿಗಳು ಸೊನ್ನೆಯನ್ನು 'ಸುನ್ನಾ' ಎಂದೂ ಕನ್ನಡದ ಬಡ್ಡಿಯನ್ನು ತೆಲುಗಿನೊಂದಿಗೆ ಸೇರಿಸಿಕೊಂಡು 'ವಡ್ಡಿ'ಯೆಂದು ಬಳಸುತ್ತಾರೆ. ಇದು ಗಣಿತ





ಬೋಧಿಸುವ ಶಿಕ್ಷಕರಿಗೆ ತರಗತಿಯಲ್ಲಿ ಸಮಸ್ಯೆಯಾಗಿ ಕಾಣಿಸುವ ಸಾಧ್ಯತೆಯೇ ಹೆಚ್ಚು. ಭಾನುಪ್ರಕಾಶ ಇವರು ತಮ್ಮ ರಂಗಾನುಭವದ ಮೂಲಕ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಈ ಯೋಜನೆಯ ಮೂಲಕ ಪ್ರಯತ್ನಿಸುತ್ತಾರೆ.

ಈ ಯೋಜನೆಯ ಮೊದಲನೇ ಹಂತದಲ್ಲಿ ವಿದ್ಯಾರ್ಥಿಗಳಿಗೆ ಸ್ಥಳೀಯ ಭಾಷೆಯಲ್ಲಿ, ತೀರಾ ಸ್ಥಳೀಯವಾದ ಭಾಷಾ ನುಡಿಗಟ್ಟುಗಳು, ಪದಪ್ರಯೋಗಗಳನ್ನು ಒಳಗೊಂಡಂತೆ ರಚಿಸಿದ ಕಿರು ನಾಟಕಗಳನ್ನು ನೀಡಿ ಅವರಿಂದ ಅಭ್ಯಾಸವನ್ನು ಮಾಡಿಸುತ್ತಾರೆ. ಇದಕ್ಕೆ ಪೂರಕವಾಗಿ ತೆಲುಗು ಭಾಷೆಯ ಸಾಹಿತ್ಯಗಳನ್ನು ವಿದ್ಯಾರ್ಥಿಗಳಿಗೆ ತರಗತಿಯಲ್ಲಿ ಓದಲು ನೀಡಿ ಎರಡು ಭಾಷೆಯಲ್ಲಿನ ಸಾಮ್ಯತೆಗಳನ್ನು ಅರ್ಥಮಾಡಿಕೊಳ್ಳುವಂತೆ ಮಾಡುವುದು. ಎರಡನೇ ಹಂತದಲ್ಲಿ ಕನ್ನಡದ ಪ್ರಮುಖ ಸಾಹಿತ್ಯಗಳಾದ ಪಂಜರದ ಗಿಳಿ, ಕಿಂದರಿ ಜೋಗಿ ಮುಂತಾದ ಕತೆಗಳನ್ನು ಮಕ್ಕಳಿಂದ ಓದಿಸಿ ಭಾಷಾ ಬಳಕೆ ಮತ್ತು ಸಮೃದ್ಧತೆಯನ್ನು ಮಕ್ಕಳು ಅರ್ಥೈಸುವಂತೆ ಮಾಡುವುದು. ಸ್ಥಳೀಯ ಭಾಷೆಯಲ್ಲಿ ಹಲವು ಕಿರು ನಾಟಕಗಳ ಪ್ರದರ್ಶನವನ್ನು ಮಾಡುವುದು ಈ ಕಲಾ ಸಮ್ಮಿಳಿತ ಯೋಜನೆಯ ಅಂತಿಮ ಹಂತವಾಗಿದೆ.

> ಸುನ್ನ–ಸೊನ್ನೆ ವಡ್ಡಿ–ಬಡ್ಡಿ ಎಂಬ ಈ ಯೋಜನೆಯಿಂದ ಸ್ಥಳೀಯ ತೆಲುಗಿನ ಜನಪದ ಗೀತೆಗಳು ಮತ್ತಿತರ ಜನಪದ ಕಲೆಗಳನ್ನು ಉಳಿಸಿಕೊಂಡು ಕನ್ನಡ ಕಲೆಗಳನ್ನು ಕಲಿಯುತ್ತಾ ಸರಿಯಾಗಿ ಕನ್ನಡ ಮಾತನಾಡಲಾರದ ನಾವುಗಳು ಕನ್ನಡ ಭಾಷೆಯಲ್ಲಿ ಸುಧಾರಿಸಲು ಸಾಧ್ಯವಾಗಿದೆ.
>
> – ನಿತಿನ್ ಕುಮಾರ್
> ಒಂಬತ್ತನೇ ತರಗತಿ

# ಗೊರವ ಸಮುದಾಯದ ಹೆಗ್ಗಪ್ಪನ ಕುಣಿತ





**ಅಕ್ಕಮ್ಮ**
**ಕಲಾವಿದರು**
6362517318

ರಂಗಭೂಮಿ ಕಲಾವಿದೆಯಾಗಿ ಗುರುತಿಸಿಕೊಂಡಿರುವ ಅಕ್ಕಮ್ಮ ಇವರು ಐಎಫ್‌ಎಯ ಕಲಿ ಕಲಿಸು ಯೋಜನೆಯ ಅಡಿಯಲ್ಲಿ 'ಗೊರವ ಸಮುದಾಯದ ಹೆಗ್ಗಪ್ಪನ ಕುಣಿತ ಮತ್ತು ನೆಲೆಗಟ್ಟಿನ ಕಥೆಯನ್ನು ಬಯಲಾಟದ ಮೂಲಕ ಮಕ್ಕಳೊಂದಿಗೆ ಅನುಸಂಧಾನ' ಎಂಬ ಹೆಸರಿನಲ್ಲಿ ಕೊಪ್ಪಳ ಜಿಲ್ಲೆಯ ಕೆ.ಜಿ.ಬಿ.ವಿ ಶಾಲೆಯ ಆರು ಮತ್ತು ಏಳನೇ ತರಗತಿಯ ವಿದ್ಯಾರ್ಥಿಗಳನ್ನು ಕೇಂದ್ರೀಕರಿಸಿ ಕೈಗೊಂಡ ಯೋಜನೆ ಇದಾಗಿದೆ.

ಕರ್ನಾಟಕದ ಉತ್ತರ ಭಾಗದಲ್ಲಿ ಹೆಚ್ಚು ಪ್ರಚಲಿತವಾಗಿರುವ ಗೊರವರ ಕುಣಿತ ಮತ್ತು ಹೆಗ್ಗಪ್ಪನ ಕುಣಿತ ಒಂದು ಸಮುದಾಯದ ಆಚರಣೆಯಾಗಿಯೂ, ಒಂದು ಕಲಾ ಪ್ರಕಾರವಾಗಿಯೂ ಬಹಳಷ್ಟು ಪ್ರಖ್ಯಾತವಾಗಿದೆ. ಗೊರವ ಸಮುದಾಯದ ಜನರು ಕರಡಿಯ ವೇಷ ತೊಟ್ಟು ಹೆಗ್ಗಪ್ಪನ ಕುಣಿತವನ್ನು ಮಾಡುವ ಹಿನ್ನಲೆ, ಜನಪದ ಕಾವ್ಯವಾದ ಮೈಲಾರಲಿಂಗ ಕಾವ್ಯಕ್ಕೂ ಹೆಗ್ಗಪ್ಪನಿಗೂ ಇರುವ ಸಂಬಂಧ ಇವುಗಳನ್ನು ವಿದ್ಯಾರ್ಥಿಗಳಿಗೆ ಕಲಾ ಸಮ್ಮಿಳಿತ ಕಲಿಕೆಯ ರೂಪವಾಗಿ ಪರಿಚಯಿಸುವ ಯೋಜನೆ ಇದಾಗಿದೆ.

ಗೊರವ ಸಮುದಾಯದ ರಕ್ಷಕನೆಂದು ಪೂಜಿಸಲ್ಪಡುವ ಹೆಗ್ಗಪ್ಪನ ಆಚರಣೆಯ ಜತೆಗಿನ ಕುಣಿತ ಮತ್ತು ಹಾಡು ಇವುಗಳನ್ನು ವಿದ್ಯಾರ್ಥಿಗಳಿಗೆ ಬಯಲಾಟದ ಮೂಲಕ ಪರಿಚಯಿಸುತ್ತಾ ಜನಪದೀಯವಾದ ಆಚರಣೆಗಳು ಮತ್ತು ಕಲಾ ಪ್ರಕಾರದ ಶ್ರೀಮಂತಿಕೆಯನ್ನು ವಿದ್ಯಾರ್ಥಿಗಳಿಗೆ ತಿಳಿಯಪಡಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಆಶಯದಂತೆ ಸ್ಥಳೀಯ ಕಲಾ ಪ್ರಕಾರಗಳು, ಆಚರಣೆಗಳ ಹಿನ್ನೆಲೆಗಳು ವಿದ್ಯಾರ್ಥಿಗಳು ಹೆಚ್ಚು ಅರ್ಥ ಮಾಡಿಕೊಂಡಷ್ಟು ಜಾಗತಿಕವಾಗಿರುವುದನ್ನು ಆಳವಾಗಿ ಮನನ ಮಾಡಿಕೊಳ್ಳಲು ಸಾಧ್ಯ. ಈ ನಿಟ್ಟಿನಲ್ಲಿ





ಸ್ಥಳೀಯ ಗೊರವ ಸಮುದಾಯದ ಕಲಾವಿದರ ಜತೆಗೆ ಕಾರ್ಯಾಗಾರಗಳನ್ನು ಏರ್ಪಡಿಸಿ ವಿದ್ಯಾರ್ಥಿಗಳು ಹೆಗ್ಗಪ್ಪನ ಕುಣಿತವನ್ನು ಅಭ್ಯಸಿಸಿ ಒಂದು ಬಯಲಾಟ ಪ್ರದರ್ಶನವನ್ನು ಏರ್ಪಡಿಸುವುದು ಈ ಯೋಜನೆಯ ಅಂತಿಮ ಹಂತವಾಗಿದೆ.

ಹೆಗ್ಗಪ್ಪ ಕಥೆ ಕಲಿಕೆ ಯೋಜನೆಯ ಒಂದು ಭಾಗವಷ್ಟೇ, ಮಕ್ಕಳು ಇದರ ಜತೆಗೆ ತಮ್ಮ ಸಮುದಾಯಕ್ಕೆ ಸಂಬಂಧಿಸಿದ ವಿಷಯವನ್ನು ಹುಡುಕುತ್ತಿರುವುದು ಸಂತಸ ತಂದಿದೆ.

– ಅಕ್ಕಮ್ಮ ಎಂ. ದೇವರಮನಿ



# ಹಿಂದೂಸ್ತಾನಿ ಸಂಗೀತದ ಮುಖಾಮುಖಿ

2024-25
ಕಲಾವಿದರ ಯೋಜನೆ




**ಇನ್ಸಾಫ್**
**ಕಲಾವಿದರು**
7259250026


ಹಿಂದುಸ್ತಾನಿ ಸಂಗೀತದ ಕೆಲವು ರಾಗಗಳ, ಸ್ವರಗಳ, ಗೀತೆಗಳ ಆಧಾರದ ಮೇಲೆ ಪಠ್ಯ ವಿಷಯದ ಜೋಡಣೆಯ ಜೊತೆಗೆ ಪ್ರಸ್ತುತತೆಗೆ ಅದನ್ನು ಅಳವಡಿಸುವ ಉದ್ದೇಶದಿಂದ ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಚಿತ್ತವಾಡಗಿಯ ವಿನೋಬಾ ಭಾವೆ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಲಾಂತರ್ಗತ ಕಲಿ ಕಲಿಸು ಯೋಜನೆಯನ್ನು ಹಮ್ಮಿಕೊಂಡವರು ಕಲಾವಿದ ಇನ್ಸಾಫ್. ಶಾಲೆಯ ಏಳನೇ ತರಗತಿಯ ಆಯ್ದ ಮೂವತ್ತು ಮಕ್ಕಳು ಲಯ ಸಂಗೀತದ ಜೊತೆಗೆ ಪ್ರಯೋಗದಲ್ಲಿ ತೊಡಗಿಕೊಂಡಿದ್ದಾರೆ.

ಪಠ್ಯವನ್ನು ಓದುವ ಮತ್ತು ಗ್ರಹಿಸುವ ಪರಿಯನ್ನು ತಿಳಿಯಲು ರಂಗಾಟಗಳನ್ನು ಮಾಧ್ಯಮವನ್ನಾಗಿ ಆಯ್ದುಕೊಳ್ಳಲಾಗಿತ್ತು. ಸಂಗೀತದ ಭಾವ, ಸಂವೇದನೆಯನ್ನು ಗ್ರಹಿಸಲು ಹೇಗೆ ಸಹಾಯ ಮಾಡುತ್ತದೆ ಎಂದು ಮಕ್ಕಳ ಅನುಭವಕ್ಕೆ ಬರಲು ಕೊಳಲು ವಾದನವನ್ನು ಶವಾಸನದ ಮೂಲಕ ಆಲಿಸಲು ಅನುವು ಮಾಡಿಕೊಡಲಾಗಿತ್ತು. ಕೆಲವು ಮಕ್ಕಳು ಇದರಲ್ಲಿ ಹೆಚ್ಚಿನ ಫಲಿತಾಂಶವನ್ನು ಕಂಡುಕೊಂಡರು. ತೆಂಗಿನಕಾಯಿ ಚಿಪ್ಪು,



ಹಳೆಯ ಟೈಲ್ಸ್, ಕೋಲು ಇವುಗಳಿಂದ ಧ್ವನಿ ಸಿದ್ಧಪಡಿಸಿ ಸಂಗೀತವನ್ನು ಆಲಿಸುವುದು ಕೂಡ ಕಲಾಂತರ್ಗತ ಕಲಿಕೆಯ ಭಾಗವಾಗಿತ್ತು. ಒಳಾಂಗಣ ತರಗತಿಯಲ್ಲಿ ಸರಿಗಮಪದನಿಸ ಪರಿಚಯಿಸಿದಾಗ ಮಕ್ಕಳು ಸಂಗೀತದಲ್ಲಿ ವಿಶೇಷವಾಗಿ ಆಸಕ್ತಿಯನ್ನು ತಳೆದರು.

ರಂಗಾಟಗಳು, ಪರಿಸರದ ಧ್ವನಿಯನ್ನು ಆಲಿಸುವಿಕೆ, ಅನುಕರಣೆ, ತಾಳಗಳು ಹಾಗೂ ಕೆಲವು ರಾಗಗಳ ಪರಿಚಯ, ಪಠ್ಯ ವಿಷಯವನ್ನು ಸಂಗೀತಕ್ಕೆ ಅಳವಡಿಸುವಿಕೆ, ಪ್ರಾತ್ಯಕ್ಷಿಕೆ ಹೀಗೆ ಸಂಗೀತದ ವಿವಿಧ ಮಜಲುಗಳ ಜೊತೆಗೆ ಕಲಾಂತರ್ಗತ ಕಲಿಕೆ ಸಾಗುತ್ತಿದೆ. ಲಯ ಸಂಗೀತದ ಕಿರು ಪ್ರಯೋಗದ ಮೂಲಕ ಯೋಜನೆ ಮುಕ್ತಾಯಗೊಳ್ಳಲಿದೆ.



ಪರಿಸರದ ಒಟ್ಟಿಗೆ ಹಿಂದುಸ್ತಾನಿ ಸಂಗೀತ ಹೇಗೆ ಒಟ್ಟಾಗಿದೆ ಎಂಬ ಹುಡುಕಾಟದಲ್ಲಿ ಮಕ್ಕಳ ಜೊತೆ ನಲಿಯುತ್ತಾ, ಹಾಡುತ್ತಾ ಅವರನ್ನು ಚಿಂತನಶೀಲರನ್ನಾಗಿ ಮಾಡಲು ನನಗೆ ತೃಪ್ತಿ ಅನ್ನಿಸುತ್ತಿತ್ತು.

– ಇನ್ನಾಷ್



# ಗೌಳಿ ಸಮುದಾಯ ಹಾಗೂ ಧಾರವಾಡ ಪೇಡ

2024–25
ಕಲಾವಿದರ ಯೋಜನೆ



ಲಾಲ್‌ಸಾಬ್ ನದಾಫ್
ಕಲಾವಿದರು
8747075356

ಶಾಲೆಗೆ ಬರುವ ಗೌಳಿ ಸಮುದಾಯದ ಮಕ್ಕಳು ತಮ್ಮ ಸಮುದಾಯಗಳ ಇತಿಹಾಸ ಹಾಗೂ ಜಾನಪದ ಶ್ರೀಮಂತಿಕೆಯನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಗುವ ಕಲಾಂತರ್ಗತ ಕಲಿ ಕಲಿಸು ಯೋಜನೆಯನ್ನು ನಡೆಸುತ್ತಿರುವವರು ಲಾಲ್ ಸಾಬ್ ನದಾಫ್. ಧಾರವಾಡದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸಂಖ್ಯೆ 11. ಇಲ್ಲಿನ ಏಳನೇ ತರಗತಿಯ ಮಕ್ಕಳನ್ನು ಆಯ್ಕೆ ಮಾಡಿಕೊಂಡು ಈ ಯೋಜನೆಯನ್ನು ನಡೆಸಲಾಗುತ್ತಿದೆ. ಧಾರವಾಡ ಪೇಡ ಹಾಗೂ ಗೌಳಿ ಸಮುದಾಯದ ನಂಟನ್ನು ತಿಳಿಸುತ್ತಾ, ಈ ಸಮುದಾಯದ ಜಾನಪದ, ಸಾಂಸ್ಕೃತಿಕ ಹಾಗೂ ಐತಿಹಾಸಿಕ ಹಿನ್ನೆಲೆಗಳನ್ನು ಅರ್ಥೈಸುವ ಮೂಲಕ ಹಾಗೂ ಧಾರವಾಡದ ಎಮ್ಮೆ ತಳಿ ಕುರಿತು ಅಧ್ಯಯನ ಮಾಡುವ ಆಶಯವನ್ನು ಈ ಯೋಜನೆ ಹೊಂದಿದೆ.

ಧಾರವಾಡ ಎಂಬ ನಗರದ ಹೆಸರಿನಲ್ಲಿ ಸಿಹಿ ಪದಾರ್ಥವೊಂದು ಪ್ರಸಿದ್ಧಿಯನ್ನು ಪಡೆದ ಇತಿಹಾಸ ಮತ್ತು ಅದಕ್ಕೆ ಕಾರಣರಾದ ಗೌಳಿ ಸಮುದಾಯ ಮತ್ತು ಅವರ ಬದುಕು, ಇವೆರಡಕ್ಕೂ ಕಾರಣವಾದ ಧಾರವಾಡದ ಎಮ್ಮೆಯ ಸ್ಥಳೀಯ ವೈಶಿಷ್ಟ್ಯವನ್ನು ಹತ್ತಾರು ಚಟುವಟಿಕೆಗಳ ಮೂಲಕ ಮಕ್ಕಳಿಗೆ ತಿಳಿಸಿ ಕೊಡುವ ಕೆಲಸ ನಡೆಯುತ್ತಿದೆ. ಗೌಳಿ ಸಮುದಾಯದ ಶೇಕಡಾ 95ರಷ್ಟು ಜನ ಎಮ್ಮೆಗಳನ್ನು ಮೇಯಿಸುವ ಕೆಲಸ ನಡೆಸುತ್ತಿದ್ದು, ಇದು ಇವರ ಜೀವನಶೈಲಿಯ ವಿಶೇಷತೆಯಾಗಿದೆ. ಅಲ್ಲದೆ ಈ ಸಮುದಾಯವು ಹಿಂದೂ ಮತ್ತು ಇಸ್ಲಾಂ ಸಂಪ್ರದಾಯದಲ್ಲಿ ಬರುವಂತಹ ಎರಡೂ ಪದ್ಧತಿಗಳನ್ನು






ಅನುಸರಿಸುತ್ತಿದ್ದು, ರಂಜಾನ್, ಯುಗಾದಿ, ಮೊಹರಂ, ದೀಪಾವಳಿಯಂತಹ ಎರಡೂ ಮತಗಳ ಧಾರ್ಮಿಕ ಹಬ್ಬಗಳನ್ನು ಬಹಳ ಸಂಭ್ರಮದಿಂದ ಆಚರಿಸುತ್ತಾರೆ. ಈ ಎಲ್ಲ ವಿಷಯುವನ್ನು ಮಕ್ಕಳಿಗೆ ಆಟಗಳ ಮುಖಾಂತರ, ಸಮುದಾಯದ ಅಧ್ಯಯನದ ಕಥೆಗಳ ರಚನೆ, ಚಿತ್ರಗಳನ್ನು ಬಿಡಿಸುವುದು, ಅಭಿನಯದ ಮೂಲಕ ಕಲಿಕೆ, ಕಲಿತ ವಿಷಯಗಳನ್ನು ತಮ್ಮದೇ ರೀತಿಯಲ್ಲಿ ದಾಖಲೀಕರಣ ಮಾಡುವುದು ಈ ರೀತಿಯ ಚಟುವಟಿಕೆಗಳ ಮೂಲಕ ಸಮುದಾಯದ ಅಧ್ಯಯನಕ್ಕೆ ಇಲ್ಲಿನ ಮಕ್ಕಳನ್ನು ಸಿದ್ಧಗೊಳಿಸಲಾಗುತ್ತಿದೆ.

ಕಲಾತ್ಮಕವಾಗಿ ಯೋಜನೆಯನ್ನು ರೂಪಿಸುತ್ತಿರುವುದರಿಂದ ಮಕ್ಕಳ ಹಾಜರಾತಿ ಹೆಚ್ಚಳ, ಕಲಿಕಾ ಆಸಕ್ತಿ ಹೆಚ್ಚಳ ಹಾಗೂ ಪ್ರಶ್ನಿಸುವ ಮನೋಭಾವ ಬೆಳೆಯುತ್ತಿರುವ ಫಲಿತಾಂಶವನ್ನು ಕಂಡುಕೊಳ್ಳಲಾಗುತ್ತಿದೆ. ಮಕ್ಕಳು ತಮ್ಮ ಸಮುದಾಯದ ಐತಿಹಾಸಿಕ ಹಿನ್ನೆಲೆಗಳನ್ನು ಜಾನಪದ ಮತ್ತು ಸಾಂಪ್ರದಾಯಿಕ ಇತಿಹಾಸವನ್ನು ಅರ್ಥೈಸಿಕೊಂಡು ಸಮಾಜ ಮತ್ತು ಸಮುದಾಯದ ಉತ್ತಮ ವ್ಯಕ್ತಿಗಳಾಗಿ ರೂಪುಗೊಳ್ಳುತ್ತಿದ್ದಾರೆ.

> ಈ ಶಾಲೆಗೆ ಬರುವ ಗೌಳಿ ಸಮುದಾಯದ ಮಕ್ಕಳು ತಮ್ಮ ಸಮುದಾಯಗಳ ಇತಿಹಾಸ ಹಾಗೂ ಜಾನಪದ ಶ್ರೀಮಂತಿಕೆಯನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಗಿರುವ ಒಂದು ಯೋಜನೆಯನ್ನು ಮಾಡಲು ಅವಕಾಶ ಸಿಕ್ಕಿರುವುದಕ್ಕೆ ಬಹಳ ಸಂತೋಷವಾಗಿದೆ. ಧಾರವಾಡ ಪೇಡ ಹಾಗೂ ಗೌಳಿ ಸಮುದಾಯದ ನಂಟನ್ನು ಮಕ್ಕಳೊಂದಿಗೆ ಚಟುವಟಿಕೆಗಳ ಮೂಲಕ ಮಾಡುವ ಯೋಜನೆ ಚೆನ್ನಾಗಿ ಮೂಡಿ ಬಂತು.
> – ಲಾಲ್ ಸಾಬ್ ನದಾಫ್

# ಭಾಷಾ ಅಸ್ಮಿತೆಯ ನೆಲಘಮಲು

2024–25
ಕಲಾವಿದರ ಯೋಜನೆ




**ಕೆ.ವಿ. ನಾಯಕ್**
**ಕಲಾವಿದರು**
7259926543


ರಂಗಭೂಮಿಯ ಕಲಾವಿದರಾದ ಕೆ.ವಿ.ನಾಯಕ್ ಇವರು ತಾವು ಓದಿದ ಚಿಕ್ಕಬಳ್ಳಾಪುರ ಜಿಲ್ಲೆಯ, ಗೌರಿಬಿದನೂರು ತಾಲ್ಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮರಳೂರು, ಇಲ್ಲಿಯ ನಾಲ್ಕು ಮತ್ತು ಆರನೇ ತರಗತಿಯ ಇಪ್ಪತ್ತೈದು ಮಕ್ಕಳನ್ನು ತೊಡಗಿಸಿಕೊಂಡು ಆರಂಭಿಸಿದ ಯೋಜನೆ 'ನೆಲಘಮಲು'. ಈ ಹೆಸರೇ ಸೂಚಿಸುವಂತೆ ಈ ನೆಲದ ಭಾಷೆಯನ್ನು ಜನಪದ ಸಾಹಿತ್ಯದ ಘಮಲನ್ನು ವಿದ್ಯಾರ್ಥಿಗಳು ಅರಿತುಕೊಳ್ಳುವಂತೆ ಮಾಡುವುದೇ ಈ ಯೋಜನೆಯ ಪ್ರಮುಖ ಉದ್ದೇಶ.

ಅವಿಭಜಿತ ಕೋಲಾರ ಜಿಲ್ಲೆಯು ಆಂಧ್ರ ಪ್ರದೇಶದ ಗಡಿಭಾಗವಾಗಿದ್ದು, ತೆಲುಗು ಭಾಷೆಯ ಪ್ರಭಾವ ಇಲ್ಲಿಯ ಜನರ ಜನಪದದ ಮೇಲೆ, ಭಾಷೆಯ ಮೇಲೆ ಬಹಳಷ್ಟಿದೆ. ಈ ಭಾಗದ ಜನರ ಜನಪದ ಸಾಹಿತ್ಯ ಹೆಚ್ಚಿನವು ತೆಲುಗು ಭಾಷೆಯಲ್ಲಿದ್ದು, ಜನರು ಮಾತನಾಡುವ ಭಾಷೆಯೂ ಸಹ ಕನ್ನಡ ಮತ್ತು ತೆಲುಗು ಮಿಶ್ರಿತವಾಗಿ ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿದೆ.

ವಿದ್ಯಾರ್ಥಿಗಳು ಈ ಯೋಜನೆಯ ಮೂಲಕ ತೆಲುಗು ಭಾಷೆಯಲ್ಲಿನ ಜನಪದ ಸಾಹಿತ್ಯವನ್ನು ಕನ್ನಡ ಭಾಷೆಗೆ ಅನುವಾದ ಮಾಡಿ ಎರಡು ಭಾಷೆಗಳು ಪರಸ್ಪರ ಕೊಡುಕೊಳ್ಳುವಿಕೆಯ ಮೂಲಕ ಕಂಡುಕೊಂಡಿರುವ ಭಾಷಾ ನಾವಿನ್ಯತೆಯನ್ನು ಅರ್ಥಮಾಡಿಕೊಳ್ಳುವರು. ಜತೆಗೆ ಅನುವಾದದ ಸಮಯದಲ್ಲಿ ಭಾಷಾನುವಾದ ಅಥವಾ





ಭಾವಾನುವಾದ ಇವುಗಳಿಗಿರುವ ಮಹತ್ವವನ್ನು ತಿಳಿಯಲು ಈ ಯೋಜನೆ ಸಹಕಾರಿಯಾಗಿದೆ.

ಜನಪದ ಸಾಹಿತ್ಯ ಅನುವಾದದ ಜತೆಗೆ ಈ ಭಾಗದ ಪ್ರಮುಖ ಕಲಾ ಪ್ರಕಾರಗಳಲ್ಲಿ ಒಂದಾದ 'ಜಡೆಕೋಲಾಟ' ಪ್ರದರ್ಶನ ಈ ಯೋಜನೆಯ ಅಂತಿಮ ಹಂತವಾಗಿದೆ. ವಿದ್ಯಾರ್ಥಿಗಳು ಯೋಜನೆಯ ವಿವಿಧ ಹಂತಗಳಲ್ಲಿ ತೆಲುಗು ಭಾಷೆಯಿಂದ ಕನ್ನಡ ಭಾಷೆಗೆ ಅನುವಾದ ಮಾಡಿರುವ ಜನಪದ ಸಾಹಿತ್ಯವನ್ನು ಜಡೆ ಕೋಲಾಟದ ಪ್ರದರ್ಶನ ಸಾಹಿತ್ಯವಾಗಿ ಬಳಸುವ ಮೂಲಕ ಜನಜೀವನದಲ್ಲಿ ನೆಲದ ಭಾಷೆಯ ಮಹತ್ವ ಮತ್ತು ಅಸ್ಮಿತೆಯನ್ನು ಅರ್ಥಮಾಡಿಕೊಳ್ಳುವರು.

> ತೆಲುಗು ಜನಪದ ಗೀತೆಗಳನ್ನು ಕನ್ನಡದಲ್ಲಿ ಅನುವಾದಿಸಿ ಹಾಡುವಾಗ ಎರಡೂ ಭಾಷೆಗಳು ಒಂದೇ ತಾಯಿ ಮಕ್ಕಳು ಎಂದೆನಿಸಿತು.
> – ಹೇಮಶ್ರೀ,
> ಏಳನೇ ತರಗತಿ



# ಕೊರಮ ಸಮುದಾಯ ಕಲೆಗಳ ಸಮುದಾಯ



**ಹರೀಶ ದೊಡ್ಮನಿ**
**ಕಲಾವಿದರು**
8105199308

ಬೆಳಗಾವಿ ಜಿಲ್ಲೆಯ ರಾಮದುರ್ಗಾದ ರಂಗಭೂಮಿಯ ಕಲಾವಿದರಾದ ಹರೀಶ ದೊಡ್ಮನಿ ಇವರು ಹಾವೇರಿ ಜಿಲ್ಲೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ತಡಸ ಇಲ್ಲಿಯ ಆರನೇ ತರಗತಿಯ ವಿದ್ಯಾರ್ಥಿಗಳನ್ನು ಕಲಾ ಸಮ್ಮಿಳಿತ ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ಐಎಫ್ಎಯ ಕಲಿ ಕಲಿಸು ಯೋಜನೆಯಡಿ ಕೈಗೆತ್ತಿಕೊಂಡ ಯೋಜನೆ 'ಕೊರಮ ಸಮುದಾಯ ಕಲೆಗಳ ಸಮುದಾಯ'.

ಕೊರಮ ಸಮುದಾಯದ ಜನರು ದಕ್ಷಿಣ ಭಾರತದ ಎಲ್ಲಾ ರಾಜ್ಯಗಳಲ್ಲಿ ಕಾಣಸಿಗುತ್ತಾರೆ. ಅದಾಗ್ಯೂ ಕರ್ನಾಟಕದ ಉತ್ತರ ಭಾಗದಲ್ಲಿ ಇವರು ಹೆಚ್ಚಿನ ಸಂಖ್ಯೆಯಲ್ಲಿ ನೆಲೆಯೂರಿದ್ದಾರೆ. ಕೃಷಿ ಉಪಕರಣಗಳು ಹಾಗೂ ಇತರೆ ದೈನಂದಿನ ಬಳಕೆಯ ಉಪಕರಣಗಳನ್ನು ಮರಗಳಿಂದ ತಯಾರಿಸುವುದು ಈ ಸಮುದಾಯದ ಮೂಲ ವೃತ್ತಿಯಾಗಿತ್ತು. ಈ ಉಪಕರಣಗಳನ್ನು ತಲೆ ತಲಾಂತರಗಳಿಂದ ಇವರು ತಯಾರಿಸುತ್ತಾ ಬಂದ ಕಾರಣ ಇವರ ಕಲಾ ನೈಪುಣ್ಯತೆ ಇವರ ವೃತ್ತಿಯಲ್ಲಿ ಕಾಣಸಿಗುತ್ತದೆ. ಇದರ ಜತೆಗೆ ಮಕ್ಕಳ ಆಟಿಕೆಯ ಬೊಂಬೆ, ಬುಗುರಿಗಳನ್ನೂ ಇವರು ತಯಾರಿಸುತ್ತಾರೆ. ಪ್ರಸಿದ್ಧ ಕೊರವಂಜಿ ಕಲಾ ಪ್ರಕಾರವೂ ಈ ಸಮುದಾಯದ ಬಹುದೊಡ್ಡ ಕೊಡುಗೆಯಾಗಿದೆ.

ಪ್ಲಾಸ್ಟಿಕ್ ಮತ್ತು ಕಬ್ಬಿಣದ ಉಪಕರಣಗಳು ಬಂದ ನಂತರ ನಿಧಾನವಾಗಿ ಕೊರಮ ಸಮುದಾಯದ ಕುಶಲಕಲೆಗಳು ಮರೆಯಾಗುತ್ತಾ ಬಂದಿವೆ. ಇವುಗಳನ್ನು ಮುಂದಿನ ಪರಂಪರೆಗೆ ತಿಳಿಸುವ ಉದ್ದೇಶದಿಂದ ಈ ಯೋಜನೆಯನ್ನು ಕಲಾವಿದರು






ಹಮ್ಮಿಕೊಂಡಿದ್ದಾರೆ. ಕೊರಮ ಸಮುದಾಯದ ಸ್ಥಳೀಯ ಕಲಾವಿದರನ್ನು ಶಾಲೆಗೆ ಕರೆಸಿ ವಿದ್ಯಾರ್ಥಿಗಳೊಂದಿಗೆ ಮುಖಾಮುಖಿ ಕಾರ್ಯಾಗಾರವನ್ನು ಹಮ್ಮಿಕೊಂಡು ಈ ಸಮುದಾಯದ ಕುಶಲ ಕಲೆಗಳ ಜತೆಗೆ ಕೊರವಂಜಿ ನೃತ್ಯ ಪ್ರಕಾರವನ್ನು ಕೂಡಾ ವಿದ್ಯಾರ್ಥಿಗಳಿಗೆ ಪರಿಚಯಿಸುವುದು ಈ ಯೋಜನೆಯ ಆಶಯವಾಗಿದೆ. ಯೋಜನೆಯ ಅಂತಿಮ ಹಂತದಲ್ಲಿ ಕೊರಮ ಸಮುದಾಯದ ಕಲಾನೈಪುಣ್ಯತೆಯನ್ನು ಬಿಂಬಿಸುವ 'ವಸ್ತು ಪ್ರದರ್ಶನ' ಹಾಗೂ 'ಕೊರವಂಜಿ ಕಲಾ ಪ್ರದರ್ಶನ'ವನ್ನು ಹಮ್ಮಿಕೊಂಡು ಈ ಸಮುದಾಯದ ಕಲೆಯನ್ನು ವಿದ್ಯಾರ್ಥಿಗಳ ಮೂಲಕ ಮುಂದಿನ ಪೀಳಿಗೆಗೆ ಪರಿಚಯಿಸುವುದು ಈ ಯೋಜನೆಯ ಉದ್ದೇಶವಾಗಿದೆ.

> ಈ ಯೋಜನೆಯಿಂದ 1871 ರ ಕ್ರಿಮಿನಲ್ ಟ್ರೈಬ್ ಆಕ್ಟ್ ಮತ್ತು ಸೆಟಲ್ಮೆಂಟ್ ಬಗ್ಗೆ ತಿಳಿದುಕೊಂಡೆ
> – ಗೌರಿ ನಿಕ್ಕಂ,
> 7ನೇ ತರಗತಿ



# ನೀಲಗಾರರ ಸಮುದಾಯದ ಕಲಾ ಅಂತರ್ಗತ ಕಲಿಕೆ



**ಅರ್ಜುನ್ ಹುಣಸೂರು**
**ಕಲಾವಿದರು**
7259853143

ರಂಗಾಯಣ ಕಲಾವಿದರಾಗಿರುವ ಮೈಸೂರಿನ ಅರ್ಜುನ್ ಹುಣಸೂರ ಇವರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಚಿಕ್ಕ ಹುಣಸೂರು, ಮೈಸೂರು ಈ ಶಾಲೆಯ ಏಳನೇ ತರಗತಿಯ ನಲವತ್ತೈದು ವಿದ್ಯಾರ್ಥಿಗಳನ್ನು ಕೇಂದ್ರೀಕರಿಸಿ ಐಎಫ್‌ಎಯ ಕಲಿ ಕಲಿಸು ಯೋಜನೆಯಡಿ ಕೈಗೊಂಡ ಕಲಾಂತರ್ಗತ ಕಲಿಕಾ ಪ್ರಯೋಗ 'ನೀಲಗಾರರ ಸಮುದಾಯದ ಜೊತೆಗೆ ಕಲಾ ಅಂತರ್ಗತ ಕಲಿಕೆ'.

ಜನಪದ ಹಾಡುಗಾರರ ಸಮುದಾಯದಲ್ಲೇ ಬಹಳ ಪ್ರಸಿದ್ಧಿ ಪಡೆದವರು ಮಂಟೆಸ್ವಾಮಿ ಪದ್ಧತಿಯ ನೀಲಗಾರ ಸಮುದಾಯದ ಹಾಡುಗಾರರು. ಮಂಟೆಸ್ವಾಮಿ ಅಥವಾ ಸಿದ್ದಪ್ಪಾಜಿ ಎಂದು ಕರೆಯಲ್ಪಡುವ ಇವರು ಹದಿನಾರನೇ ಶತಮಾನದ ಕವಿ ಮತ್ತು ಸಂತ. ಈಗಿನ ನೀಲಗಾರ ಸಮುದಾಯಕ್ಕೆ ಆದರ್ಶ ಪುರುಷ. ಇವರು ರಚಿಸಿದ್ದರೆನ್ನಲಾದ ಮಂಟೆಸ್ವಾಮಿ ಕಾವ್ಯವನ್ನು ನೀಲಗಾರ ಜನಪದ ಹಾಡುಗಾರರು ನಿರಂತರ ಮೂರು ಗಂಟೆಗಳಿಗೂ ಹೆಚ್ಚು ಕಾಲ ಹಾಡಬಲ್ಲರು.



ಈ ಯೋಜನೆಯಡಿ ವಿದ್ಯಾರ್ಥಿಗಳು ನೀಲಗಾರ ಸಮುದಾಯದ ಕಲಾವಿದರೊಂದಿಗೆ ಒಡಗೂಡಿ ಮಹಾಕಾವ್ಯವನ್ನು ಹಾಡುವುದರೊಂದಿಗೆ ಅರ್ಥಮಾಡಿಕೊಳ್ಳುವರು. ಈ ಮೂಲಕ ಕಲಿಕೆಯನ್ನು ತರಗತಿ ಕೊಠಡಿಯಿಂದಾಚೆ ವಿಸ್ತರಿಸುವ ಪ್ರಯತ್ನ ಇದಾಗಿದೆ. ನೀಲಗಾರರು ಹಾಡಿನ ಜತೆಗೆ ಬಳಸುವ ತಂಬೂರಿ ನುಡಿಸುವುದನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳುವರು ಮತ್ತು ಈ ತಂಬೂರಿಯನ್ನು ತಯಾರಿಸುವ ವಿಧಾನವನ್ನು ಕಲಾವಿದರಿಂದ ಪ್ರಾತ್ಯಕ್ಷಿಕೆಯ ಮೂಲಕ ಕಲಿಯುವರು. ಇದರ ಜತೆಗೆ ನೀಲಗಾರರ ಹಾಡುಗಳನ್ನು ಸಂಗ್ರಹಿಸುವ ಕೆಲಸವನ್ನು ವಿದ್ಯಾರ್ಥಿಗಳು ನಿರ್ವಹಿಸುತ್ತಾರೆ. ಈ ಮೂಲಕ ಮಹಾಕಾವ್ಯದಲ್ಲಿ ಬರುವ ಉಪಕತೆಗಳ ಆಧಾರದಲ್ಲಿ ರಂಗಪ್ರಯೋಗಕ್ಕೆ ಸೂಕ್ತವಾದ ವಸ್ತುವನ್ನು ರಚಿಸಿ ವೇದಿಕೆಯಲ್ಲಿ ಇವುಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸುವ ಉದ್ದೇಶವನ್ನು ಈ ಯೋಜನೆ ಹೊಂದಿದೆ.

ವಿದ್ಯಾರ್ಥಿಗಳು ಸಂಗ್ರಹಿಸುವ, ಸಂದರ್ಶಿಸುವ, ರಚಿಸುವ ಹಾಡುಗಳು, ವಿಷಯಗಳನ್ನೊಳಗೊಂಡ ಕೈಪಿಡಿಯನ್ನು ಈ ಯೋಜನೆಯಡಿಯಲ್ಲಿ ಪ್ರಕಟಿಸಿ ದಾಖಲಿಸುವ ಮೂಲಕ ಈ ಯೋಜನೆ ಸಮಾಜ ವಿಜ್ಞಾನ ವಿಷಯದಲ್ಲಿನ 'ಸ್ಥಳೀಯ ಸಮುದಾಯಗಳ ಅಧ್ಯಯನ' ವಿಷಯಕ್ಕೆ ಅರ್ಥಪೂರ್ಣವಾಗಿ ಸಮ್ಮಿಳಿತಗೊಳ್ಳುತ್ತದೆ. ●

> ಈ ಯೋಜನೆಯ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳು ಜನಪದ ವಾದ್ಯಗಳನ್ನು ನುಡಿಸುವುದನ್ನು ಕಲಿತು, ವಿವಿಧ ಕಾರ್ಯಕ್ರಮಗಳಲ್ಲಿ ಪ್ರದರ್ಶನ ನೀಡಿ ಜನಮನ್ನಣೆ ಗಳಿಸಿ ಶಾಲೆಗೆ ಕೀರ್ತಿಯನ್ನು ತಂದಿರುತ್ತಾರೆ.
> –ನಾಗೇಶ್ ಎಸ್. ಸಹಶಿಕ್ಷಕರು



# ಸ್ಥಳೀಯ ಭಾಷೆ ಮತ್ತು ಪಠ್ಯಕ್ರಮ

**ಪಟೇಲ್ ಮೋತಿಲಾಲ್ ಠಾಕೂರ್ ಮೆಮೋರಿಯಲ್ ಶಾಲೆ**
**ರತ್ಲಂ, ಮಧ್ಯಪ್ರದೇಶ**

ಮಧ್ಯಪ್ರದೇಶ ರಾಜ್ಯದ ರತ್ಲಂ ನಲ್ಲಿರುವ 'ಮಾರುತಿ ಶಿಕ್ಷಾ ಏವಂ ಸಮಾಜ ಕಲ್ಯಾಣ ಸಮಿತಿ' ವತಿಯಿಂದ ನಡೆಸಲ್ಪಡುವ 'ಪಟೇಲ್ ಮೋತಿಲಾಲ್ ಠಾಕೂರ್ ಮೆಮೋರಿಯಲ್ ಶಾಲೆ' ಗ್ರಾಮೀಣ ಭಾಗದಲ್ಲಿನ ವಿದ್ಯಾರ್ಥಿಗಳ ಅದರಲ್ಲೂ ಕೆಳವರ್ಗದ ಮತ್ತು ಹೆಣ್ಣು ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವ ಗುರಿಯನ್ನು ಹೊಂದಿದ ಸಂಸ್ಥೆಯಾಗಿದೆ. ಇಲ್ಲಿಯ ಶಿಕ್ಷಣ ಹಿಂದಿ ಮಾಧ್ಯಮದಲ್ಲಿದ್ದರೂ ಇಲ್ಲಿನ ಸ್ಥಳೀಯ ಭಾಷೆ ಮಾಲ್ವಿ. ಪಠ್ಯಕ್ರಮದ ಜತೆ ಸ್ಥಳೀಯ ಭಾಷೆ ಮತ್ತು ಭಾಟಿಕ್ ಕಲೆ ಮತ್ತು ಭೇರುಘರ್ ಎಂಬ ಚಿತ್ರಕಲೆಯನ್ನು ಅಂತರ್ಗತಗೊಳಿಸುವ ಪ್ರಯತ್ನವನ್ನು ಈ ಯೋಜನೆಯ ಮೂಲಕ ಈ ಸಂಸ್ಥೆ ಕೈಗೆತ್ತಿಕೊಳ್ಳಲು ಯೋಜಿಸಿದೆ.





ಮಾಲ್ವಿ ಮತ್ತು ಹಿಂದಿ ಭಾಷೆಯನ್ನೊಳಗೊಂಡ ದ್ವಿಭಾಷಾ ಮಾಧ್ಯಮದಲ್ಲಿ ಶಿಕ್ಷಣವನ್ನು ನೀಡುವ ಮೂಲಕ ವಿದ್ಯಾರ್ಥಿಗಳಲ್ಲಿ ಸ್ಥಳೀಯ ಭಾಷೆ ಮತ್ತು ಸಂಸ್ಕೃತಿ, ಸಂಪ್ರದಾಯಗಳ ಬಗ್ಗೆ ಅಭಿಮಾನ ಮತ್ತು ಗೌರವವನ್ನು ಬೆಳೆಸುವ ಉದ್ದೇಶವನ್ನು ಈ ಯೋಜನೆ ಹೊಂದಿದೆ. ಮಾಲ್ವಿ ಭಾಷೆಯಲ್ಲಿನ ಜನಪದ ಕತೆಗಳು, ಹಾಡುಗಳನ್ನು ವಿದ್ಯಾರ್ಥಿಗಳು ಹಲವು ಚಟುವಟಿಕೆಗಳ ಮೂಲಕ ದಾಖಲಿಸಿಕೊಳ್ಳುವರು ಇದರಿಂದ ತಮ್ಮ ಭಾಷೆಯಲ್ಲಿನ ಸಾಹಿತ್ಯ ಶ್ರೀಮಂತಿಕೆಯನ್ನು ಅರ್ಥಮಾಡಿಕೊಳ್ಳುವರು. ಇದರ ಜತೆಗೆ ಮಧ್ಯಪ್ರದೇಶದ ಪ್ರಮುಖ ಸಾಂಪ್ರದಾಯಿಕ ಕಲೆಗಳಾದ ಭಾಟಿಕ್ ಮತ್ತು ಭೇರುಘರ್ ಕಲೆಯನ್ನು ಸ್ಥಳೀಯ ಕಲಾವಿದರೊಂದಿಗೆ ನೇರ ತರಗತಿ ಮತ್ತು ಪ್ರಾತ್ಯಕ್ಷಿಕೆಯ ಮೂಲಕ ಪಠ್ಯಕ್ರಮದ ಜತೆ ಜತೆಗೆ ಕಲಿಸುವ ಮತ್ತು ಬೆಳೆಸುವ ಉದ್ದೇಶವನ್ನು ಈ ಯೋಜನೆಯ ಮೂಲಕ ಈ ಸಂಸ್ಥೆ ಸಾಧಿಸಲಿದೆ.



ವಿಶೇಷವಾಗಿ ಇಲ್ಲಿ ದ್ವಿಭಾಷಾ ತರಗತಿಗಳನ್ನು ಮತ್ತು ಕಲಾಂತರ್ಗತ ತರಗತಿಗಳನ್ನು ನಡೆಸುವ ಬಗ್ಗೆ ಸಾಮರ್ಥ್ಯ ಅಭಿವೃದ್ಧಿ ತರಬೇತಿಗಳನ್ನು ಶಿಕ್ಷಕರಿಗೆ ನೀಡುವ ಮೂಲಕ ತರಗತಿಗಳು ಹೆಚ್ಚು ಯೋಜನಾಬದ್ಧವಾಗಿ ನಡೆಸಲು ಶಿಕ್ಷಕರನ್ನು ಅನುಕೂಲಿಸಲಾಗುವುದು. ಅಂತಿಮವಾಗಿ ವಿದ್ಯಾರ್ಥಿಗಳಿಂದ ಸ್ಥಳೀಯ ಬಾಷೆಯಲ್ಲಿ ಪ್ರದರ್ಶನಗಳು, ತಾವು ಸಂಗ್ರಹಿಸಿದ ಮಾಲ್ವಿ ಭಾಷೆಯ ಹಾಡುಗಳು, ಕತೆಗಳನ್ನೊಳಗೊಂಡ ಪುಸ್ತಕ, ವಸ್ತು ಪ್ರದರ್ಶನ ಹಾಗೂ ಬಹುಭಾಷಾ (ಹಿಂದಿ–ಮಾಲ್ವಿ–ಇಂಗ್ಲಿಷ್) ಅರ್ಥಕೋಶವನ್ನು ಹೊರತರಲಾಗುವುದು.

> ಹಿಂದಿ ಕಲಿತರೆ ಮಾತ್ರ ಗೌರವ ಎಂದುಕೊಂಡಿದ್ದ ನನಗೆ ನನ್ನ ಮಾತೃಭಾಷೆಯಾದ 'ಮಾಲ್ವಿ'ಯೂ ತನ್ನದೇ ಆದ ಅಸ್ಮಿತೆಯನ್ನು ವಿಶಿಷ್ಟತೆಯನ್ನು ಹೊಂದಿದೆ ಎಂದು ತಿಳಿದು ಅಭಿಮಾನ ಮೂಡಿತು.
> – ಸುನಿತ್ ಸೇನ್, ವಿದ್ಯಾರ್ಥಿ.

# ಪುಸ್ತಕದಾಚೆಗಿನ ಆಕಾಶ ಕಲಿಯುವ ಅವಕಾಶ

2024–25
ರಾಷ್ಟ್ರೀಯ ಶಾಲೆಗಳ
ಯೋಜನೆ

**ಘಾಸಿಯಾರ ವಿದ್ಯಾಪೀಠ ಸಂಸ್ಥೆ**
**ದಕ್ಷಿಣ 24 ಪರಗಣ, ಪಶ್ಚಿಮ ಬಂಗಾಳ**

ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣದಲ್ಲಿ ಶಾಲಾ ಶಿಕ್ಷಣದ ಜತೆಗೆ ಕಲಾಂತರ್ಗತ ಶಿಕ್ಷಣಕ್ಕೆ ಮಹತ್ವ ನೀಡುತ್ತಿರುವ 'ಘಾಸಿಯಾರ ವಿದ್ಯಾಪೀಠ ಸಂಸ್ಥೆ'ಯ ಎಂಟರಿಂದ ಹತ್ತನೇ ತರಗತಿ ವಿದ್ಯಾರ್ಥಿಗಳನ್ನು ಒಳಗೊಳ್ಳುವ ಯೋಜನೆ 'ಪುಸ್ತಕದಾಚೆಗಿನ ಆಕಾಶ'.

ಘಾಸಿಯಾರ ವಿದ್ಯಾಪೀಠದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ ಬಹುತೇಕರು ಬಂಗಾಳಿ ಭಾಷಿಕರಾಗಿದ್ದು, ಇವರಲ್ಲದೆ ಬೋಡೋ, ಒಡಿಯಾ, ಅಸ್ಸಾಮಿ ಮಾತನಾಡುವ ವಿದ್ಯಾರ್ಥಿಗಳು ಕೂಡ ಇಲ್ಲಿದ್ದಾರೆ. ಮಕ್ಕಳಲ್ಲಿ ಸಾಹಿತ್ಯದ ಅಭಿರುಚಿಯನ್ನು ಬೆಳೆಸುವ ಉದ್ದೇಶದಿಂದ ಈ ಕಲಾಂತರ್ಗತ ಚಟುವಟಿಕೆಯ ಮೂಲಕ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳಿಂದ ವಿದ್ಯಾರ್ಥಿಗಳ ಜತೆ ಮಹಾನ್ ಕವಿಗಳಾದ ರವೀಂದ್ರನಾಥ ಠಾಗೋರರ ಕೃತಿಗಳನ್ನು ಓದಿಸುವ ಮತ್ತು ಬಂಗಾಳದ ಭೌಗೋಳಿಕ ಸೌಂದರ್ಯ ಮತ್ತು ಸಾಮಾಜಿಕ ಜೀವನ ಶೈಲಿಯ ಪ್ರಭಾವದ ಬಗ್ಗೆ ಚರ್ಚೆಯನ್ನು ಏರ್ಪಡಿಸಲಾಗುವುದು. ಜತೆಗೆ ಬಂಗಾಳದ 'ಬೋಂಗೋ ಪುತುಲ್' ಕಲೆ (ಜನಪದ ಬೊಂಬೆಯಾಟ) ಮತ್ತು 'ಪುರುಲಿಯಾ ಛಾವು' ಮುಖವಾಡ ತಯಾರಿ ಕಲೆಯ ಮೂಲಕ ಸಮಾಜ ವಿಜ್ಞಾನ ಮತ್ತು ಭೂಗೋಳ ಶಾಸ್ತ್ರದ ಜತೆ ಕಲೆಯನ್ನು ಅಂತರ್ಗತಗೊಳಿಸುವ ಪ್ರಯತ್ನವನ್ನು ಈ






ಯೋಜನೆಯ ಮೂಲಕ ಸಂಪೂರ್ಣ ಶಾಲೆ ಕೈಗೆತ್ತಿಕೊಳ್ಳಲಿದೆ.

ಆರ್ಟ್ ಥೆರಪಿಯು ಮೂಲಕ ವಿದ್ಯಾರ್ಥಿಗಳಲ್ಲಿ ಸೂಕ್ಷ್ಮ ಸಂವೇದನೆಯನ್ನು ಬೆಳೆಸುವ ಚಟುವಟಿಕೆಗಳ ಜೊತೆಗೆ ಲಿಂಗ ಸಮಾನತೆ, ಸಮನ್ವಯ ಶಿಕ್ಷಣ, ಪರಿಸರ ಜಾಗೃತಿ ಮೂಡಿಸುವ ಚಟುವಟಿಕೆಗಳನ್ನು ಈ ಯೋಜನೆ ಒಳಗೊಂಡಿದೆ. ಧ್ವನಿ ಸಂವೇದನಾ ಚಟುವಟಿಕೆಗಳ ಮೂಲಕ ಪ್ರಕೃತಿ ಮತ್ತು ಅದರ ವಿದ್ಯಮಾನಗಳು ಸಂಗೀತದ ಜತೆ ಬೆಸೆದುಕೊಂಡಿರುವ ಬಗೆಯನ್ನು ವಿದ್ಯಾರ್ಥಿಗಳು ಸ್ವಯಂ ಅನುಭವದಿಂದ ದಾಖಲಿಸುವ ಚಟುವಟಿಕೆಗಳನ್ನು ಈ ಯೋಜನೆ ಒಳಗೊಂಡಿದೆ.

ಅಂತಿಮವಾಗಿ ವಿದ್ಯಾರ್ಥಿಗಳಿಂದ ವಿವಿಧ ಕಲಾ ಪ್ರದರ್ಶನ, ವಸ್ತು ಪ್ರದರ್ಶನಗಳನ್ನು ಮತ್ತು ವಿದ್ಯಾರ್ಥಿಗಳ ಅನುಭವಗಳ ಬಗ್ಗೆ ಚರ್ಚೆಗಳು ನಡೆಯಲಿರುವುದು.

> ಜನಪದ ಬೊಂಬೆಯಾಟದ ಬಗ್ಗೆ ಕೇಳಿ ತಿಳಿದಿದ್ದ ನನಗೆ ಈ ಯೋಜನೆಯಿಂದ ಈ ವಿಶಿಷ್ಟ ಕಲೆಯನ್ನು ಅರ್ಥ ಮಾಡಿಕೊಳ್ಳಲು ಹಾಗೂ ಬೊಂಬೆ ತಯಾರಿಯ ಬಗ್ಗೆ ತಿಳಿಯಲು ಸಾಧ್ಯವಾಯಿತು.
> – ಅಲೋಲಿಕಾ, ವಿದ್ಯಾರ್ಥಿನಿ.



# ಬುಡಕಟ್ಟು ನೆಲೆಗಳ ಒಂದು ಶಾಲಾ ಮ್ಯೂಸಿಯಂ

2024–25
ರಾಷ್ಟ್ರೀಯ ಶಾಲೆಗಳ
ಯೋಜನೆ

**ಭಾರತೀಯ ವಿದ್ಯಾನಿಕೇತನ ವಿದ್ಯಾಸಂಸ್ಥೆ**
**ಕಲಿಮೇಲ, ಒಡಿಶಾ**

ಒಡಿಶಾ ರಾಜ್ಯದ ಕಲಿಮೇಲದಲ್ಲಿರುವ 'ಭಾರತೀಯ ವಿದ್ಯಾನಿಕೇತನ ವಿದ್ಯಾಸಂಸ್ಥೆ' ತಮ್ಮ ರಾಜ್ಯದಲ್ಲಿನ ಹಲವು ಬುಡಕಟ್ಟು ಜನಾಂಗದಲ್ಲಿ ಕಂಡು ಬರುವ ವಿವಿಧ ಕಲಾ ಪ್ರಕಾರಗಳನ್ನು ಶಾಲಾ ಪಠ್ಯಕ್ರಮದ ಜತೆ ಅನುಸಂಧಾನಗೊಳಿಸಿ ಹಲವು ಕಲಾಂತರ್ಗತ ಚಟುವಟಿಕೆಗಳ ಮೂಲಕ ಬುಡಕಟ್ಟು ಜನಾಂಗಗಳ ಕಲಾ ಪ್ರಕಾರಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ಮತ್ತು ಇವುಗಳ ದಾಖಲೀಕರಣ ಮಾಡುವ ಪ್ರಯತ್ನವನ್ನು ಈ ಸಾಂಸ್ಥಿಕ ಯೋಜನೆ ಹೊಂದಿದೆ.

ಈ ಯೋಜನೆಯ ಮೊದಲನೇ ಹಂತದಲ್ಲಿ ಒಡಿಶಾ ರಾಜ್ಯದ ಪ್ರಮುಖ ಬುಡಕಟ್ಟುಗಳಾದ 'ಕೋಯಾ, ಪರೋಜ, ಗಡಬಾ' ಜನಾಂಗದ ಕಲೆಗಳನ್ನು ಅದೇ ಸಮುದಾಯದ ಕಲಾವಿದರನ್ನು ಆಹ್ವಾನಿಸಿ ವಿದ್ಯಾರ್ಥಿಗಳೊಂದಿಗೆ ಮುಖಾಮುಖಿ ಚರ್ಚೆಗಳನ್ನು, ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವ ಮೂಲಕ ವಿದ್ಯಾರ್ಥಿಗಳು ಸ್ವತಃ ಕಲಾಕೃತಿಗಳನ್ನು ಅಭ್ಯಸಿಸಲು ಪ್ರೇರೇಪಿಸಲಾಗುವುದು. ಇದರಿಂದ ಪ್ರತಿ ಕಲೆಗಳ ಹಿಂದಿನ ಸೂಕ್ಷ್ಮ ಕೈಚಳಕಗಳು ಮತ್ತು ಅಸ್ಮಿತೆಗಳನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳುವರು. ಜತೆಗೆ ಕಲಾಕೃತಿಗಳ ಹಿಂದಿನ ಕತೆಗಳು, ಐತಿಹ್ಯಗಳ ಬಗಗೆ ಮಾಹಿತಿಯನ್ನು ದಾಖಲಿಸಿಕೊಳ್ಳುವರು. ಈ ಸರಣಿ ಕಾರ್ಯಕ್ರಮಗಳು ಸಮುದಾಯಗಳಲ್ಲಿನ ಕಲಾ





ಶ್ರೀಮಂತಿಕೆಯನ್ನು, ಪೂರ್ವಜರಿಗಿದ್ದ ಕಲಾಪ್ರಜ್ಞೆಯನ್ನು ಅರ್ಥಮಾಡಿಕೊಳ್ಳಲು ಪೂರಕವಾಗುವುದು.

ಎರಡನೇ ಹಂತದಲ್ಲಿ ವಿದ್ಯಾರ್ಥಿಗಳು ಸ್ಥಳೀಯ ಕಲಾವಿದರೊಂದಿಗೆ ಸೇರಿಕೊಂಡು ವಿವಿಧ ಕಲಾಕೃತಿಗಳನ್ನು ರಚಿಸುವರು. ಈ ಮೂಲಕ ಮಕ್ಕಳಲ್ಲಿ ಕಲಾಭಿವ್ಯಕ್ತಿಯನ್ನು ಉತ್ತೇಜಿಸುವುದು ಮತ್ತು ಕಲೆಯನ್ನು ವೃತ್ತಿಯನ್ನಾಗಿ ಆಯ್ಕೆ ಮಾಡಿಕೊಳ್ಳಲು ಪ್ರೇರೇಪಿಸುವ ಕಾರ್ಯವನ್ನು ಈ ಯೋಜನೆ ಮಾಡಲಿದೆ. ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಯೋಜನೆಯ ಪ್ರತೀ ಹಂತದಲ್ಲಿ ತಮ್ಮ ಅನುಭವಗಳನ್ನು ದಾಖಲಿಸಿಕೊಳ್ಳುವರು.

> ಬುಡಕಟ್ಟು ಜನಾಂಗದ ಕಲಾವಿದರ ಸಂದರ್ಶನದ ಮೂಲಕ ಕಲೆಯ ಬಗ್ಗೆ ಅವರಿಗಿರುವ ಆಳವಾದ ಜ್ಞಾನ ಮತ್ತು ಪರಿಣತಿ ಕಂಡು ಬುಡಕಟ್ಟು ಜನಾಂಗವೆಂದರೆ ಅವಿದ್ಯಾವಂತರೆಂಬ ನನ್ನ ಪೂರ್ವಾಗ್ರಹಗಳು ದೂರವಾಯಿತು.
>
> – ಬಿಶಾಖ, ವಿದ್ಯಾರ್ಥಿನಿ.

ಅಂತಿಮವಾಗಿ ವಿದ್ಯಾರ್ಥಿಗಳು ಮತ್ತು ಕಲಾವಿದರು ರಚಿಸಿದ ಕಲಾಕೃತಿಗಳನ್ನು ಒಳಗೊಂಡ ಬುಡಕಟ್ಟು ಜನಾಂಗದ ಕಲಾ ಪ್ರಕಾರಗಳನ್ನು ಪರಿಚಯಿಸುವ ಮ್ಯೂಸಿಯಂ ನಿರ್ಮಾಣ ಮಾಡಲಾಗುವುದು. ಇದರೊಂದಿಗೆ ವಿದ್ಯಾರ್ಥಿಗಳು ಸಂಶೋಧಿಸಿದ ಮಾಹಿತಿಗಳು, ಸ್ವ ಅವಲೋಕನಗಳು, ಸಂದರ್ಶನಗಳನ್ನು ಒಳಗೊಂಡ ಮಾಹಿತಿ ಪುಸ್ತಕವನ್ನು ಪ್ರಕಟಿಸಲಾಗುವುದು.



# ಐಎಫ್‌ಎ ತರಬೇತಿಗಳು

ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ಸಂಸ್ಥೆಯು ನಡೆಸುವ ಶಿಕ್ಷಕರ ಕಲಾ ಸಂಯೋಜಿತ ತರಬೇತಿಗಳು ರಾಜ್ಯದ ಆಯ್ದ ಎರಡು ಜಿಲ್ಲೆಗಳಲ್ಲಿ ಹಾಗು ನೆರೆ ರಾಜ್ಯದ ಗಡಿ ರೇಖೆಯನ್ನು ಹಂಚಿಕೊಳ್ಳುವ ಜಿಲ್ಲೆಯೊಂದರಲ್ಲಿ ಪ್ರತಿವರ್ಷ ನಡೆಯುತ್ತವೆ. ಈ ಸನಿವಾಸ ತರಬೇತಿಗಳು ಶಾಲಾ ಶಿಕ್ಷಕರ ಬೋಧನಾ ಸಾಮರ್ಥ್ಯಗಳನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿದ್ದು, ಕಳೆದ ಎರಡು ವರ್ಷಗಳಲ್ಲಿ ಶಿವಮೊಗ್ಗ, ಕೊಪ್ಪಳ, ಧಾರವಾಡ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಆಯೋಜಿಸಲ್ಪಟ್ಟವು.

ನೆರೆಯ ರಾಜ್ಯಗಳ ತರಬೇತಿಗಳು ಕೇರಳದ ಮಂಜೇಶ್ವರ ಹಾಗು ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಗಳಲ್ಲಿ ನಡೆದವು. ಈ ತರಬೇತಿಗಳು ಸ್ಥಳೀಯ ಕಲೆಗಳ ಪರಿಚಯ, ಅದರೊಂದಿಗೆ ಬೆಸೆದಿರುವ ಮಕ್ಕಳ ಜೀವನ ಶೈಲಿ ಇವುಗಳನ್ನು ಬೋಧನಾ ಕ್ರಮಗಳಲ್ಲಿ ಅಳವಡಿಸಿಕೊಳ್ಳುವ ಕ್ರಮಗಳು ಹೇಗೆ ಎಂಬುವುದನ್ನು ಕೇಂದ್ರೀಕರಿಸುತ್ತಾ ಅದಕ್ಕೆ ಅನುಗುಣವಾಗಿ ಪ್ರಾಯೋಗಿಕವಾಗಿ ನಡೆಸಲಾಗುತ್ತದೆ. ಈ ಅವಧಿಯಲ್ಲಿ ಚರ್ಚೆಗಳಿಂದ ಸಂಯೋಜಿತ ಪಠ್ಯಕ್ರಮದ ಪರಿಕಲ್ಪನೆಗಳನ್ನು ಸಹ ಮೂಡಿಸುವ ಉದ್ದೇಶವನ್ನು ಈ ತರಬೇತಿಗಳು ಹೊಂದಿವೆ.

ಗಣಿತದ ಕತೆಗಳು, ವಿಜ್ಞಾನ, ಭಾಷಾಶಾಸ್ತ್ರ, ಜಾನಪದ ಮತ್ತು ಸಮಾಜ ವಿಜ್ಞಾನ ಪಠ್ಯಕ್ರಮದ ವ್ಯಾಪ್ತಿಯನ್ನು ಕಲಾ ಸಂಯೋಜಿತ ಚಟುವಟಿಕೆಗಳ ಮೂಲಕ ಶಿಕ್ಷಕರಲ್ಲಿ ಸಮಗ್ರವಾದ ಆಲೋಚನೆಗಳಿಗೆ ಪ್ರೋತ್ಸಾಹಿಸಲಾಯಿತು. ಇದರಿಂದಾಗಿ ತರಬೇತಿಗಳಲ್ಲಿ ಭಾಗವಹಿಸಿದ ಶಿಕ್ಷಕರಿಗೆ ಪರಿಸರ, ನೀರು, ಸೌರಮಂಡಲ, ತಂತ್ರಜ್ಞಾನ, ಕಾರ್ಪೊರೇಟ್ ಜಗತ್ತು, ಕ್ರೀಡೆಗಳು ಮುಂತಾದ ಸಮಕಾಲೀನ ವಿವಿಧ ವಿಷಯಗಳ ಕುರಿತು ಏನು?, ಏಕೆ? ಮತ್ತು ಹೇಗೆ? ಎಂಬುದರ ಬಗ್ಗೆ ಆಳವಾದ ತಿಳುವಳಿಕೆಗಳನ್ನು ಬೆಳೆಸುವಲ್ಲಿ ಸಹಾಯ ಮಾಡಿತು. ಇದಲ್ಲದೆ, ವಸ್ತುಸಂಗ್ರಹಾಲಯದ ಸಂಗ್ರಹಗಳನ್ನು ತರಗತಿಯ ಬೋಧನೆಗೆ ಸಂಪನ್ಮೂಲವಾಗಿ ಹೇಗೆ ಬಳಸಬಹುದು ಎಂಬುದರ ಕುರಿತು ಚಟುವಟಿಕೆಗಳು ಮತ್ತು





ಪ್ರಾತ್ಯಕ್ಷಿಕೆಗಳು ಭಾಗವಹಿಸಿದ ಶಿಕ್ಷಕರಲ್ಲಿ ಸ್ಥಳೀಯ ಸಂಪನ್ಮೂಲಗಳ ಮಹತ್ವದ ಅರಿವನ್ನು ಮೂಡಿಸಿತು. ನಿಸ್ಸಂದೇಹವಾಗಿ, ಸ್ಥಳೀಯ ಸಂಪನ್ಮೂಲಗಳನ್ನು ಸಂಶೋಧಿಸುವ ಮಹತ್ವವನ್ನು ಅವರಲ್ಲಿ ತರುವಲ್ಲಿ ಯಶಸ್ವಿಯಾದವು.

ಈ ಎರಡು ವರ್ಷದ ತರಬೇತಿಗಳಲ್ಲಿ ಪಠ್ಯವೊಂದನ್ನು ಸುದ್ದಿಪತ್ರಿಕೆಯನ್ನಾಗಿ ಪರಿವರ್ತಿಸುವ ಪ್ರಯೋಗವು ಅತ್ಯಂತ ಪರಿಣಾಮಕಾರಿಯಾಯಿತು. ಇಲ್ಲಿ ಶಿಕ್ಷಕರು ಪಠ್ಯದ ವ್ಯಾಪ್ತಿಯನ್ನು ಸುದ್ದಿಪತ್ರಿಕೆಗಳಲ್ಲಿ ಕಂಡು ಬರುವ ರಾಜಕೀಯ, ಶಿಕ್ಷಣ, ಪ್ರಾದೇಶಿಕ ಸುದ್ದಿ, ನಾಟಕ, ವ್ಯವಹಾರ, ಕ್ರೀಡಾ ವಾರ್ತೆ, ಮತ್ತು ಸಂಪಾದಕೀಯವೂ ಸೇರಿದಂತೆ ಹಲವು ಅಂಕಣಗಳಿಗೆ ಹೊಂದುವಂತೆ ವಿನ್ಯಾಸವನ್ನು ರಚಿಸಿ ಪತ್ರಿಕಾ ಬರಹಗಳ ಮೂಲಕ ತಮ್ಮ ವಿಮರ್ಶಾತ್ಮಕ ಅಭಿಪ್ರಾಯಗಳನ್ನು ಅಭಿವ್ಯಕ್ತಿಗೊಳಿಸಿದರು. ಉತ್ತೇಜಕವಾದ ಸಂಗತಿಯೆಂದರೆ, ಈ ಪ್ರಯೋಗವನ್ನು ಕೇಳಿ ತಿಳಿದ ಹಲವು ಶಿಕ್ಷಕರು ಪ್ರಭಾವಿತರಾಗಿ ಇದನ್ನು ತಮ್ಮ ಶಾಲೆಗಳಲ್ಲಿ ಹೊರತರುವ ಪ್ರಯತ್ನಗಳನ್ನು ನಡೆಸಿದ್ದಾರೆ. ಹಾಗೆಯೇ ಈ ನಮ್ಮ ಪ್ರಯತ್ನವನ್ನು ರಾಜ್ಯದ ವಿವಿಧ ಆಸಕ್ತ ಶಿಕ್ಷಣ ಅಧಿಕಾರಿಗಳು ಗುರುತಿಸಿ ಪ್ರಸಂಶಿಸಿದ್ದಾರೆ ಮತ್ತು ಶಿಕ್ಷಣ ಇಲಾಖೆಯ ಮುಖವಾಣಿಯಾದ 'ಶಿಕ್ಷಣವಾರ್ತೆ' ಪತ್ರಿಕೆಯಲ್ಲಿ ಸವಿವರವಾದ ಲೇಖನವೊಂದನ್ನು ಪ್ರಕಟಿಸಲಾಗಿದೆ.



ಕೃಷ್ಣ

# ಐಎಫ್‌ಎ ಕಲಾಯಾತ್ರೆಗಳು

ಕಲಾ ಶಿಕ್ಷಣದ ಬೋಧನಾ ಪ್ರಕ್ರಿಯೆಗಳ ಮಾದರಿಗಳನ್ನು ಶಿಕ್ಷಕರಿಗೆ ಹಾಗು ಮಕ್ಕಳಿಗೆ ಪರಿಚಯಿಸುವ ಒಂದು ಸಂಚಾರಿ ಕಾರ್ಯಕ್ರಮವೇ 'ಕಲಾಯಾತ್ರೆ'ಗಳು. ಪ್ರತೀ ವರ್ಷ ಕರ್ನಾಟಕದ ಆಯ್ದ ಎರಡು ಜಿಲ್ಲೆಗಳ ನಾಲ್ಕು ತಾಲ್ಲೂಕುಗಳ ನಲ್ವತ್ತು ಸರ್ಕಾರಿ ಶಾಲೆಗಳಲ್ಲಿ ಈ ಕಾರ್ಯಕ್ರಮ ನಡೆಸಲಾಗುವುದು. ಕಳೆದ ಎರಡು ವರ್ಷಗಳಲ್ಲಿ ಮಧುಗಿರಿ, ವಿಜಯನಗರ, ಬಾಗಲಕೋಟೆ ಮತ್ತು ಹಾಸನ ಜಿಲ್ಲೆಗಳಲ್ಲಿ ಕಲಾಯಾತ್ರೆಗಳು ಯಶಸ್ವಿಯಾಗಿ ಸಾಗಿದವು.

ಕಲಿ ಕಲಿಸು ಕಾರ್ಯಕ್ರಮದಡಿಯಲ್ಲಿ ಈಗಾಗಲೇ ಪ್ರಾಯೋಗಿಕ ಯೋಜನೆಗಳನ್ನು ನಡೆಸಿದ ನಮ್ಮ ಶಿಕ್ಷಕರು ಮತ್ತು ಕಲಾವಿದರ ತಂಡ ಕಲಾಯಾತ್ರೆ ಸಂದರ್ಭದಲ್ಲಿ ಆಯ್ದ ಸರ್ಕಾರಿ ಶಾಲೆಗಳಿಗೆ ಭೇಟಿ ನೀಡಿ ಅಲ್ಲಿನ ಶಿಕ್ಷಕರೊಂದಿಗೆ ಕಲಾಂತರ್ಗತ ಕಲಿಕೆಯ ಸಾಧ್ಯತೆಗಳನ್ನು ಚರ್ಚಿಸಿ, ಪ್ರಾತ್ಯಕ್ಷಿಕೆ ಪಾಠವನ್ನು ನೀಡುವ ಮೂಲಕ ಆ ಶಿಕ್ಷಕರಲ್ಲಿ ಐಎಫ್‌ಎ ಸಂಸ್ಥೆಯ ಕಲಿ ಕಲಿಸು ಯೋಜನೆ ಬಗ್ಗೆ ಒಂದಿಷ್ಟು ಆಸಕ್ತಿಯನ್ನು ಬೆಳೆಸುತ್ತಾರೆ. ಈ ಭೇಟಿಯಲ್ಲಿ ಶಾಲಾ ಶಿಕ್ಷಕರಿಗೆ ಸ್ಥಳೀಯ ಸಂಪನ್ಮೂಲಗಳಾದ ಕಲೆ, ಸಾಹಿತ್ಯ, ಜಾನಪದ, ಸಂಗೀತ, ರಂಗಕಲೆ, ದೃಶ್ಯ ಕಲೆ, ಮುಂತಾದ ಕಲಾ ಆಯಾಮಗಳನ್ನು ಕಲಿಕೆಯೊಂದಿಗೆ ಸಂಯೋಜಿಸುವ ಆಲೋಚನೆಗಳನ್ನು ಪ್ರೋತ್ಸಾಹಿಸಲಾಗುತ್ತದೆ. ಸ್ಥಳೀಯ ಸಮುದಾಯಗಳನ್ನು ಶಾಲೆಯ ಭಾಗಿದಾರರನ್ನಾಗಿ ಮಾಡುವ ಮೂಲಕ ಕಲಿಕೆಯನ್ನು ಇನ್ನಷ್ಟು ಬಲಗೊಳಿಸುವ ಸಾಧ್ಯತೆ ಕುರಿತು ಚರ್ಚಿಸಲಾಗುತ್ತದೆ. ಮಕ್ಕಳಿಗೆ ವಿವಿಧ ಕಲಾ ಪ್ರಕಾರಗಳನ್ನು ಪರಿಚಯ ಮಾಡುವ ಮೂಲಕ ಕಲಾ ಶಿಕ್ಷಣದ ಅಭಿರುಚಿಯನ್ನು ಬೆಳೆಸುವ ಒಂದು ವಿನೂತನ ಪ್ರಯತ್ನವಿದು.





ಸ್ಥಳೀಯ ವಿಚಾರಗಳನ್ನು ಶಾಲಾ ಶಿಕ್ಷಣದೊಂದಿಗೆ ಸಂಯೋಜನೆಗೊಳಿಸುವ ಸಾಧ್ಯತೆಗಳ ಕುರಿತು ಕಳೆದ ಎರಡು ವರ್ಷಗಳ ಕಲಾಯಾತ್ರೆಗಳಲ್ಲಿ ಜಾನಪದ, ದೃಶ್ಯಕಲೆ, ಸಾಹಿತ್ಯ ಮತ್ತು ರಂಗಕಲೆಗೆ ಹೆಚ್ಚು ಪ್ರಾಮುಖ್ಯತೆ ನೀಡಲಾಗಿದ್ದು, ಇದರ ಫಲಿತಾಂಶವಾಗಿ ಶಾಲಾ ವ್ಯವಸ್ಥೆಯಲ್ಲಿ ಮತ್ತು ಕಲಾತ್ಮಕ ಕಾರ್ಯಕ್ಷೇತ್ರಗಳಲ್ಲಿ ಹೆಚ್ಚಿನ ಚರ್ಚೆಗಳು ನಡೆದವು. ಈ ನಿಟ್ಟಿನಲ್ಲಿ ವಿಜಯನಗರ ಮತ್ತು ಬಾಗಲಕೋಟೆಯಲ್ಲಿ ನಡೆದ ಕಲಾಯಾತ್ರೆಗಳಿಗೆ ಶಾಲೆಗಳಿಂದ ಹೆಚ್ಚಿನ ಪ್ರತಿಕ್ರಿಯೆ ಬಂದಿದ್ದೂ, ಮಧುಗಿರಿ ಮತ್ತು ಹಾಸನ ಜಿಲ್ಲೆಗಳ ಶಾಲೆಗಳು ನಿಧಾನಗತಿಯಲ್ಲಿ ಈ ಆಲೋಚನೆಗಳಿಗೆ ತಮ್ಮನ್ನು ತಾವು ತೆರೆದಿಡುವ ಪ್ರಯತ್ನ ಮಾಡಿದ್ದಾರೆ. ಈ ಕಾರ್ಯಕ್ಷೇತ್ರ ವಿಸ್ತರಣೆಯ ಕಾರ್ಯಕ್ರಮವು ಇಡೀ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲೂ ಐಎಫ್‌ಎ ಸಂಸ್ಥೆಯ ಕಲಿ ಕಲಿಸು ಯೋಜನೆಯನ್ನು ವಿಸ್ತರಿಸುವ, ಕಲಿಕೆಯಲ್ಲಿ ಕಲಾ ಸಂಯೋಜಿತ ಸಾಧ್ಯತೆಗಳನ್ನು ಹೊರ ತರುವ ಒಂದು ವಿಶೇಷ ಪ್ರಯತ್ನವಾದ ಕಲಾಯಾತ್ರೆಯಲ್ಲಿ ನಾವು ಸಾಗುತ್ತಿದ್ದೇವೆ.

ಸರ್ಕಾರಿ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ನಮಗೆ ಹತ್ತಿರದಿಂದ ಪರಿಚಯಿಸುವ ಜೊತೆಗೆ ಈ ಕಳೆದ ಎರಡು ವರ್ಷಗಳ ಕಲಾಯಾತ್ರೆಗಳು ಮಕ್ಕಳಲ್ಲಿನ ಕಲಿಕಾ ಸಾಮರ್ಥ್ಯಗಳನ್ನು ಪರಿಚಯಿಸಿವೆ.





# ಐಎಫ್ಎ ಸಮಾವೇಶಗಳು

ಈ ಕಲ್ಯಾಣ ಕರ್ನಾಟಕ ಎಂಬುದು ಸಮುದಾಯಗಳ ಜ್ಞಾನವಾಹಿನಿಗಳ ಆಳವಾದ ಸಾಕ್ಷಿಯಾಗಿದೆ. ಆದರೆ ಏಕರೂಪದ ಶಿಕ್ಷಣ ನೀತಿಯು ದೇಶದ ಸ್ಥಳೀಯ ಸಂಪನ್ಮೂಲಗಳನ್ನು ನಿಧಾನವಾಗಿ ತನ್ನ ಒಡಲಿನಲ್ಲಿ ಹೇಗೆ ಸೇರಿಸಿಕೊಳ್ಳುತ್ತಾ ಹೋಗುತ್ತಿದೆಯೋ ಹಾಗೆ ಅದರಲ್ಲಿನ ಅಸ್ಮಿತೆಗಳು ಬತ್ತುತ್ತಿವೆ. ಇವು ಉಳಿಯಬೇಕೆಂದರೆ ಶಾಲಾ ಶಿಕ್ಷಣದಲ್ಲಿ ಇವುಗಳ ಕಲಾ ಸಂಯೋಜಿತ ಬೋಧನಾ ಚಟುವಟಿಕೆಗಳು ನಡೆಯಬೇಕು.

ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ – ಚೋಳಮಂಡಲಂ ಇನ್ವೆಸ್ಟ್‌ಮೆಂಟ್ ಮತ್ತು ಫೈನಾನ್ಸ್ ಕಂಪನಿಯ ಬೆಂಬಲದೊಂದಿಗೆ ಆಯೋಜಿಸಿದ 'ಬಿಂದುಗಳನ್ನು ಸೇರಿಸುವುದು – ಕಲಾ ಶಿಕ್ಷಣದ ಕಲಿಕೆಗಳು' ಎಂಬ ಮೂರು ದಿನಗಳ ಸ್ಥಾನೀಯ ಸಮ್ಮೇಳನವು ದಿನಾಂಕ 22, 23 ಮತ್ತು 24 ಫೆಬ್ರವರಿ 2023ರಂದು ಕಲಬುರಗಿಯ 'ಮಾತೋಶ್ರೀ ನೀಲಗಂಗಮ್ಮ ಅಂದಾನಿ ಆರ್ಟ್ ಗ್ಯಾಲರಿ ಐಡಿಯಲ್ ಫೈನ್ ಆರ್ಟ್ ಸೊಸೈಟಿ ಕ್ಯಾಂಪಸ್'ನಲ್ಲಿ ನಡೆಯಿತು. ಈ ಸಮ್ಮೇಳನದ ಉದ್ದೇಶಗಳು ಕಲ್ಯಾಣ ಕರ್ನಾಟಕದಲ್ಲಿ ಕಲಾ–ಸಂಯೋಜಿತ ಶಿಕ್ಷಣದ ವಿವಿಧ ಆಯಾಮಗಳನ್ನು ಅನಾವರಣಗೊಳಿಸುವುದು ಮತ್ತು ಪರಿಣಾಮಗಳನ್ನು ಅರ್ಥಮಾಡಿಕೊಳ್ಳುವುದಾಗಿತ್ತು.

ಈ ಕಲ್ಪನೆಯ ಮುಂದುವರಿಕೆಯಾಗಿ ದಿನಾಂಕ 23, 24 ಮತ್ತು 25 ಫೆಬ್ರವರಿ 2024ರಂದು ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ತೊಡಗಿಸಿಕೊಳ್ಳುವ ಉದ್ದೇಶದಿಂದ 'ಉದಕ–ಕಲಾಶಿಕ್ಷಣದಿಂದ ಕಲಿಕೆಗಳು' ಎಂಬ ಶೀರ್ಷಿಕೆಯೊಂದಿಗೆ ಮಂಗಳೂರಿನ 'ಸಹೋದಯ ಕೇಂದ್ರ'ದಲ್ಲಿ ಮೂರು ದಿನಗಳ ಕಲಾ ಸಮ್ಮೇಳನವನ್ನು ಆಯೋಜಿಸಲಾಯಿತು. 'ಉದಕ' ಎಂಬುದು ಉಡುಪಿ, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಎಂಬ ಮೂರು ಜಿಲ್ಲೆಗಳ ಮೊದಲ ಅಕ್ಷರದ ಸಂಕ್ಷಿಪ್ತ ರೂಪವಾಗಿದ್ದು, 'ನೀರು' ಎಂಬ ರೂಪಕಾರ್ಥವನ್ನು ಹೊಂದಿತ್ತು. ಏಕೆಂದರೆ, ಈ ಮೂರು ಜಿಲ್ಲೆಗಳು ಅರಬ್ಬೀ ಸಮುದ್ರದ ತೀರದಲ್ಲಿದ್ದು, ಸಮುದ್ರ ತೀರವನ್ನು ತನ್ನ





ಸಾಂಸ್ಕೃತಿಕ ಬದುಕಿನ ಒಂದು ಭಾಗವಾಗಿ ಅನುಸರಿಸುತ್ತ ಬಂದಿವೆ. ಈ ಸಮ್ಮೇಳನವು ಕಲಾ ಸಂಯೋಜಿತ ಅಧ್ಯಯನದ ತತ್ವಗಳನ್ನು ವಿಸ್ತರಿಸುವುದು ಮತ್ತು ವಿಷಯ ಜ್ಞಾನವನ್ನು ನಿರ್ಮಿಸುವುದನ್ನು ಪ್ರಧಾನ ಉದ್ದೇಶವನ್ನಾಗಿ ಇಟ್ಟುಕೊಂಡಿದ್ದಲ್ಲದೇ, ಕಲಾ ಶಿಕ್ಷಣ ಅಥವಾ ಕಲಾ ಸಂಯೋಜಿತ ಅಧ್ಯಯನದ ಕ್ಷೇತ್ರದಲ್ಲಿ ಅಂತರಶಾಸ್ತ್ರೀಯ ಚರ್ಚೆಗಳಿಗೆ ವೇದಿಕೆಯನ್ನು ಒದಗಿಸುವುದು, ಕಲಾ ಶಿಕ್ಷಣದ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಬೋಧನಾ ಕ್ರಮಗಳನ್ನು ಪ್ರೋತ್ಸಾಹಿಸುವುದು ಸಹ ಗುರಿಯಾಗಿತ್ತು.

2025ರ ಫೆಬ್ರವರಿ 21ರಿಂದ 23ರವರೆಗೆ ಹೈದರಾಬಾದ್‌ನಲ್ಲಿ ನಡೆದ ದಕ್ಷಿಣ ಭಾರತ ಮಟ್ಟದ ಕಲಾ ಶಿಕ್ಷಣ ಸಮ್ಮೇಳನವು ಕಲಾ ಶಿಕ್ಷಣದ ಸ್ಥಿರತೆ, ಕಲಾ ಶಿಕ್ಷಣದ ಮೇಲೆ ಪರಿಣಾಮ ಬೀರುವ ನೀತಿಗಳು, ಮತ್ತು ನಮ್ಮ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರದಲ್ಲಿ ಸಂಯೋಜಿತ ಕಲಾ ಶಿಕ್ಷಣದ ಪಾತ್ರ ಎಂಬ ಮೂರು ಪ್ರಮುಖ ವಿಷಯಗಳ ಸುತ್ತಲಿನ ಪ್ರಶ್ನೆಗಳನ್ನು ಅನ್ವೇಷಿಸಲು ಉದ್ದೇಶಿಸಲಾಗಿತ್ತು. ಹಾಗೆಂದೇ ಚರ್ಚೆಗಳ ಮೂಲಕ ಕಲಾ ಶಿಕ್ಷಣದ ಸ್ಥಿರತೆಯನ್ನು ಕುರಿತು ಆಳವಾದ ಚಿಂತನೆ, ನವೀನ ವಿಧಾನಗಳನ್ನು ಅನ್ವೇಷಿಸುವುದು, ಪ್ರಸ್ತುತ ಸವಾಲುಗಳನ್ನು ಗುರುತಿಸುವುದು ಮತ್ತು ಭವಿಷ್ಯದ ಬೆಳವಣಿಗೆಗೆ ಅವಕಾಶಗಳನ್ನು ತೋರಿಸುವುದು ಮುಖ್ಯ ಉದ್ದೇಶವಾಗಿತ್ತು. ಕಲೆ ಎಂಬುದು ಸಮಾಜದ ರಚನೆ, ಮಾನವ ಸಂಬಂಧಗಳು ಮತ್ತು ಸಂಸ್ಕೃತಿಯ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ಸಹ ವಿಸ್ತಾರವಾಗಿ ವಿಶ್ಲೇಷಿಸಲಾಯಿತು.

ಕಲಾ ಶಿಕ್ಷಣವು ಕೇವಲ ಕೌಶಲ್ಯ ಮತ್ತು ಜ್ಞಾನ ನೀಡುವ ಸಾಧನವಲ್ಲ, ಅದು ಸಹಾನುಭೂತಿ, ಸಾಮಾಜಿಕ ಜಾಗೃತಿ ಮತ್ತು ಸಂಸ್ಕೃತಿಯ ಅರಿವನ್ನು ಬೆಳೆಸುವ ಶಕ್ತಿಶಾಲಿ ಸಾಧನವಾಗಿದೆ ಎಂಬುದನ್ನು ಈ ಚರ್ಚೆಗಳು ಸ್ಪಷ್ಟಪಡಿಸಿದವು. ಈ ಕಾರ್ಯಕ್ರಮದಲ್ಲಿ ನೇರ ಹಾಗೂ ಪರಸ್ಪರ ಕ್ರಿಯಾತ್ಮಕ ಕಲಾ ಪ್ರದರ್ಶನಗಳನ್ನು ಆಯೋಜಿಸಲಾಗಿತ್ತು. ಇವು ಕಲಾತ್ಮಕ ಅಭಿವ್ಯಕ್ತಿಯ ಸೌಂದರ್ಯವನ್ನು ಆಚರಿಸುವುದರ ಜೊತೆಗೆ ಶಿಕ್ಷಣದಲ್ಲಿ ಕಲಾ ಸಂಯೋಜನೆಯ ಪರಿವರ್ತನಾತ್ಮಕ ಶಕ್ತಿಯನ್ನು ತೋರಿಸಿತು. ಈ ಅವಧಿಗಳಲ್ಲಿ ಶಿಕ್ಷಕರು, ಕಲಾವಿದರು ಮತ್ತು ಯೋಜನಾ ಸಂಯೋಜಕರು ತಮ್ಮ ಕಲಾ ಸಂಯೋಜಿತ ಯೋಜನೆಗಳನ್ನು ಪ್ರದರ್ಶಿಸಿ, ತಮ್ಮ ಅನುಭವಗಳನ್ನು ಹಂಚಿಕೊಂಡು, ಸಮುದಾಯದೊಂದಿಗೆ ತೊಡಗಿಸಿಕೊಂಡಿದ್ದರು. ಸಹಕಾರ ಮತ್ತು ಕಥನದ ಮೂಲಕ, ಈ ಕಾರ್ಯಕ್ರಮವು ಶಿಕ್ಷಕರು ಮತ್ತು ಕಲಾವಿದರ ನಡುವೆ ಜೀವಂತ ಜಾಲವನ್ನು ನಿರ್ಮಿಸಿತು, ಮತ್ತು ಸೃಜನಶೀಲತೆಯನ್ನು ಬೋಧನೆ ಮತ್ತು ಅಧ್ಯಯನದ ಮೂಲಭೂತ ಅಂಶವಾಗಿ ಅಳವಡಿಸಿದಾಗ ಉಂಟಾಗುವ ಅನಂತ ಸಾಧ್ಯತೆಗಳನ್ನು ಪ್ರತಿಪಾದಿಸಿತು.

## ಕರ್ನಾಟಕದ ಸರ್ಕಾರಿ ಶಾಲೆಗಳ ಶಿಕ್ಷಕ/ ಶಿಕ್ಷಕಿಯರಿಂದ ಕಲಾ ಸಂಯೋಜಿತ ಯೋಜನಾ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ

ಕಲಿ ಕಲಿಸು ಅನ್ನುವುದು ಪಠ್ಯಬೋಧನಾ ಕಾರ್ಯದಲ್ಲಿ ಶಿಕ್ಷಕರು ಕಲಾ ಮಾಧ್ಯಮವನ್ನು ಅಳವಡಿಸಿಕೊಳ್ಳುವುದರ ಜೊತೆಯಲ್ಲೇ ವಿದ್ಯಾರ್ಥಿಗಳಲ್ಲಿ ಕಲಿಕೆ ಎಂಬುದನ್ನು ನಿರಂತರ ಕ್ರಿಯೆಯಾನ್ನಾಗಿಸುವ ಪ್ರಯತ್ನ. ಕತೆ, ಹಾಡು, ನಾಟಕ, ಚಿತ್ರಕಲೆ ಮತ್ತು ಯಾವುದೇ ಸ್ಥಳೀಯ ಕಲಾಪ್ರಕಾರಗಳ ಮುಖಾಂತರ ಶಾಲಾ ಕೊಠಡಿಯನ್ನು ದಾಟಿ ಹೊರಜಗತ್ತಿನೊಂದಿಗೆ ವಿಶೇಷವಾದ ಸಂಬಂಧವೊಂದನ್ನು ಗಟ್ಟಿಯಾಗಿ ಕಟ್ಟಿಕೊಡುವ ಸೃಜನಶೀಲ ನಡೆ ಹಾಗು ಪಠ್ಯಕ್ರಮಗಳ ಸಂಯೋಜಿತ ಪ್ರಯತ್ನಗಳಿಂದ ವಿದ್ಯಾರ್ಥಿ ಕೇಂದ್ರೀಕೃತ ಕಲಿಕಾ ವ್ಯವಸ್ಥೆಯನ್ನು ತರುವ ಆಸೆ.

ಮೇಲಿನ ಉದ್ದೇಶಗಳನ್ನು ಆಧರಿಸಿ, ಐಎಫ್‌ಎಯು ಯೋಜನೆಯ ಪ್ರಸ್ತಾವನೆಗಳನ್ನು ಕೋರುತ್ತಿದೆ. ಶಾಲಾ ಪಠ್ಯಕ್ರಮಗಳಿಗೆ ಪೂರಕವಾಗಿ ಕಾರ್ಯಗೊಳ್ಳುವ ಈ ಯೋಜನೆಗಳು ಕಲಾ ಸಂಯೋಜಿತ ಬೋಧನಾಕ್ರಮಗಳಿಗೆ ಭದ್ರವಾದ ಬುನಾದಿಯನ್ನು ನಿರ್ಮಿಸಿಕೊಡಬೇಕು. ವಿದ್ಯಾರ್ಥಿಗಳ ಸೃಜನಶೀಲತೆ ಮತ್ತು ಸಂಶೋಧನಾ ಗುಣವನ್ನು ಪ್ರೋತ್ಸಾಹಿಸುವ ಕಲಾ ಸಂಯೋಜಿತ ಕಾರ್ಯಯೋಜನೆಗಳನ್ನು ತಮ್ಮ ಪ್ರಸ್ತಾವನೆಯಲ್ಲಿ ಸ್ಪಷ್ಟವಾಗಿ ತಿಳಿಸುವುದು ಅಪೇಕ್ಷಣೀಯ. ಕಲಿ ಕಲಿಸು NEP 2020 (National Education Policy)ರ ಉದ್ದೇಶಗಳನ್ನು ಸಹ ಆಧರಿಸಿರುತ್ತದೆ.

### ಯೋಜನೆಗಳ ಪ್ರಸ್ತಾವನೆಗಳನ್ನು ಯಾರು ಸಲ್ಲಿಸಬಹುದು

ಕಲಾ ಶಿಕ್ಷಣದಲ್ಲಿ ಪೂರ್ವ ಅನುಭವ ಅಥವಾ ಸಂಬಂಧಿತ ತರಬೇತಿ ಹೊಂದಿರುವ ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕರು, ಮತ್ತು ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳು.

### ಯೋಜನೆಯ ವ್ಯಾಪ್ತಿ

ಕಾರ್ಯಗತಗೊಳಿಸಲು ಬಯಸುವ ಯೋಜನೆಗಳು ಕೆಳಕಂಡ ಯಾವುದಾದರು ಅಂಶಗಳನ್ನು ಸ್ಪಷ್ಟವಾಗಿ ಒಳಗೊಂಡಿರಬೇಕು.

* ಯೋಜನೆಯ ಪರಿಧಿಯಲ್ಲಿ ಪೋಷಕರು, ವಿದ್ಯಾರ್ಥಿಗಳು, ಶಿಕ್ಷಕರು, ಕಲಾಸೇವೆಯಲ್ಲಿ ತೊಡಗಿರುವವರು ಹೀಗೆ ಇನ್ನೂ ಹಲವು ಪಾಲುದಾರು ಭಾಗವಹಿಸುವಂತಿರಬೇಕು.
* ತರಗತಿಯ ಬೋಧನಾ ಕ್ರಮಗಳಲ್ಲಿ ಸ್ಥಳೀಯ ಸಂಪನ್ಮೂಲಗಳನ್ನು ಅಥವಾ ಕಲಾ ಪ್ರಕಾರಗಳನ್ನು ಅಳವಡಿಸಿಕೊಳ್ಳುವ ಪ್ರಯತ್ನಗಳಾಗಿರಬೇಕು.
* ಯೋಜನೆಯು, ವಿದ್ಯಾರ್ಥಿ ಕೇಂದ್ರಿತ ಕಲಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರಂಗಕಲೆ, ಸಂಗೀತ, ಜಾನಪದ, ದೃಶ್ಯಕಲೆ, ಛಾಯಾಚಿತ್ರ ಕಲೆ, ಚಲನಚಿತ್ರ, ಸಾಹಿತ್ಯ ಕಲೆಯಲ್ಲದೆ ಯಾವುದಾದರೂ ಒಂದು ಕಲೆಯನ್ನು ವಿಶೇಷವಾಗಿ ಅಭ್ಯಸಿಸುವಂಥದ್ದಾಗಿರಬೇಕು.
* ಯೋಜನೆಯು ಸಾಮಾಜಿಕ ನ್ಯಾಯ ಮತ್ತು ಪರಿಸರ ಸಂಬಂಧಿ ಅರಿವು ಮೂಡಿಸಲು ಶಾಲಾ ಸಮುದಾಯವನ್ನು ಪ್ರೇರೇಪಿಸುವಲ್ಲಿ ಸಹಕಾರಿಯಾಗಬೇಕು.

ಇದಲ್ಲದೆ ಇನ್ನಿತರ ಅಲ್ಪಾವಧಿ ಅಥವಾ ದೀರ್ಘಾವಧಿಯ ನೂತನ ಮತ್ತು ಸೃಜನಶೀಲ ಕಲಾಶಿಕ್ಷಣ ಯೋಜನೆಗಳನ್ನು ಸಹ ಪರಿಗಣಿಸಲಾಗುವುದು.

**ಯೋಜನಾ ಪ್ರಸ್ತಾವನೆ ಸಲ್ಲಿಸುವ ವಿಧಾನ:**

* ಯೋಜನೆಯನ್ನು ಕನ್ನಡ, ಉರ್ದು, ಹಿಂದಿ, ಮರಾಠಿ, ತೆಲುಗು ಹಾಗು ಇಂಗ್ಲಿಷ್ ಭಾಷೆಯಲ್ಲಿ ಬರೆಯಬಹುದು.

* ಯೋಜನೆಯು ಒಂದು ವರ್ಷದ ಕಾಲಾವಧಿಯನ್ನು ಹೊಂದಿರಬೇಕು.

* ಯೋಜನೆಗೆ ಸಂಬಂಧಪಟ್ಟ ಪ್ರಶ್ನೆಗಳಿದ್ದಲ್ಲಿ, ನಿಮ್ಮ ಹೊಳಹುಗಳ ಬಗ್ಗೆ ಚರ್ಚಿಸಲು ಬಯಸಿದಲ್ಲಿ ಅಥವಾ ನಿಮ್ಮ ಕರಡು ಪ್ರಸ್ತಾವನೆಯನ್ನು ನಮಗೆ ಕಳುಹಿಸಬಯಸಿದಲ್ಲಿ, ನಮ್ಮನ್ನು ಸಂಪರ್ಕಿಸಿ. ನಿಮ್ಮ ಅಂತಿಮ ಪ್ರಸ್ತಾವನೆಯು ಇಮೇಲ್ ಮೂಲಕ ನಮಗೆ ಸೇರಬೇಕು.

* ಕೊನೆಯ ಸುತ್ತಿಗೆ ಆಯ್ಕೆಯಾದ ಪ್ರಸ್ತಾವನೆಗಳನ್ನು ಬಾಹ್ಯ ತಜ್ಞರ ಆಯ್ಕೆ ಸಮಿತಿ ಮೌಲ್ಯಮಾಪನ ಮಾಡುತ್ತದೆ. ಇದಕ್ಕಾಗಿ ಅರ್ಜಿದಾರರು ತಮ್ಮ ಯೋಜನೆಯ ಪರಿಕಲ್ಪನೆಯನ್ನು ಈ ಸಮಿತಿಯ ಮುಂದೆ ಪ್ರತಿಪಾದಿಸಬೇಕಾಗುತ್ತದೆ.

*ಒಂದು ತಿಂಗಳ ಅವಧಿಯಲ್ಲಿ ಆಯ್ಕೆಯಾದ ಯೋಜನೆಗಳ ಪಟ್ಟಿಯನ್ನು ನಿರೀಕ್ಷಿಸಬಹುದು.

**ನಿಮ್ಮ ಅಂತಿಮ ಪ್ರಸ್ತಾವನೆಯು ಈ ಕೆಳಕಂಡ ಕನಿಷ್ಠ ವಿಷಯಗಳ ವಿವರಗಳನ್ನು ಒಳಗೊಂಡಿರಬೇಕು.**

* ಯೋಜನೆಯನ್ನು ಕೈಗೊಳ್ಳಲು ವಿನಂತಿ ಪತ್ರ.
* ನಿಮ್ಮ ವೈಯಕ್ತಿಕ ಪರಿಚಯ.
* ವೈಯಕ್ತಿಕ ಹಿನ್ನೆಲೆ, ವಿದ್ಯಾರ್ಥಿಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯ ಜೊತೆಗೆ ಶಾಲೆಯ ಹೆಸರು, ವಿಳಾಸ, ಸಹಶಿಕ್ಷಕರ ಸಾಮರ್ಥ್ಯಗಳ ವಿವರಗಳು
* ಶಾಲೆಯ ಪ್ರಸ್ತುತ ಕಲಾ ಶಿಕ್ಷಣ ಚಟುವಟಿಕೆಗಳು ಯಾವುದಾದರೂ ಇದ್ದರೆ ಅವುಗಳ ಸಂಕ್ಷಿಪ್ತ ಮಾಹಿತಿ
* ಯೋಜನೆಯ ಉದ್ದೇಶಗಳು.
* ಕಾರ್ಯ ಯೋಜನೆಗಳ ವಿವರ.
* ಯೋಜನೆಯಲ್ಲಿ ಶಾಲೆಯ ಸಹೋದ್ಯೋಗಿಗಳ ಪಾತ್ರ.
* ಯೋಜನಾವಧಿಯಲ್ಲಿ ಭಾಗವಹಿಸುವ ಸಂಪನ್ಮೂಲ ವ್ಯಕ್ತಿಗಳ ವಿವರ.
* ಯೋಜನೆಯಿಂದ ಬರಬಹುದಾದ ಅಪೇಕ್ಷಿತ ಫಲಿತಾಂಶಗಳು.
* ಖರ್ಚು– ವೆಚ್ಚಗಳ ವಿವರ.

**ಬಜೆಟ್:**

* ಗರಿಷ್ಠ ರೂ. 1,00,000/– ವರೆಗೆ.
* ಪ್ರಸ್ತಾವನೆಯನ್ನು ಸಲ್ಲಿಸುವವರು ಗರಿಷ್ಠ ರೂ.35,000/–ವರೆಗೆ ಸ್ವಯಂ ಗೌರವಧನವನ್ನಾಗಿ ಪರಿಗಣಿಸಬಹುದು.

**ಪ್ರಸ್ತಾವನೆಯ ಸಲ್ಲಿಕೆ:**

ನಿಮ್ಮ ಅಂತಿಮ ಪ್ರಸ್ತಾವನೆಯು 25 MBಯ ಒಳಗಿದ್ದು, ಇಮೇಲ್ ಮೂಲಕ Contactus@indiaifa.org ಕಳುಹಿಸಿಕೊಡಿ. ನಿಮ್ಮ ಇಮೇಲ್ ವಿಷಯ ಇಂತಿರಲಿ: 'ಕಲಾ ಶಿಕ್ಷಣದಡಿ ಯೋಜನೆಯ ಪ್ರಸ್ತಾವನೆ (ಶಿಕ್ಷಕ/ ಶಿಕ್ಷಕಿಯರು).

ಅಪೂರ್ಣ ಪ್ರಸ್ತಾವನೆಗಳು ಮತ್ತು ಅರ್ಹತಾ ಮಾನದಂಡಗಳ ಪಟ್ಟಿಯಲ್ಲಿ ಸೇರದ ಅರ್ಜಿದಾರರನ್ನು ಪರಿಗಣಿಸಲಾಗುವುದಿಲ್ಲ. ಎಲ್ಲಾ ಆಯ್ಕೆಯಾದ ಯೋಜನೆಗಳನ್ನು ಐಎಫ್‌ಎ ಸಂಸ್ಥೆ ಕಾರ್ಯಗತಗೊಳಿಸುತ್ತದೆ.ಮಕ್ಕಳ ಗೌರವ ಹಾಗು ಯೋಗಕ್ಷೇಮವನ್ನು ಕಾಪಾಡುವುದರ ಜೊತೆಗೆ ಅವರಿಗೆ ಸುಭದ್ರ ವಾತಾವರಣವನ್ನು ನಿರ್ಮಿಸಿಕೊಡುವುದಕ್ಕೆ ಐಎಫ್‌ಎ ಬದ್ಧವಾಗಿರುತ್ತದೆ. ಪ್ರಸ್ತಾವನೆಯನ್ನು ಸಲ್ಲಿಸುವವರು ಇದನ್ನು ಪಾಲಿಸಬೇಕು ಮತ್ತು ಎಲ್ಲಾ ಸಮಯದಲ್ಲೂ ಅನುಸರಿಸಬೇಕು.

## ಕರ್ನಾಟಕದ ಸರ್ಕಾರಿ ಶಾಲೆಗಳಲ್ಲಿ ಕಲಾ ಸಂಯೋಜಿತ ಯೋಜನೆಗಳನ್ನು ನಡೆಸಲು ಕಲಾವಿದರಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ

ಕಲಿ ಕಲಿಸು ಅನ್ನುವುದು ಪಠ್ಯಬೋಧನಾ ಕಾರ್ಯದಲ್ಲಿ ಕಲಾವಿದರು ಕಲಾ ಮಾಧ್ಯಮವನ್ನು ಅಳವಡಿಸಿಕೊಳ್ಳುವುದರ ಜೊತೆಯಲ್ಲೇ ವಿದ್ಯಾರ್ಥಿಗಳಲ್ಲಿ ಕಲಿಕೆ ಎಂಬುದನ್ನು ನಿರಂತರ ಕ್ರಿಯೆಯಾನ್ನಾಗಿಸುವ ಪ್ರಯತ್ನ. ಕತೆ, ಹಾಡು, ನಾಟಕ, ಚಿತ್ರಕಲೆ ಮತ್ತು ಯಾವುದೇ ಸ್ಥಳೀಯ ಕಲಾಪ್ರಕಾರಗಳ ಮುಖಾಂತರ ಶಾಲಾ ಕೊಠಡಿಯನ್ನು ದಾಟಿ ಹೊರಜಗತ್ತಿನೊಂದಿಗೆ ವಿಶೇಷವಾದ ಸಂಬಂಧವೊಂದನ್ನು ಗಟ್ಟಿಯಾಗಿ ಕಟ್ಟಿಕೊಡುವ ಸೃಜನಶೀಲ ನಡೆ ಹಾಗು ಪಠ್ಯಕ್ರಮಗಳ ಸಂಯೋಜಿತ ಪ್ರಯತ್ನಗಳಿಂದ ವಿದ್ಯಾರ್ಥಿ ಕೇಂದ್ರೀಕೃತ ಕಲಿಕಾ ವ್ಯವಸ್ಥೆಯನ್ನು ತರುವ ಆಸೆ.

ಮೇಲಿನ ಉದ್ದೇಶಗಳನ್ನು ಆಧರಿಸಿ, ಐಎಫ್ಎಯು ಯೋಜನೆಯ ಪ್ರಸ್ತಾವನೆಗಳನ್ನು ಕೋರುತ್ತಿದೆ. ಶಾಲಾ ಪಠ್ಯಕ್ರಮಗಳಿಗೆ ಪೂರಕವಾಗಿ ಕಾರ್ಯಗೊಳ್ಳುವ ಈ ಯೋಜನೆಗಳು ಕಲಾ ಸಂಯೋಜಿತ ಬೋಧನಾಕ್ರಮಗಳಿಗೆ ಭದ್ರವಾದ ಬುನಾದಿಯನ್ನು ನಿರ್ಮಿಸಿಕೊಡಬೇಕು. ವಿದ್ಯಾರ್ಥಿಗಳ ಸೃಜನಶೀಲತೆ ಮತ್ತು ಸಂಶೋಧನಾ ಗುಣವನ್ನು ಪ್ರೋತ್ಸಾಹಿಸುವ ಕಲಾ ಸಂಯೋಜಿತ ಕಾರ್ಯಯೋಜನೆಗಳನ್ನು ತಮ್ಮ ಪ್ರಸ್ತಾವನೆಯಲ್ಲಿ ಸ್ಪಷ್ಟವಾಗಿ ತಿಳಿಸುವುದು ಅಪೇಕ್ಷಣೀಯ. ಕಲಿ ಕಲಿಸು NEP 2020 (National Education Policy)ರ ಉದ್ದೇಶಗಳನ್ನು ಸಹ ಆಧರಿಸಿರುತ್ತದೆ.

**ಯೋಜನೆಗಳ ಪ್ರಸ್ತಾವನೆಗಳನ್ನು ಯಾರು ಸಲ್ಲಿಸಬಹುದು ?**

* ಕಲಾ ಶಿಕ್ಷಣದಲ್ಲಿ ಪೂರ್ವಾನುಭವ ಇರುವ ಕಲಾವಿದರು ಅಥವಾ ಕಲಾಶಿಕ್ಷಣದಲ್ಲಿ ಸೂಕ್ತವಾದ ತರಬೇತಿ ಪಡೆದವರು ಪ್ರಸ್ತಾವನೆಗಳನ್ನು ಸಲ್ಲಿಸಬಹುದು.
* ಸ್ಥಳೀಯ ಭಾಷೆಯನ್ನು ಬಲ್ಲವರಾಗಿರಬೇಕು.
* ಭಾರತೀಯ ಪ್ರಜೆಗಳಾಗಿರಬೇಕು.

**ಯೋಜನೆಯ ವ್ಯಾಪ್ತಿ**

ಕಾರ್ಯಗತಗೊಳಿಸಲು ಬಯಸುವ ಯೋಜನೆಗಳು ಕೆಳಕಂಡ ಯಾವುದಾದರು ಅಂಶಗಳನ್ನು ಸ್ಪಷ್ಟವಾಗಿ ಒಳಗೊಂಡಿರಬೇಕು.

* ಯೋಜನೆಯ ಪರಿಧಿಯಲ್ಲಿ ಪೋಷಕರು, ವಿದ್ಯಾರ್ಥಿಗಳು, ಶಿಕ್ಷಕರು, ಕಲಾಸೇವೆಯಲ್ಲಿ ತೊಡಗಿರುವವರು ಹೀಗೆ ಇನ್ನೂ ಹಲವು ಪಾಲುದಾರರು ಭಾಗವಹಿಸುವಂತಿರಬೇಕು.
* ತರಗತಿಯ ಬೋಧನಾ ಕ್ರಮಗಳಲ್ಲಿ ಸ್ಥಳೀಯ ಸಂಪನ್ಮೂಲಗಳನ್ನು ಅಥವಾ ಕಲಾ ಪ್ರಕಾರಗಳನ್ನು ಅಳವಡಿಸಿಕೊಳ್ಳುವ ಪ್ರಯತ್ನಗಳಾಗಿರಬೇಕು.
* ಯೋಜನೆಯು, ವಿದ್ಯಾರ್ಥಿ ಕೇಂದ್ರಿತ ಕಲಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರಂಗಕಲೆ, ಸಂಗೀತ, ಜಾನಪದ, ದೃಶ್ಯಕಲೆ, ಛಾಯಾಚಿತ್ರ ಕಲೆ, ಚಲನಚಿತ್ರ, ಸಾಹಿತ್ಯ ಕಲೆಯಲ್ಲದೆ ಯಾವುದಾದರೂ ಒಂದು ಕಲೆಯನ್ನು ವಿಶೇಷವಾಗಿ ಅಭ್ಯಸಿಸುವಂಥದ್ದಾಗಿರಬೇಕು.
* ಯೋಜನೆಯು ಸಾಮಾಜಿಕ ನ್ಯಾಯ ಮತ್ತು ಪರಿಸರ ಸಂಬಂಧಿ ಅರಿವು ಮೂಡಿಸಲು ಶಾಲಾ ಸಮುದಾಯವನ್ನು ಪ್ರೇರೇಪಿಸುವಲ್ಲಿ ಸಹಕಾರಿಯಾಗಬೇಕು.

ಇದಲ್ಲದೆ ಇನ್ನಿತರ ಅಲ್ಪಾವಧಿ ಅಥವಾ ದೀರ್ಘಾವಧಿಯ ನೂತನ ಮತ್ತು ಸೃಜನಶೀಲ ಕಲಾ ಶಿಕ್ಷಣ ಯೋಜನೆಗಳನ್ನು ಸಹ ಪರಿಗಣಿಸಲಾಗುವುದು.

**ಯೋಜನಾ ಪ್ರಸ್ತಾವನೆ ಸಲ್ಲಿಸುವ ವಿಧಾನ:**

* ನಿಮ್ಮ ಯೋಜನೆಯನ್ನು ಕನ್ನಡ, ಉರ್ದು, ಹಿಂದಿ, ಮರಾಠಿ, ತೆಲುಗು ಹಾಗು ಇಂಗ್ಲಿಷ್ ಭಾಷೆಯಲ್ಲಿ ಬರೆಯಬಹುದು.
* ಯೋಜನೆಯು ಒಂದು ವರ್ಷದ ಕಾಲಾವಧಿಯನ್ನು ಹೊಂದಿರಬೇಕು.
* ಯೋಜನೆಗೆ ಸಂಬಂಧಪಟ್ಟ ಪ್ರಶ್ನೆಗಳಿದ್ದಲ್ಲಿ, ನಿಮ್ಮ ಹೊಳಹುಗಳ ಬಗ್ಗೆ ಚರ್ಚಿಸಬಯಸಿದಲ್ಲಿ ಅಥವಾ ನಿಮ್ಮ ಕರಡು ಪ್ರಸ್ತಾವನೆಯನ್ನು ನಮಗೆ ಕಳುಹಿಸಬಯಸಿದಲ್ಲಿ ನಮ್ಮನ್ನು ಸಂಪರ್ಕಿಸಿ.
* ನಿಮ್ಮ ಅಂತಿಮ ಪ್ರಸ್ತಾವನೆಯು ಇಮೇಲ್ ಮೂಲಕ ನಮಗೆ ಸೇರಬೇಕು.
* ಕೊನೆಯ ಸುತ್ತಿಗೆ ಆಯ್ಕೆಯಾದ ಪ್ರಸ್ತಾವನೆಗಳನ್ನು ಬಾಹ್ಯತಜ್ಞರ ಆಯ್ಕೆ ಸಮಿತಿ ಮೌಲ್ಯಮಾಪನ ಮಾಡುತ್ತದೆ. ಇದಕ್ಕಾಗಿ ಅರ್ಜಿದಾರರು ತಮ್ಮ ಯೋಜನೆಯ ಪರಿಕಲ್ಪನೆಯನ್ನು ಈ ಸಮಿತಿಯ ಮುಂದೆ ಪ್ರತಿಪಾದಿಸಬೇಕಾಗುತ್ತದೆ.
* ಒಂದು ತಿಂಗಳ ಅವಧಿಯಲ್ಲಿ ಆಯ್ಕೆಯಾದ ಯೋಜನೆಗಳ ಪಟ್ಟಿಯನ್ನು ನಿರೀಕ್ಷಿಸಬಹುದು.

**ನಿಮ್ಮ ಅಂತಿಮ ಪ್ರಸ್ತಾವನೆಯು ಈ ಕೆಳಕಂಡ ಕನಿಷ್ಠ ವಿಷಯಗಳ ವಿವರಗಳನ್ನು ಒಳಗೊಂಡಿರಬೇಕು.**

* ಯೋಜನೆಯನ್ನು ಕೈಗೊಳ್ಳಲು ವಿನಂತಿ ಪತ್ರ
* ನಿಮ್ಮ ವೈಯಕ್ತಿಕ ಪರಿಚಯದ ಜೊತೆಗೆ ಮಕ್ಕಳೊಂದಿಗೆ ಕೆಲಸ ಮಾಡಿದ ನಿಮ್ಮ ಅನುಭವ.
* ನೀವು ಆಯ್ಕೆ ಮಾಡಿಕೊಂಡ ಶಾಲೆಯ ವಿದ್ಯಾರ್ಥಿಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯ ಜೊತೆಗೆ ಶಾಲೆಯ ಹೆಸರು, ವಿಳಾಸ, ಹಿನ್ನೆಲೆ, ಸಹಶಿಕ್ಷಕರ ಸಾಮರ್ಥ್ಯಗಳ ವಿವರಗಳು.
* ನೀವು ಆಯ್ಕೆ ಮಾಡಿಕೊಂಡ ಶಾಲೆಯ ಪ್ರಸ್ತುತ ಕಲಾ ಶಿಕ್ಷಣ ಚಟುವಟಿಕೆಗಳು ಯಾವುದಾದರೂ ಇದ್ದರೆ ಅವುಗಳ ಸಂಕ್ಷಿಪ್ತ ಮಾಹಿತಿ.
* ಆಯ್ಕೆ ಮಾಡಿಕೊಂಡ ಶಾಲೆಯ ಮುಖ್ಯೋಪಾಧ್ಯಾಯರ ಒಪ್ಪಿಗೆ ಪತ್ರದ ಜೊತೆಗೆ ಶಾಲೆಯ ಸಂಪರ್ಕ ಬಿಂದುವಿನ ಹೆಸರು ಮತ್ತು ದೂರವಾಣಿ ಸಂಖ್ಯೆ.
* ಯೋಜನೆಯ ಉದ್ದೇಶಗಳು.
* ಕಾರ್ಯ ಯೋಜನೆಗಳ ವಿವರ.
* ಯೋಜನಾವಧಿಯಲ್ಲಿ ಭಾಗವಹಿಸುವ ಸಂಪನ್ಮೂಲ ವ್ಯಕ್ತಿಗಳ/ಸಮುದಾಯದವರ ವಿವರ
* ಯೋಜನೆಯಿಂದ ಬರಬಹುದಾದ ಅಪೇಕ್ಷಿತ ಫಲಿತಾಂಶಗಳು.
* ಖರ್ಚು– ವೆಚ್ಚಗಳ ವಿವರ.

**ಬಜೆಟ್:**

* ಗರಿಷ್ಠ ರೂ. 2,00,000/– ವರೆಗೆ.
* ಪ್ರಸ್ತಾವನೆಯನ್ನು ಸಲ್ಲಿಸುವವರು ಗರಿಷ್ಠ ರೂ.70,000/–ವರೆಗೆ ಸ್ವಯಂ ಗೌರವಧನವನ್ನಾಗಿ ಪರಿಗಣಿಸಬಹುದು.

**ಪ್ರಸ್ತಾವನೆಯ ಸಲ್ಲಿಕೆ:**

ನಿಮ್ಮ ಅಂತಿಮ ಪ್ರಸ್ತಾವನೆಯು 25 MB ಯ ಒಳಗಿದ್ದು, ಇಮೇಲ್ ಮೂಲಕ ರಾಧಿಕಾ ಭಾರದ್ವಾಜ್, ಕಾರ್ಯಕ್ರಮ ಅಧಿಕಾರಿಗಳು, ಕಲಾಶಿಕ್ಷಣ ಇವರ ಇಮೇಲ್ ವಿಳಾಸಕ್ಕೆ radhika@indiaifa.org ಕಳುಹಿಸಿಕೊಡಿ.

ನಿಮ್ಮ ಇಮೇಲ್ ವಿಷಯ ಇಂತಿರಲಿ: 'ಕಲಾ ಶಿಕ್ಷಣದಡಿ ಯೋಜನೆಯ ಪ್ರಸ್ತಾವನೆ (ಕಲಾವಿದರು)'


ಮಕ್ಕಳ ಸಾಹಿತ್ಯದಲ್ಲಿ ಭರವಸೆ ಮೂಡಬೇಕಾಗಿದೆ:ಡಾ.ಆನಂದ ಪಾಟೀಲ
ಸಂಜೆ ದರ್ಪಣ
ಶನಿ, ಮಂಗಳ ಗ್ರಹ ವೀಕ್ಷಿಸಿ ಸಂಭ್ರಮಿಸಿದ ಮಕ್ಕಳು
ಕಲಿಕೆ ನಿರಂತರ ಕ್ರಿಯೆಯನ್ನಾಗಿಸುವ ಯೋಜನೆ
ಇಂದಿನಿಂದ ಕಲಾಯಾತ್ರೆ ಆರಂಭ: ಬಡದಾನಿ
ಪ್ರಜಾವಾಣಿ
ತ ಕಲಿ– ಕಲಿಸು ಕ
ಮುಖ್ಯಾಂಶಗಳು
ಗಣಿತ ಕಬ್ಬಿಣದ ಕಡಲೆಯಲ್ಲ, ಸವಿಸವಿ ಕಬ್ಬು– ಎಂ.ಎಸ್. ಪೂಜಾರ
and science
verge, says scientist

# ಹೆಜ್ಜೆಗಳು

## ಸರ್ಕಾರಿ ಶಾಲೆಗಳಲ್ಲಿ

ಕಲಾ ಅಂತರ್ಗತ ಪ್ರಯೋಗಗಳು

2023-24 & 2024-25




**ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್**

**ಅಪೂರ್ವ, ನೆಲಮಹಡಿ, ನಂ.259, 4ನೇ ಕ್ರಾಸ್.**

**ರಾಜಮಹಲ್ ವಿಲಾಸ್, 2ನೇ ಹಂತ**

**2ನೇ ಬ್ಲಾಕ್, ಬೆಂಗಳೂರು 5600094**

**ದೂರವಾಣಿ : 8762954080 / 080 2341 4681/ 82**



**This publication is made possible with support from InterGloble Foundation**